ಕರ್ಣಾಟಕ ಕಾವ್ಯಕಲಾನಿಧಿ. ೧೨

ಗೋಪಕವಿಕೃತ

# 'ನಂದಿಮಾಹಾತ್ಮ್ಯಂ'

(ವಾರ್ಧಿಕ ಷಟ್ಪದಿ)

ಪ್ರಥಮ ಸಂಪುಟಂ

(ಸಂಧಿ ೧—೧೧)

ಎಸ್. ಜಿ. ನರಸಿಂಹಾಚಾರ್,

ಗೌರ್ನಮೆಂಟ್ ಕನ್ನಡ ಟ್ರಾನ್ಸ್ಲೇಟರ್, ಎಜುಕೇಷನ್ ಡಿಪಾರ್ಟ್ಮೆಂಟು, ಮೈಸೂರು

ಮತ್ತು

ಮ. ಅ. ರಾಮಾನುಜಯ್ಯಂಗಾರ್,

ಅಸಿಸ್ಟೆಂಟ್ ಮಾಸ್ಟರ್, ವೆಸ್ಲಿಯನ್ ಹೈಸ್ಕೂಲ್, ಮೈಸೂರು

ಇವರುಗಳಿಂದ ಪರಿಷ್ಕರಿಸಲ್ಪಟ್ಟು

ಮೈಸೂರು

ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೯೦೭.

UNIVERSAL LIBRARY
OU_200629
UNIVERSAL LIBRARY

# ನಂದಿಮಾಹಾತ್ಮ್ಯ.

## ಪೀಠಿಕೆ

ಕವಿಚರಿತೆ :—

ಈ ಗ್ರಂಥದ ಪ್ರಥಮಸಂಧಿಯ—

" ಹರುಷವಂ ತಾಳ್ದೀ ಮಹಾತ್ಮೆಯಂ ಪೇಳ್ದನಾ।
ದರದಿ ವಿಶ್ವಾಮಿತ್ರಗೋತ್ರಜಂ ಭೀಮರಥಿ।-
ವರತೀರದೊಳ್ ತೊಳಪ ಪೇಡ ಬುಯ್ಯಾರದ ಕರಣಿಕ ಜ್ಯೋತಿಯಾತ್ಮಭವನು ॥
ಸರಸಿರುಹನೇತ್ರ ಶ್ರೀಮದನಗೋಪಾಲಕನ ।
ಕರುಣದಿಂ ಗೋವಿಂದನೆಂಬೊರ್ವನಂ ... . " (೧—೨೯)

ಎಂಬ ಪದ್ಯದಿಂದ ಈ ಗ್ರಂಥವನ್ನು ರಚಿಸಿದವನು ವಿಶ್ವಾಮಿತ್ರಗೋತ್ರದ ಕರಣಿಕನಾದ ಜ್ಯೋತಿಯೆಂಬ ಬ್ರಾಹ್ಮಣ ಮಗನೆಂದೂ, ಗೋವಿಂದನೆಂಬ ಹೆಸರುಳ್ಳವನೆಂದೂ, ಶ್ರೀಮದನಗೋಪಾಲಸ್ವಾಮಿಯ ಭಕ್ತನೆಂದೂ ತಿಳಿಯಬರುತ್ತದೆ. ಈ ಕವಿಗೆ ಗೋಪನೆಂದು ಪ್ರಸಿದ್ಧವಾದ ಮತ್ತೊಂದು ಹೆಸರುಂಟು. " ಭೀಮರಥಿತೀರದೊಳ್ ತೊಳಪ ಪೇಡ ಬುಯ್ಯಾರದ " ಎಂಬುದರಿಂದ ಕೃಷ್ಣಾನದಿಗೆ ಉಪನದಿಯಾದ ಭೀಮನದಿಯ ತೀರದಲ್ಲಿರುವ ಬುಯ್ಯಾರವೆಂಬ ಗ್ರಾಮದಲ್ಲಿದ್ದವನೆಂದೂ ತೋರುತ್ತದೆ. " ಭೀಮರಥೀತೀರ " ಎಂಬುದರಿಂದ ಒಂದುವೇಳೆ ಷೋಲಾಪುರದ ಜಿಲ್ಲೆಯೇ ಈತನ ದೇಶವಾಗಿರಬಹುದು; ಬುಯ್ಯಾರವೆಂಬುದು ಆಜಿಲ್ಲೆಯಲ್ಲಿ ಪ್ರಸಿದ್ಧವಾದ ಈಗಿನ " ಬಾರ್ಸಿ " ಎಂಬ ಗ್ರಾಮವಾಗಿ ಇದ್ದರೂ ಇರಬಹುದು; ಆಜಿಲ್ಲೆಯಲ್ಲಿರುವ ಪ್ರಸಿದ್ಧವಾದ ಪಂಡರಾಪುರದ ಪಾಂಡುರಂಗನೇ ಈತನಿಗೆ ಪ್ರಸನ್ನನಾದ ಶ್ರೀಮದನಗೋಪಾಲನಾಗಿದ್ದರೂ ಇರಬಹುದು. " ವಿಶ್ವಾಮಿತ್ರಗೋತ್ರಜ " ನೆಂಬುದರಿಂದಲೂ, ಈ ಗ್ರಂಥದ ವರ್ಣನೆಯಿಂದಲೂ ಈತನು ಸ್ಮಾರ್ತಬ್ರಾಹ್ಮಣನೆಂದು ಊಹಿಸುವುದಕ್ಕೆ ಬಹಳ ಅವಕಾಶವುಂಟು.

ಈತನು ಸಂಸ್ಕೃತ ಕವಿಗಳಲ್ಲಿ ಕಾಳಿದಾಸ ಮಲ್ಹಣ ಮಯೂರ ಬಾಣ ಭೋಜರುಗಳನ್ನೂ ಕರ್ಣಾಟಕವಿಗಳಲ್ಲಿ ಕೇಶಿರಾಜ ಪಂಪ ಭಲ್ಲಟರನ್ನೂ (೧.೧೪) ಸ್ಮರಿಸುತ್ತಾನೆ. ಆಧುನಿಕರಲ್ಲಿ ಯಾರನ್ನೂ ಸ್ಮರಿಸಿ ಇಲ್ಲ. ಆದರೂ ಈ ಗ್ರಂಥದ ಶೈಲಿಯು ಲಕ್ಷ್ಮೀಶನ ಜೈಮಿನಿಭಾರತದ (ಕ್ರಿ. ಶ. ೧೬ಶತಮಾನ) ಶೈಲಿಯ ಛಾಯೆಯಾಗಿರುವುದರಿಂದಲೂ, ಅಭಿಪ್ರಾಯವೂ ಅದರಿಂದ ತೆಗೆದಂತೆ ಇರುವುದರಿಂದಲೂ (ಸಂಧಿ, ೧—೧೧, ೧೩, ೨೪, ೨೬, ೪—೫,೬ ಇತ್ಯಾದಿ) ಕವಿಯು ಆ ಜೈಮಿ

ನಿಯನ್ನು ನೋಡಿಯೋ ಈಗ್ರಂಥವನ್ನು ಬರೆದಿರಬಹುದೆಂದು ತೋರುತ್ತದೆ. ಅಲ್ಲದೆ ಈಗ್ರಂಥಕರ್ತನ ಹೆಸರನ್ನು ಈಚಿನ ಕವಿಗಳಾರೂ ಹೇಳಿಲ್ಲ. ಈ ಕಾರಣಗಳಿಂದಲೂ ಮತ್ತು ಈ ಗ್ರಂಥದ ಮೂಲಪ್ರತಿಯು ಮದ್ರಾಸ್ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರೇರಿ * ಎಂಬ ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದಲ್ಲಿ ಸಿಕ್ಕಿದುದರಿಂದಲೂ ಈ ಕವಿಯು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದನೆಂದು ವ್ಯಕ್ತವಾಗುತ್ತದೆ.

ಗ್ರಂಥವಿಚಾರ :—

ಈ ಗ್ರಂಥವು ವಾರ್ಧಿಕಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೫೦ ಸಂಧಿಗಳು ಇವೆ. ಗ್ರಂಥದ ಶೈಲಿಯು ಪ್ರೌಢವಾಗಿದೆ. ಸಂಸ್ಕೃತವು ಹೆಚ್ಚು. ಭಾಷಾಭ್ಯಾಸಿಗಳಿಗೆ ಅತ್ಯಂತ ಉಪಯೋಗವಾಗಿದೆ. ಕವಿಯು ಮೊದಲು ನಂದೀಶ, ನಾರಾಯಣ, ಪಾರ್ವತಿ, ವೀರಭದ್ರ, ಷಣ್ಮುಖ, ನಂದಿ, ಗಣಪ, ಶಾರದೆ ಇವರನ್ನೂ ಕ್ರಮವಾಗಿ ಸ್ತೋತ್ರಮಾಡಿ, ಕಾಳಿದಾಸನೇ ಮೊದಲಾದ ಮಹಾಕವಿಗಳನ್ನು ಸ್ಮರಿಸಿದನಂತರ ನೈಮಿಶಾರಣ್ಯವಾಸಿಗಳಾದ ಶೌನಕ ಪ್ರಮುಖರು ಪುಣ್ಯಜನಕೇತಿಹಾಸಮಂ ಕೇಳ್ವಿಚ್ಛೆಯಿಂದ ಸೂತಪೌರಾಣಿಕನ ಸ್ಮರಿಸಲಾಕ್ಷಣಂ ಆತಂ ಬಂದು, ನಂದಿಮಾಹಾತ್ಮ್ಯವನ್ನು ಹೇಳಿದನೆಂದು ಹೇಳಿ, ಗ್ರಂಥವನ್ನು ಆರಂಭಿಸಿದ್ದಾನೆ.

ಕಥಾಸಾರ :—

ಕೈಲಾಸದಲ್ಲಿ ಪರಮೇಶ್ವರನು “ ಬ್ರಹ್ಮೇಂದ್ರಾದ್ಯರಿಂದೋಲಗಂಗೊಂಡು ಸಭಾಸದರ ನುತಿಭಕ್ತಿವಿನಯೋಕ್ತಿಗಳ ಪರಿಗ್ರಹಿಸಿ ಸ್ವಸ್ಥಾನಕೆ ಅಣತಿಯಿತ್ತು” ಕಳುಹಿದ ಬಳಿಕ, ನಂದೀಶ್ವರಂಗೆ ಪಾರ್ವತೀದೇವಿಯನ್ನು ಕರೆತರುವಂತೆ ಆಜ್ಞೆ ಕೊಡಲು; ನಂದಿಯು “ ಇಂದುಧರನ ರೂಪಂದಳೆದು,” ತೆರಳಿ, ಲೀಲಾವನದಲ್ಲಿ ಸಖಿಯರಜತೆಯಲ್ಲಿ “ಕಲ್ಪವನೀಜಾತಮಂಟಪದಲ್ಲಿ” ವಿಜಯಂಗೈದಿರುವ ಭವಾನಿಯಂ ಕಂಡು, ಸಂತುಷ್ಟನಾಗಿ, “ ಅಗಜೆಯ ಸುಮೂರ್ತಿಪಾದಾದಿಕೇಶಾತಿಶಯ ಸೌಂದರ್ಯಮಂ” ನೋಡಿ, ವರ್ಣಿಸುತ್ತ, “ ಸಮ್ಮುಖಕೆ ನಡೆತರಲು,” ಗಿರಿತನುಜೆಯು ಇವನನ್ನು ಶಿವನೆಂದೇ ತಿಳಿದು, “ ಎಳ್ವುಜ್ಜುಗಂಗೈಯ್ವ ಭಾವಮಂ ಕಂಡು, ಕೆಟ್ಟನಕಟೆನುತ, ಭಯದಿಂದ ಕಂಪಿಸಿ,” ಕೈಮುಗಿದು, ಬಹಳವಾಗಿ ಸ್ತೋತ್ರಗೈದು, “ ಪ್ರದಕ್ಷಣೆವಂದು ” ಸಾಷ್ಟಾಂಗಪ್ರಣಾಮವನ್ನು ಮಾಡಿ, “ ಪಾದ ಪದ್ಮಯುಗದಲ್ಲಿ ಅವಿಚ್ಛಿನ್ನ ಭಕ್ತಿ ” ರೂಪವಾದ ವರವ ಪಡೆದು, ಆಕೆಯನ್ನು ಪರಶಿವನ ಸಮೀಪಕ್ಕೆ ಕರೆತಂದು ಬಿಟ್ಟನು. ಬಳಿಕ, “ ಈಶಿವನಿತ್ತ

* ಕ್ರಿ. ಶ. ೧೭೯೯ ರಲ್ಲಿ ಶ್ರೀರಂಗಪಟ್ಟಣವು ಇಂಗ್ಲೀಷರವರ ಕೈವಶವಾದಾಗ ಅಲ್ಲಿ ಸಿಕ್ಕಿದ ಪುಸ್ತಕಗಳನ್ನು ಸಂಗ್ರಹಿಸಿ ಈ ಭಂಡಾರವು ಮಾಡಲ್ಪಟ್ಟಿತು.

ಸಾರೂಪ್ಯ ಸಂತಾಪವಮಾಗಿಸಿತೆಂದು ಚಿಂತಾತಂಕಕೊಳಗಾಗಿ, '' ತನುವಂ ತಪದಿಂದ ದಂಡಿಸಿ ಪರಶಿವನ ಮೆಚ್ಚಿಸಿ, ಮುನ್ನಿನ ರೂಪವ ಹೊಂದುವೆನೆಂದು ದೃಢನಿಶ್ಚಯ ಮಾಡಿ, ಗಣನಾಥನಾದ ಕೂಷ್ಮಾಂಡನಲ್ಲಿ ಈ ವಿವರವನ್ನು ತಿಳಿಸಲು; ಆತನು—ಈ ಚಿಂತೆಯನ್ನು ಬಿಡು, ''ಗಿರಿತನುಜೆ ಶಿವಸಾಕಾರಮಿರಲೇಳಬಗೆದಳ್.'' ಅದರಿಂದ ''ನಿನಗೇನು ? '' ಎಂದು ಸಂತೈಸಿದರೂ ಕೇಳದೆ—''ಶಿವನ ತಪಗೈದು ಮೆಚ್ಚಿಸಿ, ಅಂಗಭೂಷಣವಾದ ಸಾರೂಪ್ಯಮಂ ಸಮರ್ಪಿಸಿ, ಬಳಿಕ ''ನಿರ್ಮೋಕಮಂನೂಂಕಿದ ಫಣಿಯಂತೆ ಮುನ್ನಿನಾಕೃತಿವೆತ್ತು'' ನಿಮ್ಮ ಸಂದಣಿಗೆಸಲ್ವೆನು. ಆದರಿಂದ ಭೂಲೋಕಗಳ ಪಾವನಾಶ್ರಮಗಳ ಮಾಹಾತ್ಮ್ಯವನ್ನು ಕರುಣಿಸಿ ಪೇಳಿ--ಎಂದು ನುಡಿಯಲು; ಕೂಷ್ಮಾಂಡನು ''ತಾ ನುನ್ನ ತಪಕೆಂದುಮೀಧರೆಯೊಳು ತಿರುಗಿ ಕಂಡಿರ್ದ'' ಶ್ರೀಶೈಲ, ಕೇದಾರ, ವಾರಣಾಸಿ, ಕಾಂಚಿ ಮೊದಲಾದ ಶೈವಸುಕ್ಷೇತ್ರಗಳ ಪ್ರಭಾವಗಳನ್ನು ವಿಸ್ತರಿಸುತ್ತ ಬಂದನು.

ಏಳನೆಯ ಸಂಧಿ — (ಪದ್ಯ. ೩೪) ೫೭

ಹರ ಗಿರಿಜೆಯುಂ ಕಳುಹಲಾನಂದಿ ಬೇಗ [illegible]
ಕ್ಷಣದೊಳೈತಂದು ಸವನದ್ವಾರದಿಂ ಮಹೇ।
ಶ್ವರಮೂರ್ತಿಯುಂ ನೋಡುತಾರತಿಯುಳಿರೊಳಪೊಕ್ಕು ಸಮ್ಮುಖಕೆ ನಡೆತಂದನು

ಎಂಟನೆಯ ಸಂಧಿ — (ಪದ್ಯ. ೫೮) ೬೧

ತುಳ್ಕಲಾನಂದಾಶ್ರುನೇತ್ರದೊಳ್ ಗಾತ್ರಮುಂ।
ತಳ್ಕೈಸಲುಂ ಪುಳಕದಂಗುಳಂ ನಂದಿ ಮನ।
ದಕ್ಕಿಂ ನೋಡಿದಂ ಪಾರ್ವತಿಯ ಸನ್ಮೂರ್ತಿಯುಂ ಕೀರ್ತನಂಗೆಯ್ಯುತ॥

ಒಂಬತ್ತನೆಯ ಸಂಧಿ — (ಪದ್ಯ. ೬೮) ೭೩

ಗಿರಿಕನ್ಯೆಯ ಸಮ್ಮುಖಕೆ ಸಾರೂಪ್ಯಸೌ।
ದರದಿಂದ ನಡೆತರಲು ಶಿವನೆಂದು ತಿಳಿದಿರದ।
ನಱಿದು ನಸ್ಕರಿಸುತೊಡನೈತಂದು ನೊಂದುಮಾನಂದಿ ತಪಕನುವಾದನು॥

ಹತ್ತನೆಯ ಸಂಧಿ — (ಪದ್ಯ. ೫೨) ೮೫

ಬಿಸಗೊಂಡ ನಂದಿಗಾ ಕೂಷ್ಮಾಂಡಗಣ ಸಮುಂ।
ಬಸದಿಂದ ಪೇಳ್ದ ತಾ ಮುನ್ನ ತಪಕೆಂದುಮಿಾ।
ವಸುಧೆಯೊಳು ತಿರುಗಿ ಕಂಡಿರ್ದ ಸುಕ್ಷೇತ್ರಪ್ರಭಾವಮುಂ ವಿಸ್ತರದೊಳು॥

ಹನ್ನೊಂದನೆಯ ಸಂಧಿ — (ಪದ್ಯ. [illegible]) [illegible]

[illegible]ಮ್ಮಾಂಡಗಣ [illegible] ಪ್ರಸಲ್ಲಿನ।
ಗ್ರೀಷ್ಮನಸ್ಥಿ[illegible]ದಿಗಂಡೊಲ್ದು ಪೇಳ್ದನಾ।
ಕೂಷ್ಮಾಂಡಪರ್ವತದ ಮಹಿಮೆಯುಂ ಕೇಳ್ದವರ ಮೋಕ್ಷನಿಶ್ಚಯ[illegible]ವಾಗೆ॥

॥ ಶ್ರೀಃ ॥

## ಗೋವಿಂದಕವಿ ವಿರಚಿತ

# ನಂದಿಮಹಾತ್ಮ್ಯ.

॥ ವಾರ್ಧಿಕ ಷಟ್ಪದಿ. ॥

ಶ್ರೀನಗಸುತಾವಾಕ್ಯ ಕೈಲಾಸದಿಂ ಶಿವಾ ।
ಕಾಶಕಲತಾಂಗಸರಿಜಸಿತಕುಚಕುಟ್ಮಲಪಿ ।
ತಾಸದಿಂ ಪಾರ್ವತೀಲಲಿತಪ್ರಮದವನಸರಹಂಸಗಮನೆಯೊತ್ತಾ ಪದಿಂ ॥
ಮೇನಾತ್ಮಜಾತಾಂಬಿಕಪ್ರಸುರದಿಂದಂ ಭ ।
ವಾನಿಯು ಸವಿನಯತರವಹಾದ ವಚನಮಾವನೋ ।
ದ್ಯಾನದೊಳ್ ಕ್ರೀಡಿಸುವ ನಂದೀಶಕ್ಷೇತ್ರಸೊಲ್ಪೀಗೆ ಸಮುಗಿಪ್ಪಾರ್ಥನಂ

ಉಷ್ಣಕರಶಶಿಧನಂಜಯನೇತ್ರ ವೈಧಾತ್ರ
ಜಿಷ್ಣುಮುಖ್ಯಾಮರಜಯಸ್ತೋತ್ರಸತ್ಪಾತ್ರ ।
ಕೃಷ್ಣಸಿತಫಣಿವಿಭೂಷಿತಗಾತ್ರ ಸುಚರಿತ್ರ ಗೋತ್ರಪುತ್ರೀಕಳತ್ರ ।
ಕೃಷ್ಣಸುತವನವೀತಿಹೋತ್ರ ಘನಮಿತ್ರ ಘನ ।
ತೃಷ್ಣಾರಹಿತ ವಿಶ್ವಸೂತ್ರ ಸುಪವಿತ್ರ ವ ।
ರ್ಧಿಷ್ಣು ಸಲ್ಲಲಿತದಿಕ್ಪತ್ರ ವೃಷಪತ್ರ ನಂದೀಶ ರಕ್ಷಿಸು ಸಂತತಂ ॥ ೧ ॥

ಷಢ್ವಾಸ್ಯಸುತಾಸ್ಯಕಾರಣ ಗಣನುತ ತ್ರಿಪುರ ।
ರಾಢ್ಯವತರಂಗಿಣೀವಿಸ್ತೃತಮಸ್ತಕ ನೆ ವ ।
ರಾಢ್ಯಸಿತಾಚರ್ಚಿತಾಂಗಸುಮ ಮದಕದಂತೀಶಮುಖನಾದ ಸುಪ್ರಕಾಶ ;
ರುಢ್ಯಯುವಿಮೂಲ ವಕ್ಷಬ್ರಹ್ಮಮಸ್ವಾಮಿ
ದ್ವಿಢ್ಯೋಗಿಭೂಷ ಸಿತ್ಸ್ಯಾಸ್ಯದಮಯ ಸುಧಾ
ತ್ರಿಢ್ಢಕ ಕಲಿತೋತ್ತಮಾಂಗ ಕರುಣಾಪಾಂಗ ನಂದೀಶ ಕಾಯ್ದು ಪೊರೆಯುತಿರು ।

ಕ್ಷೀರಾಬ್ಧಿಕನ್ಯಾಮುಖಾರಾಜಿತಾಂಬುರುಹ |
ಸೂರ ಲಕ್ಷ್ಮೀಶನಯನನಿಶಾಕರುಕ್ಕೈರವಹಾರ್ವ |
ಠೀರವಮಣಿ ಮಾರಜನಕೀರುಚಿರಕಬರೀಮಯೂರವೊಸ್ಫಾನ್ಯಾಮಲ ||
ಭೂರಿಸುರವೈರಿಪ್ರತನಾಶಮುಕ್ಷಂತಸಕು |
ಕಾರ ಭವದೂರ ಗುಣಸಾರಪ್ರಸ್ಫೂರಾವು |
ನಾರಾಯಣನೆ ಕುಡು ಸುಮತಿಯ ಸಜ್ಜನರ ಸಂತತಿಗೆ ಕೃತಿ ಸಲ್ಪಂದದಿ || ೪ ||

ಶ್ರೀವಿಭವಕಾರಣಂ ಸುಪ್ರಸನ್ನಾನಿಮಿಷ
ಸೇವಿತಂ ಮುಕ್ತಾಮಯಂ ಸುವಿಸ್ತಾರಮುಖಿಂ |
ಮಹಾವಲಂಬಂ ಸಕಲಭುವನಾಶ್ರಯಂ ಸುಗೋತ್ರೈಕಪಾಲಂ ಸಂತತಂ ||
ಭಾವಿಸಲು ಶ್ರೀವರಾಹನಾರಾಯಣಾಂಬುನಿಧಿ
ಯೋಗಿಸು ಮತ್ತಾಸ್ಪದಿಪ್ರಸುಲಭಗೆ ಕರುಣಾಪ್ರ
ಭಾವಬಂಧಪ್ರದಮುಕ್ತ ಸಾಗಸುಗೆ ಬಿಸ್ಪತಮುಕ್ತ್ರಶ್ರೊಲು ಜಗದೊಳು ||

ಯುತಭಾಗ್ನಿಸನ್ನೇತ್ರಸೂತ್ರಾಮಖಾಮರ
ಕ್ಷಿತಿರುಹಾಪ್ರತಕಲ್ಪಲತೆಯ ಸಿಮವದ್ವ್ರಜ
ಸುತೆಯ ಸಂತತವಯಾಸ್ಕ್ರತೆಯ ಭಕ್ತಶ್ರಿತೆಯ ಸತಿಪವಿತ್ರತೆಯ ಖುತೆಯಾ||
ಪ್ರತಿಕೆಳೀಬಿಸನ್ನತೆಯ ಸತ್ಪವಿತ್ರತೆಯ ಪಾ
ಸ್ಪತೆಯ ಧವಳಿತೆಯ ಶಿವಕ್ರತೆಯ ಶೋಭಿತೆಯ ಪಾ |
ರ್ವತಿಯ ಪಾರ್ತ್ರಿಪುರಧ ತಿಯೋಗಾಂತುತಿಸುವಂ ಮತಿಯನೊಲಿದೀವಳಾಗಿ||

ಧಾತ್ರಸುತವಾದರತಸತ್ರಯಂ ಪಾವನತ
ರಿತ್ರಯಂ ಶ್ರುತಿವಿನುತಪಾತ್ರಯಂ ಸಂತತಪ
ವಿತ್ರಯಂ ಸನ್ಮುಣಾಕರಚಿತ್ರಯಂ ಶರಣಜನಮಿತ್ರಯಂ ಮರಕತನಿಭ ||
ಗಾತ್ರಯಂ ಕಮಲದಳನೇತ್ರಯಂ ವರವಿಷ್ಣು
ಸೂತ್ರಯಂ ಭವತ್ರಾಣವಿತ್ರಯಂ ಪಕ್ಷ್ಮ
ಯಾತ್ರಯಂ ಭಜಿಪೆಕಾಲತ್ರಯಂಬಿಮಗೋತ್ರಪುತ್ರಿಯಂ ಮತ್ಕೃತಿಯೊಳು

ಕನ್ನಡಂಗೆಯ ಛಳಿಛಳಿ ಛಬಿಲ್ ಛಬಿಲೆಂಬ |
ಪಣ್ಣಂದದಿಂದೆಯೊಳ್ ನೆಲನಾಲಿಬಾಯ ವೊ |
ಗಣ್ಣ ಮಮ್ಮಿಕ್ಕಿ ಚಿನ್ನದ ಜೊಂಪೆಯನೆ ಪಲಗೆಕಣುಗದಿಂ ಕುಬಿಬಿರಿಯುತ ||

ಕರ್ಣಂಮನಂದಳೆದಗಿಳಿಸಿ (?) ಜನ್ಮಂಗೈವ |
ಜಾಣ್ಗಡಲ್ ವಕ್ಷಸಂ ತುಷುಕಿ ಕಾಷಾಯಿಂ ಕೆಡಪಿ |
ಗೋಣ್ಗೊರೆವ ವೀರಭದ್ರಂ ಮುದ್ರಚಿತಕೃತಿಗೆ ಮಾಳ್ಕೆ ಸಸ್ಮಿತಗಳವನು ||
ಮಾತೃಪಿತೃಗಳ ವದನದೊಳ್ಗೆತ್ತು ಬಿಸಿವಾ |
ಪುತ್ರಂ ಭವನುವಿಕ್ರಮಂದಳವನನಿಪ್ರದು ಧ |
ರಿತ್ರಿಯೊಳ್ ನಿಜಮಾನಸಂದಜನಿ ನಿಷಾಧವನ ಸ್ತ್ರೀಗ್ಯಾಗ್ರ್ಥರೀರೊಳಗಂದಯಿಸಿ ||
ಚಿತ್ರಮೆನಲೀಳನೆಯ ಬನದೊಳ್ ಕಡಗಿ ನಡೆದು
ಶತ್ರುತಾರಕನ ನೀಳ್ದಕ್ಕಿದಲ್ಲುಮೆಗ ಕೃಪಾ |
ನೇತ್ರದಿಂ ಮತ್ಕೃತಿ ಚಮತ್ಕೃತಿಯ ತನ್ನುದರೆ ಯಿರಾಕ್ಷಿ ಸಾಪೇಕ್ಷೆಯಿಂದ ||೯
ಮುಗ್ಧಪಾದಾವಾರಹೀರಮುಕ್ತಾಫಲ |
ಸ್ನಿಗ್ಧತಾರಾವಾರಪಾದದಪಹೀರಹರ |
ವಾಗ್ಧನವಕುಕ್ಷಿ ಪಾರದನೀರದಪ್ರಭಾಸಾರಮಂ ಸ್ಕೃಜಿಸಿದಂತೆ |
ದಿಗ್ಧವಳವಾಗಿಸೆವಾಸಿಯ ಕೃಪೆಯಿಂದೆ |
ಮುಗ್ಧನಾದೆನ್ನಂ [ವಿದಗ್ಧನೆಂದೆನಿಸಿ ನು |
ಸ್ನಿಗ್ಧಪ್ರದಯಂ ಮಾಡಿಗೀ] ನಮ್ರತಾಪ್ನಂ ಜಗತ್ಸ್ತೀರ್ಣಮಾಗುವಂತ || ೧೧
ಅಂಗಜನ ಜಯಿಸಿದನಘಂಗನಂ ಭವಭಕ್ತ |
ಸಂಗನಂ ಮಹಿಮಾತರಂಗನಂ ನಮ್ರಗೌರೀ |
ತುಂಗನಂ ವಿಮಲಾಂತರಂಗನಂ ನತ್ಕೃಪಾಪಾಂಗನಂ [ಶಿವಸಮಾಜ |
ಭೃಂಗನಂ ಭವಿಜ] ತನತಂಗನಂ ಶೀಲನು |
ಯಾಂಗನಂ ವಿನಯದಿ ಮನಂಗೊಂಡು ಕೃತಿಮುಖದೊ |
ಳಂ ಗಾಡಿಯಿಂ ಸುತಿಸಿದಾನೊಲ್ದು ಸುಕೃತಪ್ರಸಂಗಿಯಂ ಭೃಂಗೀಶನಂ ||೧೧||
ಚಾರುಮಾಣಿಕ್ಯಮೌಳಿಪ್ರಭಾಪಟಲಿ ಶೃಂ |
ಗಾರಂ ತ್ರಿಯಕ್ಷದಿಂ ರೌದ್ರಂ ಧ್ವಿಷವದನಾ |
ಕಾರದಿಂದದ್ಭುತಂ ಫಣಿಬಂಧದಿಂ ಭಯಂ ವಿಘ್ನವಿಧ್ವಂಸನದೊಳಂ |
ವೀರಂ ನಿಜಾಶ್ರಿತರೊಳಂ ಶಾಂತಿಮಾಭಯದೊಳ್ |
ಕಾರುಣ್ಯಮಾತುಮಾಪನದಿ ಹಾಸ್ಯಂ ಮಾರಿದ |
ಘೋರೆಯಿಂ ಭೀಭತ್ಸರಸಮೆಸೆವ ಗಣಪ ಮಾಡೀಕೃತಿಗವಿಘ್ನತೆಯನು ||೧೨

ಮಿಱುಪ ಮತ್ಸ್ಯಾಕೃತಿಯಿಂ ಕೂರ್ಮಪದದಿಂ ಸಮು |
ದ್ಧರವರಹಚಕ್ರದಿಂ ಮಿಥುನಕುಚದಿಂ ಸಿಂಹ |
ವರಮಧ್ಯದಿಂ ವಾಮನಾಭಿಯಿಂ ರಾಜವಿಜಿತಾಸ್ಯಾಭಿರಾಮತೆಯೊಳು ||
ಉರುಕೃಷ್ಣಕಚದಿಂ ಪ್ರಬುದ್ಧೋರುಹಂಸಭಾ |
ಸುರಕಲಿತಯಾನದಿಂ ಚಕ್ರಿಯವತಾರಾಸ್ಯ |
ದಿರವಾಂತು ಮೆಱೆವ ಶಾರದೆಯೆನ್ನಕೃತಿಗೆ ಕೃಪೆಯಿಂ ಮಾಳ್ಕೆ ಮಂಗಳವನು ||

ಜನಮಿತ್ರಕಾಳಿದಾಸನ ಕಲಾಸಿದ್ಧಿ ಮಯೂ |
ರನ ಮಂಗಳಚರಿತ್ರ ಮಲುಹಣನ ಸೌಮ್ಯಬಾ |
ಣನ ಚತುರಸಂಜೀವರತ್ನ ಭೋಜನ ಕವೀಶ್ವರ ಕೇಶಿರಾಜನೊಲ್ದ ||
ಘನಶಬ್ದಶೌರಿ ಪಂಪನ ಭೋಗಿ ಭಲ್ಲಟನ |
ವಿನುತಸತ್ಕೀರ್ತಿ ಶುಕರೂಪನಮಿತಾವರೆಯ |
ನೆನೆದುಪಕ್ರಮಿಸೆ ಕೃತಿಗವರೊಳ್ ನವಗ್ರಹಂ ಬಲವಂದು ಪೊಂಪೀಯುವ್ವೇ ||

ಚತುರಾಸ್ಯರುದ್ರಲಕ್ಷ್ಮೀಪತಿಯನಂತರು |
ನ್ನತಸತ್ಯಲೋಕಕುತ್ಕೀಲಕೀಲಾಲಸಿದ್ಧಿ |
ವಿತಳವಂ ಸೌರಲೆಮ್ಮಱುನರಾರೆಂದು ಸುಕವೀಂದ್ರಾಭಿಧಾನವಾಂತು ||
ಕೃತಿಕರ್ತರೆನಿಸಿ ವಿಶ್ರುತರಾಗೆ ಲೋಕದೊಳ್ |
ನುತಿಸವರಾರ್ ಮನೋಮುದದಿಂದ ಕಾವ್ಯಪ |
ದ್ಧತಿಯೊಳಾನಭಿವಂದನಂಗೈದು ಮುಂದೆ ಪದಸಂದರ್ಭಮಂ ಸಾಗಿಪೆಂ ||೧೪||

ತನುವಿಲ್ಲವಲ್ಲಿ ಪ್ರಾಣಪ್ರತಿಷ್ಠೆಯ ಕಟ್ಟೆ |
ಯನುಗೊಳಿಸದಾಬು ರಸಸ್ಥಾಪನೆಯ ಭಿತ್ತಿಯೊಂ |
ದಿನಿಸಿಲ್ಲವತಿಚಿತ್ರಮಂ ರೂಪುದೋಱಿವೆಡೆಯೊಳ್ ಪಲವಲಂಕಾರವಂ ||
ಮನೆಯಿಲ್ಲವರ್ಣಸಂಚಿತವನುಂ ಮೇರೆಯಿರ |
ದನುಪಮಕ್ರಿಯೆಗಳಂ ನಡೆಯಿಪ ಕವೀಶ್ವರರ |
ಘನತೆಯಂ ಬಣ್ಣಿಸುವರಾರಾನೆ ಪೋದುವೇ ಬೀದಿಯಲ್ಲವೆ ಜಗದೊಳು ||೧೫

ಚಿತ್ರಚಾತುರ್ಯಛಂದೋಬಂಧ ಸಂಧಿ ವರ |
ಮಿತ್ರತ್ವ ರಸ ರೀತಿ ಭಾವ ಗುಣಗಣ ಕಥಾ |
ಸೂತ್ರ ಸುಕಲಾಕ್ರಿಯಾಲಂಕಾರ ದೇಶೀಯ ದುಷ್ಕರಪ್ರಾಸನೇಮಂ ||

ಸತ್ರಾಣಯತಿಗತಿ ನಯಂ ಸುಲಕ್ಷಣದಿಂ ವಿ |
ಚಿತ್ರಮೆನೆ ಪದವನಿಡಲಱಿಯದಾಂ ಷಾಣಿಶತ |
ಪತ್ರಮಂಮುಗಿದುಬಿನ್ನೈಸುವೆಂಸುಕವಿಜನರೊಲಿದೊಪ್ಪುಗೊಂಬುದೆಂದು ||
ತೆರೆಮಱೆಯೊಳಿರ್ದವಂ ನುಡಿಯೆ ಪಾವೆಗಳಲಿವೊ |
ಲಱಿಸುವುವು ಜಗದೊಳಂತೆನ್ನ ಹೃದಯಾಬ್ಜದೊಳ್ |
ತಿರ ನಿಂದು ಶ್ರೀವಿಷ್ಣುಮದನಗೋಪಾಲ ಲೀಲಾಮಾತ್ರವಿಂ ಚಿತ್ರದಿಂ ||
ಸರಸಕವಿತೆಯ ಪೇಳಿಸಿದ ಸ್ವತಂತ್ರದೊಳು ವಿ |
ಸ್ತರಿಸಿದವನಲ್ಲವೆಂದಱುವು ಲಾಲಿಸಿ ಲಲ್ಲೆ |
ಗರೆದೀಪ್ರಬಂಧಮಂ ತಿದ್ದಿ ಮುದ್ದಿಸಿ ಕೇಳ್ದರದು ಸವಾಲಕ್ಷ್ಯವೆನಗೆ ||೧೮||
ಬಿಸದೊಳುದಯಿಸಿ ಬಹಳಕಠಿನತ್ವಮಾಂತಪ |
ನಿರ್ಘಶ ಕನಕನೀವನಂಗೈವ ಮಣಿಭೂಷಣ |
ಪ್ರಸರಮಂ ಧರಿಯಿಸಲ್ ದೂಷಣಮದೆಂದೊಲ್ದು ತನ್ಮಂಡನಾವಳಿಗಳ ||
ಬಿಸುಡಿಸಿ ಮಹೀಯಮಾಗ್ರಸದೊಳುದಯಿಸಿ ಮೆಲ್ಲ |
ನೊಸೆದಮೃತಸೇವನೆಗೆ ಸಂದ ಕೃತಿರತ್ನದಾ |
ಪಸದನವನಳ್ತಿಯಿಂ ತೊಟ್ಟಿಸುವೆಂ ನೆರೆ ಕೇಳ್ದು ಸಕಲಸುಕಲಾವಿದರ್ ||೧೯||
ವರಮಧುವ್ರತಗುಣವಿದೂರ್ಣದೇಂ ಸೌರಭ್ಯ |
ಪರಿಪೂರ್ಣಚಂಪಕದಲಗೂರ್ಣಾಯದೆ ಚಕೋರ |
ದಿರಸವಿರಾಂಟಿನೊಡೆಸುರನದಿಜಲಕೇಂತೊಲ್ಲ ಮೊಯೆಕಾಕಮದುಸವಿಯದೆ ||
ಇರುತಿರಲ್ ಮಾವನ್ತ ಪಳಿಯೆ ತಿಳಿಯಕ್ಕೆ ಕಾ |
ಪುರುಷರಾಲಿಸದಿರೆ ಸವಿಂಸರಸಚಿತ್ರಾರ್ಥ |
ಭರಿತಕಾವ್ಯಂ ಸುಜನಸೇವ್ಯ ಸುಪ್ರಾಪ್ಯವಾಗದೆ ಮಹೀಮಂಡಲದೊಳು ||
ಚಾರುತರಮಲ್ಲಿಕಾಮಾಲಿಕೆಯ ಸೌಗಂಧ |
ನಾಱಿಗಳೊಸೆವವೊಲ್ ಮುಖಮುಚಂದನದ ನವ |
ಸಾರವ ಭುಜಂಗಮಂ ಬಲ್ಲವೊಲ್ ಸುಧೆಯ ರಸದಿಂಪನಾದೇವತೆಗಳ ||
ವಾರ ಬಲ್ಲಂತೆ ಕಾಂತೆಯ ಕಲಾಪ್ರೌಢಿಮಂ |
ನೀಱ ಬಲ್ಲಂತೆ ಯೀಸುಪ್ರಬಂಧದ ಸವಿಯ |
ಸಾರಜ್ಞ ಬಲ್ಲಂತೆ ಮಜ್ಜೀವಿಗಳ್ ತಿಳಿಯಬಲ್ಲರೆ ಮಹೀತಳದೊಳು ||೨೦||

ಪರಿಪಕ್ವಫಲದಿಂಪ ಗಿಣಿಯಂತೆ ಗೀಜುಗನ |
ಮಱು ಬಲ್ಲುದೇ ಕಲಾಕಾಂತೋದಯದ ಸೊಗಸು |
ಶರಧಿಯಂತುಱದ ಜೊಂಡೆಗಳು ಬಲ್ಲವೆ ಷಡ್ರಸಾಸ್ವಾದವೈದೆ ಜಿಹ್ವೆ ||
ಅಱಿವಂತೆ ಕಿಱುನಾಲಗೆಯು ಬಲ್ಲುದೇ ದಿವಾ |
ಕರನ ಸತ್ವವ ಕಮಲವಱಿವಂತೆ ಗೂಗೆಗಳ್ |
ನೆಱೆ ಬಲ್ಲವೇ ರಸಿಕಕೃತಿರಸವ ಬಲ್ಲಂತೆ ಕುಜನರಱಿವರೆ ಧರೆಯೊಳು ||

ವರಹಂಸೆಯಂತೆ ಮೃದುಪದಗತಿಗಳಿಂದ ಭಾ |
ಸುರರಾಜಶುಕನಂತೆ ಮಧುರೋಕ್ತಿಯಿಂದ ಭೂ |
ವರಗೇಹದಂತೆ ಬಹುಭಾವನಾಚಿತ್ರಬಂಧಗಳಿಂದ ಮಧುವಿನಂತೆ ||
ನಿರತಸುಮನೋಲ್ಲಾಸದಿಂದ ಸತ್ಫಲದಂತೆ |
ಪರಮನವರಸದಿಂದ ಪ್ರಭುವಿನಂತಧಿಕಾರ್ಥ |
ಭರಿತದಿಂದೆನ್ನ ಕೃತಿ ಕ್ಷಿತಿಗಲಂಕೃತಿಯಾಗಿ ರಾಜಿಪುದು ಸೋಜಿಗವೆನೆ ||೧೩||

ಸುರಭೂಜದಂತೆ ಕಾಮ್ಯಪ್ರದಂ ಸರಸಿಜಾ |
ಕರದಂತೆ ರಾಜಹಂಸಪ್ರಿಯಂ ಬನದಂತೆ |
ನಿರತಕವಿಜೀವನೋಲ್ಲಾಸಂ ಹಿಮಾಂಶುಮಂಡಲದಂತೆ ವಿಬುಧಸೇವ್ಯಂ ||
ಸುರಭಿಯುತಸುಮನಮಂಜರಿಯಂತೆ ಷಟ್ಪದೋ |
ತ್ಕರಸಮಾಶ್ರಯಮತುಲಸತಿಯು ಸುಕಟಾಕ್ಷದಾ |
ತ್ತೆಱದಂತೆ ಲೋಕಚಿತ್ತಾಕರ್ಷಣಂಗೆಯ್ವುತೆಸೆವುದೀ ಕೃತಿ ಧರೆಯೊಳು ||೧೪||

ವರಲಕ್ಷಣದಿ ಕಲಾಪೂರ್ಣದಿಂ ಚಂದ್ರಮನ |
ಸಿರಿಯಂತನಂತಸರಿಶೋಭಿತಾಲಂಕಾರ |
ವರಗಣಪ್ರಚಯದಿಂ ಶಿವನಂತೆ ಘನರಸಸಮೇತದಿಂ ಚಿತ್ರಪದದಿಂ ||
ಮಿಱುಪ ಜಲಧರಪಟಲದಂತೆ ಸಿದ್ದೋಷ ಭಾ |
ಸುರತೆಯಿಂದಿನರಾಜನಂತೆ ಮತ್ಕೃತಿ ಬುಧ |
ಗುರುತರಾನಂದಮಂ ಸಾರ್ದು ತಿರ್ಕುಳಿಗೊಳ್ದೆಮನಮಂ ಮಹೀತಳದೊಳು ||

ವರಮಂಜುಮುಹಿಮಾವೃತೋನ್ನತಕಲಾತಿಶಯ |
ಭರಿತವಿಮಲಾಮೃತಮಯಾನಂತಚಾರಿತ್ರ |
ನಿರುಪಮ ಸುಶ್ಲೋಕಪ್ರಸನ್ನಸುಮನೋಹರ್ಷವಾರ್ಧಿಯುಂ ಪೆರ್ಚಿಸುತಿರೆ ||

ಪರಿಪೂರ್ಣಲಲಿತಕೃತಿಚಂದ್ರೋದಯಂ ಮನೋ |
ಹರವಾಗಿ ದಿಗ್ವಲಯದೊಳ್ ಪ್ರಕಾಶಿಸಲು ಕಾ |
ಪುರುಷಮುಖಪಂಕಜಾತವ್ರಾತಂ ಕೊರಗೆ ರಂಜಿಸುವುದೊಲ್ದತಿಶಯದೊಳು
ಮಿಱುಪ ಲಘುಗುರುಪದವಿಭಕ್ತಿಯಿಂ ಸತ್ಕ್ರಿಯಾ |
ಚರಣೆಯಿಂದಮಲಲಿಂಗಜ್ಞಾನದಿಂ ಸಮು |
ದ್ಧರರೀತಿಭಾವದಿಂ ಗುಣಗಣವಿಲಾಸದಿಂ ಪರರರ್ಥಮಂ ಬಗೆಯದಾ ‖
ನಿರತನಿರ್ದೋಷದಿಂದಮೃತಮಯವಾಕ್ಯದಿ |
ಸ್ತರದಿ ಸಲ್ಲಕ್ಷಣಾನ್ವಿತವಾಗಿ ಮತ್ಕೃತಿಯು |
ಹರಭಕ್ತನಂತೆ ದುರ್ಜನರಿಗೆಡೆಗೊಡದೆ ರಾರಾಜಿಪುದು ಸೋಜಿಗವೆನೆ ‖೨೭
ಸತಿಯು ಮೃದುಪದದ ಸೋಂಕಿಂದಸುಗೆ ತಾಂ ತಳ್ತು |
ಕ್ಷಿತಿಗಲಂಕೃತಿಯಾಗಿ ತೋರ್ಪಂತಿರೆನ್ನ ಸ |
ತ್ಕೃತಿ ಕಲಾವತಿಯು ಸಲ್ಲಕ್ಷಣಾನ್ವಿತವಾದ ಪದಪಲ್ಲವದ ಸೋಂಕಿನಿಂ ‖
ಅತಿಶಯಾತ್ಮಕಪದಾರ್ಥದ ಮದಂ ನಲಿದು ವಿಕ |
ಸಿತವಾಗಿ ಪಲ್ಲವಿಸದೇ ಎನ್ನ ಬಾಲಭಾ |
ಷಿತಮಾರ್ದವಂ ಸಕಲಜನಮನಾಶ್ಚರ್ಯಭಾಜನಮೆನಾಗಿಸದಿರ್ಪುದೇ ‖ ೨೮ ‖
ಪರುಷಮಂ ತಾಳ್ದಿಮಹಾತ್ಮ್ಯಮಂ ಪೇಳ್ದನಾ |
ಪರದಿ ವಿಶ್ವಾಮಿತ್ರಗೋತ್ರಜಂ ಭೀಮರಥಿ |
ವರತೀರದೊಳ್ಸ್ವರ್ಗವೆನಿಪ ಶಿರಡ ಬಿಜ್ಜರವ ಕರಣಿಕ ಜ್ಯೋತಿಯಾತ್ಮಭವನು‖
ಸರಸಿರುಹನೇತ್ರ ಶ್ರೀಮದನಗೋಪಾಲಕನ |
ಕರುಣದಿಂ ಗೋವಿಂದನೆಂಬೊರ್ವನಂ ಪ್ರಿಯದಿ |
ಪರಮಸತ್ಪುರುಷರಾಲಿಸಿ ಲಾಲಿಸುವುದೆನ್ನ ಮೇಲುಳ್ಳ ಮೋಹದಿಂದ ‖೨೯‖
ಎಳಸೀರ್ಕೊಳ್ಳದೆ ತಮರಾಜವೆರೆಂದದಿಂ |
ಸುಲಿದ ರಸಗಂಧಫಲಯೊಳು ಜೇನ್ನಳಿದಂತೆ
ಲಲಿತಮಾಧುರ್ಯದ್ರಾಕ್ಷಾಫಲಪ್ರಚಯಮಂ ರಸದಾಳೆರಸದೊಳೊಸೆದು ‖
ಇಳುಹಿದಂತೊಲ್ಪು ಬಿಸಿಪಾಕ್ಗನೆಗೆ ಸದ್ಘೃತಂ |
ಗಲಿಸಿದಂದದೊಳೆನ್ನ ಕೃತಿರಸಂ ನಾಡೆ ಸವಿ |
ಗೊಳಿಸುವುದು ನಿರ್ಮತ್ಸರದೊಳಾಲಿಸುವ ರಸಿಕವೃಂದಕಾನಂದವಾಗಿ ‖೩೦

ಇಂತು ಪ್ರಥಮಸಂಧಿ.

## ॥ ದ್ವಿತೀಯ ಸಂಧಿ ॥

---

ಸೂಚನೆ :—

ವಿನಯದಿಂ ಮುನಿಜನಂ ಬೆಸಗೊಳಲ್ಕೊಸಗೆ ಸಂ |
ಜನಿಸಲೆಯ್ದನೆ ಪೇಳ್ವೆನೆಂದು ಮನದಂದಮಿರ್ದ |
ನನಘ ಕೈಲಾಸಂ ಪ್ರಕಾಶಿಸುತ್ತಿರ್ದುದೆನುತ ಸೂತನಾಖ್ಯಾತವಾಗೆ ||*||

ಭವ ಸೋಮಮಿತ್ರ ಮಿತ್ರಪ್ರಭಾನೇತ್ರ ನೇ |
ತ್ರವಿರಾಜ ಚಲನಾಚಲೇಶ ಭಕ್ತಕಾಮ ಕಾ |
ಮವಿನಾಶ ನಾಶವರ್ಜಿತ ಜಿತಮಹಾಂಧಕಾಸುರ ಸುರಪತೇಜ್ಯ ಪೂಜ್ಯ ||
ಶಿವ ಶಿವಾಸಸ್ಮೃದ್ವಿಕಾಶ ಕಾಶಾಥ ವೃ |
ಕ್ಷ್ರವಣಸನ್ನಿಷ್ಠೋಗ ಭೋಗಾಕಲ್ಪ ಕಲ್ಪನಾ |
ಪ್ರಸರನಿರ್ಮುಕ್ತ ಮುಕ್ತಾಫಲೋಪಮಕಾಯ ನಂದೀಶ ಪಾಹಿ ಸತತಂ ||೧||

ವರಕಮತತಳ್ಫಲಕವಾಶಾವೃತ ಪ್ರಬ |
ದ್ಧರಮಖಿಳಭುವನವಸ್ತುಪ್ರಚಯಮಮರಾದ್ರಿ |
ಸರಳ್ಕೂಕಂಬಮಂಬರಸವಿ ಪತಾಕ ನಕ್ಷತ್ರಕಂ ಧ್ರುವನಾಗಲು ||
ತರಣಿಶಶಿಗಳ್ ಮಾರ್ಗಗಳ್ ಶಿಲ್ಪಿಕಂ ಧಾತ |
ನುರುತರಚತುರಶೀತಿಲಕ್ಷ ಜೀವಿಗಳಂವ |
ಸರಸಿಜಾತೋದ್ಭವಾಂಡಂ ಬಿಚಿತ್ರವ ತೆಱವಿ ಕಂಗೆ ಮಂಗಳವಾದುದು ||೨||

ಇಂತೆಸೆವ ಬ್ರಹ್ಮಾಂಡಮಧ್ಯದೊಳ್ ಮಿಗೆ ಚೆಲ್ವ |
ನಾಂದಿರ್ಪ್ಯೈವತ್ತು ಕೋಟಿ ಯೋಜನದ ಪರ |
ಹಾಂತ ಭೂಕಾಂತೆಯುಟ್ಟಿರ್ದಮಳ್ವಿಟ್ಟೆಯುವ ಪಟ್ಟಸೀರೆಯ ಪಾಂಗಿನಿಂ ||
ಸಂತತಂ ಪರಿವೇಷ್ಟಿಸಿರ್ದ ಸಪ್ತಾಬ್ಧಿಗಳೊ |
ಳಂತವೆ ಮೊದಲ್ಬಳಸಿ ಲವಣಾಂಬುನಿಧಿ ಕೌತು
ಕಂ ತೋಱುದುದು ಮತ, ಕಚ ಪಕುಳೀರಣಿಂಣೀರದಿಂ ಸೊಗಸುಗೊಳಿಸಿ ||

ನಿಱಿವಿಡಿದು ನಿಮಿರ್ದ ಪಿರ್ದೆರೆಗಳಂ ನೆಗೆವ ತುಂ |
ತುಱುಗಳಂದೇಳ್ವ ಬೆಳ್ನೊರೆಗಳಂ ಸೆಳಪೆಳವ |
ಹರಿಗಳಂಸುಳಿಗಳಂದೊತ್ತರಿಪಮುಱುಗಳಂಪವಿದಿರ್ದಗಿರಿಗಳಂದಿತ್ತಟದೊಳು ||
ತುಱುಗಿರ್ದ ಪವಳದಂಕುರಗಳಂದಿಡಿವ ಜಲ |
ಚರಗಳಂ ರತ್ನಪ್ರಕರಗಳಂ ಸಂಚರಿಪ |
ಕರಿಗಳಂ ಮುಗಿಲ ಮೊಗ್ಗರಗಳಂ ನೆರೆವ ಬಲ್ದೊಱೆಗಳಂಪೆಸೆವುದಬುದಿ ||೪||

ಬೆಳೆದ ವಿದ್ರುಮಲತಾವಳಿಗಳಂ ಸುಳಿಗಳಂ |
ತುಳುಕುವ ತರಂಗಸಂದೋಹದಿಂ ಗ್ರಾಹದಿಂ |
ಪೊಳೆವ ರತ್ನಚಯದಿಂ ಡಿಂಡೀರದಿಂ ನೀರದಿಂ ಸಿಡಿವ ಸೀಕರಗಳಿಂದ ||
ತಳುವದೆಡೆಯಾಡುವ ಬಹಿತ್ರದಿಂ ಚಿತ್ರದಿಂ |
ಸುಳಿವ ಕಮಠಾಹಿನೀರೇಭದಿಂ ಕ್ಷೋಭದಿಂ |
ಘುಳುಘುಳಿಸಿ ಮೊಱೆವ ನಿಧ್ವಾನದಿಂ ವಿಭಾಸದಿಂದಾಕಡಲ್ ಕಣ್ಗೆಸೆವುದು ||೫||

ಒಡಲೊಳಡಗಿದ ವಡಬನಸ್ತ ಮಿಸಿಮಿಸಿಪ ಪವಳ |
ಗುಡಿ ಸಂಜೆಗೆಂಪು ತೆರೆವೊಯ್ಲಿಸಿಂ ಚಿಪ್ಪೊಡೆದು |
ಸಿಡಿವ ಮುಕ್ತಾಪ್ರಚಯ ತಾರೆ ಬಳಸಿದ ಘನಸ್ತೋಮ ತಮ ಫೇನಪಿಂಡಂ||
ಉಡುರಾಜಮಂಡಲಂ ಶಂಖವರ್ಣಂ ಪೊಗ |
ರ್ವಡೆದ ಕೌಮುದಿಯಾಗೆ ರಾತ್ರಿಲಕ್ಷ್ಮಿಯ ಭಾವ |
ಮಡಸಿ ಕಣ್ಗೆಸೆದುದು ಮಹಾರ್ಣವಮುದಚ್ಚರಿಯ ಪೆರ್ಚುಗೆಯನೆಚ್ಚರಿಸುತ||

ಸ್ಫುರಿತಸನ್ಮಾಣಿಕ್ಯಚಯದಿಂ ಪ್ರವಾಳದಿಂ |
ಗರಳಾಂಕದಿಂದಮೃತ ಘೋಷಣೋದ್ಧರವಾದ |
ವರಘೋಷದಿಂ ಕೌಶವಿಂಶಾಭವಾರಣ್ಯಜೀಮೂತಮಂಡಲಕ್ಕೆ ||
ಸರಿ ಸಾಟಿ ತೋಡೀಡುಯೆಣೆಯಧಿಕ ತೇಜವು |
ತ್ಕರುಷಕಾಂತಿ ಮಹಾಪ್ರಭಾವಮುನ್ನತಸ್ವಚ್ಛ |
ಮುರುಘನತೆಯಿಂದ ಪಾರಾವಾರ ವಿಸ್ತಾರವಾಗಿ ಕಣ್ಗೆಸೆದಿರ್ದುದು || ೬ ||

ಅನವರತ ರತ್ನಗರ್ಭಪ್ರಶೋಭಿತವಾಗಿ |
ಮಿನುಗುವಳಕಾವಳಿಯದಲ್ತು ಕೃಷ್ಣಾಭಿರಂ |
ಜನವಾಗಿ ಗೋಕುಲಮದಲ್ತು ಕಮಲಾಸಂವಕಾರಣಮದಾಗಿ ತಿಳಿಯೆ ||

ವನಜಾಕರಮದಲ್ತು ಮುಕ್ತಾಮಯಮುಮಾಗಿ |
ಮುನಿಯಲ್ತು ವಿಮಾನರಾಜಿತಮಾಗಿ ಗಗನಮು |
ಲ್ತೆಸೆಸಿ ಕಣ್ಗೊಳಿಸಿಮುದು ಪಟುಭೀಷಣೋನ್ನತಧ್ವಾನಮಂಭೋನಿಧಾನಂ ||
ಉರುತರಕ್ಷಾರಮುಮಾಗಿ ಶಿವತನುವಲ್ತು |
ವರಸರಸ್ವತಿಯುಕ್ತಮಾಗಿ ವಿಧಿಯಲ್ತು ಬಂ |
ಧುರಕಬಂಧಪ್ರಪೂರಿತಮಾಗಿ ಧುರಮಲ್ತು ವ್ಯಾಳಾಧಿಶೋಭಿಯಾಗಿ ||
ಮಿಱುಪ ತಳಮಲ್ತು ಸೋಮಾಹಿಮಕರಾಭಿವಿ |
ಸ್ತರಮಾಗಿ ಚಂದ್ರಮಂಡಲಮಲ್ತೆಸಲ್ ಶರಧಿ |
ಪರಿರಚನೆವಡೆದುದು ನೆಗಳ್ತೆಯಿಂ ಭುವನಮಂಗಾವೃತಮಗಳ್ವೆಸಲು || ೯ ||
ಸುರಸರಣಿಯಂತೆ ತರಣಿಪ್ರಚಾರಂ ಪಾಂಡ |
ವರ ಭವನಮಂತೆ ಕೃಷ್ಣಾಲಂಕೃತಂ ಸಮು |
ತ್ಕರುಷವನಮಂತೆ ಪೃಥುರೋಮರೋತ್ಕರಾಂಚಿತಂ ಶೇಷನಂತಕಲಾವೃತಂ |
ಪರಮಿತ್ರಸಂತೆಸೆವ ಮಕರಕಟಕ ಪಯುತಂ |
ಹರಿಯಂತೆ ಸಕಲಭುವನಾತ್ಮಕಂ ತಾನಾಗಿ |
ಕಱಿಮುವತಿಕೌತುಕವನಬ್ಧೀಂದ್ರನತಿರೌದ್ರಘೋಷಭೀಷಣಮನಾಂತು ||೧೦||
ಅಮುಮಬ್ಧಿಯೊಳ್ ಜಂಬೂದ್ವೀಪಮಾವಗಂ |
ರಾಮಣೀಯಕಮಾಗಿರಲ್ ತದಂತದೊಳಿಳಾ |
ತಾಮರಸಕರ್ಣಿಕೆಯೊ ವಿತಳದಿಂ ಹಾಟಕೇಶ್ವರ ಸುರಪುರಿಯ ನೋಡಲು ||
ಭೂಮಿಯಿಂದೊಗೆದನೋ ಭೂಚಕ್ರಮಂ ಪರಪಿ |
ತಾಮಹಂ ತಿರ್ದಾಪ್ರೊಡೆ ತಾಂ ನಡುವೆ ನಟ್ಟರ್ದ |
ಹೇಮಲಕ್ಷ್ಯಸ್ತಂಭಮೆನೆ ಪೃಥಿಸಿಮುದನೆಮಿಪಾಚಲಂ ರೋಚಿಪಿಂದೆ ||೧೧
ಪರಮೇಷ್ಠಿಯೆಂಬ ಪೆಗ್ಗಡೆಯುಂ ವಿಲಾಸದಿಂ
ಮಿಱುಪ ಧ್ರುವನೆಂಬ ಕೋಲ್ಲಟಿಗನೆಲ್ಲಾಜಗಂ |
ಬೆರಸಿಟ್ಟು ನೋಡಲೆರ್ದಾಡಲೆಂದಿರಿಸಿರ್ದ ಸಿಹುಮಿಸುನಿಗಳಿಯೊ ತಿಳಿಯೆ ||
ಸುರರೆಂಬ ಜೋಂಜೆಗಳ್ಜಂ ಕಾಣಿಸಲಾಗಿಸಿದ |
ವರಸುವರ್ಣದ ಕಂಬಸೂತ್ರಮೆನೆ ಚಿತ್ರಮಾ
ಯ್ತುದುಮೇರುಗಿರಿ ಲೋಕಪಾಲೋತ್ಕನಕ್ಕೆ ಹರವರಿ ಸಿರ್ದರೌಘದ ಸಿರಿ ||

ಧಾರಿಣಿಯ ತೇರಾಗಲೆಂದು ನಿಲಿಸಿದ ಧ್ವಜಸ್ತಂಭವೋ
......................ಶಶಿರವಿಗಳೆಂಬ ।
ಟಾರದಿರದಿರಲುಪಗಲ್ಗ ದನೆಯುವಗಾಳ್ವುದಲ್ಲ............(?) ॥
ಚಾರುತರಜಗದ ಶೃಂಗಾರದಂತಾವಳದ ।
ನೋಂರಂತೆ ಕಟ್ಟುವಾಲವೊ ಸೃಷ್ಟಿಗಾಸಲ್ಲ ।
ದಾರುವಿಲ್ಲೆಂದಜಂ ನಟ್ಟಪ ಜಯಸ್ತಂಭವೆನೆ ಮೆಂದು ಕಣ್ಗೆಸೆದುದು ॥೧೩॥

ಮೇಲೆ ಮೊಲ್ಲವಿದ ನೀರದಕುಲಂ ಕಲ್ಲೋಲ ।
ಮಾಲೆಗಳನೇಕಪಪ್ರಚಯ ಪ್ರಸೂನ ಮಣಿ ।
ಜಾಲ ಫೇನ ಶಶಾಂಕ ಚರಿಸುವ ಸಿಂಹಪೃಷ್ಠ ರಸಿಕರ ಚೈತ್ರವಾಗೆ ॥
ಲೀಲೆಯಿಂ ಸುಳಿವಂಬುದಾಳಿ ಬಡಬಾನಲ ।
ಜ್ವಾಲೆಯೆನೆ ರತ್ನಾಕರಂ ಮುನಿಧಯುಕ್ಕು ಕು ।
ತ್ಕೀಲವಾದಂತಿರ್ದುದೇಂದೇಳ್ವ ಚಾಮೀಕರಾಚಲಂ ಚೆಲ್ವಿನಿಂದ ॥ ೧೪ ॥

ಒಲಿದು ಪರಮಾವತಾರದ ಲೀಲೆಯಿಂ ಬಗಿದಿಳದ ।
ಬಲದಿಂ ತಳೋದಕಂ ಮೇಲಕುಚ್ಚಳಿಸಿ ಭೂ ।
ವಲಯಮಂ ವ್ಯಾಪಿಸುವುದೆಂದಜಂ ಶಾತಕುಂಭಸ್ತಂಭಮಂ ನಿಮಿರ್ಚಿ ॥
ಬಲಿದ ಕೀಲ್ಗಾ ಸುರಸರೋಜಗರ ಕಾಪಿನಿಂ ।
ನಿಲಿಸಿದನೆನಲ್ ಮಿಗೆ ನಿಮಿರ್ದ ತೋರ್ದುದು ಮಹಾ ।
ಕಲಧೌತಕುತ್ಕೀಲಮುನ್ನತವಿಶಾಲಪ್ರಭಾಜಾಲದಿಂ ಚೆಲ್ವಿನೆ ॥ ೧೫ ॥

ಎರಡೇಳು ಲೋಕಮಂ ಸೃಜಿಸುವಧಿಕಾರ ದು ।
ಸ್ತರವಾಯ್ತು ತನಗೆ ನಿರ್ವಿಘ್ನದಿಂದವಕೆ ಕೈ ।
ನೆರವಿರಲ್ವೇಳ್ಕುಂದಭೀಷ್ಟಸಿದ್ಧ್ಯರ್ಥ ಮುಚಮಂ ಗೈದು ಗೌರಗರ್ಭಂ ।
ಸ್ಫುರಿಸ ಯೂಪಸ್ತಂಭಮಂ ಜೃಂಭಿಸುವವೋಲು ।
ಧರೆಯ ಮಧ್ಯದೊಳಿರಿಸಿದನೊ ಎಂಬ ಮಾಳ್ಕೆಯಿಂ ।
ಮೆಱೆದುದಾಮೇರುಕುತ್ಕೀಲ ಸನ್ಮಾಣಿಕ್ಯಜಾಲದಿ ವಿಶಾಲವಾಗಿ ॥ ೧೬ ॥

ಆಕನಕಗಿರಿಯ ತೆಂಕಣ ಕಡೆಯೊಳಿದಿರ್ದ
ನೇಕಪಲತಾಗುಲ್ಮಫಲಪುಷ್ಪದಿಂ ನಿಮಿರ್ದ ।
ಳಾಕರಸರೋವರಗಳಿಂ ವಿವಿಧಸಸ್ಯಗಪ್ರಕರದಿಂ ಪಕ್ಷಿಕುಲದಿಂ ॥

ಸ್ವೀಕಾರಯೋಗ್ಯವೆನಿಸುವ ಕಂದಮೂಲಾದ್ಯ |
ನೇಕವಸ್ತುಪ್ರಚಯದಿಂ ನೈಮಿಶಾಖ್ಯಸುಮ |
ಹಾಕಾನನಂ ಕಣ್ಗೆ ಕಮನೀಯಮಾಗಿರ್ದುದಧಿಕಮಾಹಾತ್ಮ್ಯದಿಂದ ‖ ೧೭ ‖
ಸುರಪವನಮಾಪಾರ್ಥನೆಚ್ಚ ಶಿಖಿವಿಶಿಖದಿಂ |
ದುರಿಗೊಳಲ್ ಕಂಡು ಭಯಗೊಂಡು ಚೆಚ್ಚಱಿಪಿ ಚೈ |
ತ್ರರಥವಿಳೆಗಿಳಿತಂದು ತಾಪಸರ ಮಱೆವೊಕ್ಕುದೆನೆ ಮಿಕ್ಕುಮೆಱೆಯುತಿರ್ಪ ‖
ವರಪುಣ್ಯಕರತಪೋವನವ ಜನಂ ಕಾಣುತ |
ಚಚ್ಚರಿದಳಿಯುಲೊಪ್ಪಿದುದು ತಪ್ಪದನುದಿನದೊಳಾ |
ಪರಿಮಳಮಿಳಿತ್ಫಲಂ ಬೀಯುವತಿರಮ್ಯಮಾಗಿರ್ಪ ಕುಜನಿಕರದಿಂದ ‖ ೧೮ ‖
ಪರಿಫಲಿತಮಾದ ಸಹಕಾರ ಮಂದಾರದಿಂ |
ಕರವೀರ ಚಂಪಕ ಕಪಿತ್ಥ ವಶ್ವತ್ಥದಿಂ |
ಸುರಗಿ ನಿಚುಳ ಕಚೋರ ತೆಂಗು ನಾರಂಗದಿಂ ಸೆಣಕಡಸದಿಂ ಕಡಸದಿಂ ‖
ಅರುಟಾಳವಿಬ್ಬೀತ ಹೊನ್ನೆ ಚೆನ್ನಂಗಿಯಿಂ |
ಸರಸವಿಂಗಳ ದೇವದಾರಿ ಬಂದಾರಿಯಿಂ |
ಕುರವಕಂ ಬೆಲ್ಲವತ ಕುಂದ ಪಿಚುಮಂದದಿಂದಾವನಂ ಶೋಭಿಸಿದುದು ‖ ೧೯ ‖
ಸ್ಥಾಣುವಿಗೆ ಸೀರೆಱೆವೊಡೀಪ್ಸಿತಫಲಪ್ರದಂ |
ಕಾಣವದು ಸುಪ್ರಸಿದ್ಧಂ ಲೋಕದಲ್ಲಿ ಬಿ |
ನ್ನಾಣದಿಂ ಬೀಸಱಿಲ್ಲದ ಭಾವಶುದ್ಧಿಯಿಂದೊಲಿದು ಸಲಿದೊಲವಿನಿಂದ ‖
ಸ್ಥಾಣುವಿಗೆ ಸೀಱೆಱೆವ ನಿಜಮನೋಭೀಷ್ಟಮಂ |
ಮಾಣವತಿಚಿತ್ರಮೆನೆ ಪಡೆವ ಮುನಿಸಂಕುಲಂ |
ಕೇಣಮಿಲ್ಲದೆ ತದ್ವನಾಂತರದೊಳಿರ್ದುದನವರತ ತಪಮಂ ಗೆಯ್ಯುತ ‖ ೨೦ ‖
ಭಾವಿಸಲ್ ವಿಜಿತಾಕ್ಷದಿಂ ಫಲಾಹಾರದಿ ಮ |
ಹಾವನನಿವಾಸದಿಂದಂಜನಾತ್ಮಜನಂ ಸ |
ದಾವರಗುಹೋಪಲಾಲಿತಭೂತಿಭೂಷಿತವಿನಜಿನಸಂಶೋಭೆಯಿಂದ ‖
ಶ್ರೀವುಮಾಧೀಶನಂ ಚಾರುವೃತ್ತದಿ ನಿರ್ಮ |
ಳಾವಲಂಬದಿ ಸುಪ್ರಕಾಶದಿ ದಿನೇಶನುಮ |
ನೋವಿಬಗೆಗೊಳ್ಳದನುಶಮನುಹುಮೆವೆತ್ತಿರ್ದ ಮುನಿಗಳಿರ್ದರ್ ವನದೊಳು ‖

ಅೞ ತುೞಯಲಮ್ಮವಲರಂ ಕಮಲತಂಡುಲಂ |
ಗೊಱಲಮ್ಮವರಸಂಚೆ ಪರಿಪಕ್ವಫಲಗಳಂ |
ಗಿೞ ಕರ್ದುಕಲಮ್ಮವಬ್ಜಾಕರತಟಾಕಪ್ರಪೂರ್ಣೋದಕದಿ ಜಲಚರಂ ||
ಸುೞಯಲಮ್ಮವು ಜಾತನವಶಾಡ್ವಲಗ್ರಾಸ |
ಕೆಳಸಲಮ್ಮವು ಮೃಗಪ್ರತತಿ ಕುಳಿರಂ ಮಾಣ್ದು |
ಪೞಚಲಮ್ಮದು ಗಾಳಿ ಬಿಸಿಯ ಬಿಸಿಲಂ ಬೀಸಲಮ್ಮಸಿನನಾವನನೊಳು ||

ಭಸಿತಮಂ ಪೂಸಿ ಪುಲಿದೊವಲ್ಗೆ ಪವನಿಸುವ ಮೌಂ |
ಜಿಸುವೋಲಿರಲೆಯ ವಳೆವ ಜಪಸರಂಬಿವಣಿಸುವ |
ಪೊಸಕಬ್ಬಿನದ ಪುಡಿಯ ಮಾಳ್ಪ ಪೂಸಣ್ದ್ಯುವ ತಪವಿರಲ್ಸೂಜಿಮೊನೆಯ ||
ಮಸೆವ ಶಾಲಿಗಳನನುಗೆಯ್ವ ದೇವಾರ್ಚನೆಗೆ |
ಪೊಸಪಸುಪಕರಣಂಗಳಂ ಬಿಡುವ ಪಂಚಾಗ್ನಿ |
ನಸಿಯುದೊಲ್ಪುಟಗೊಳಿಪ ವಟುಗಳಿಂದೆಸೆದುದು ವನಂ ಮುನಿಸಜೀವನವೆನೆ ||

ಪೊಳೆವ ಪಳಿಕಿನ ಜಪಸರಂ ಕುಸುಮಮಾಗೆ ಚೆಂ |
ಬೊಳೆಪಾಂತ ಜಡೆಗಳ್ಪಳಿರ್ಗಳಾಗೆ ಕೆಂ |
ಮಳಬಾಹುಗಳ್ ಶಾಖೆಯಾಗೆ ನವಕುಂಡಲಂಗಳ್ ಫಲಪ್ರಚಯಮಾಗೆ ||
ತೊಳಪ ಪಾದಂ ಮೂಲಮಾಗೆ ಶ್ರುತಿರವಮೆ ಪಿಕ |
ಕುಳನಾದಮಾಗೆ ಸುರಕುಜಮಂತೆ ಭಜಿಸಿದ |
ಗೆಱೆಲಿದಿಷ್ಟಸಿದ್ಧಿಯಂ ಮಾಳ್ಪ ಮುನಿಕುಲಮೊಪ್ಪಿತಾಮಹಾಕಾನನದೊಳು ||

ಸಿಂಗ ಸೀರಭಸೆ ಭರಿಕ್ಕೈಯಿಂದ ಸೀರ ಮಾ |
ತಂಗಮೆಚ್ಚಿಪ್ಪುವು ಜವಳಿವಲಿಗನೞಲಿಸಿ ಬಂದು |
ತಾಂ ಗಜಪಮೆಯ್ನ್ನೆಳಲಸಾರ್ದಸ್ತೈತಳಿಸುವುವ್ರುಸಾಳ್ವನಮ್ಮಚುಗೆ ಕುಟುಕನು
ಸಂಗಳಿಸಿವಪ್ಪುವು ಗಿಳಿಗಳ್ ನಡೆಗಲಿಯದಿರ್ದ |
ಮುಂಗುಲಿಯ ಮರಿಯ ಪೆಡೆಯೊಳ್ ಪೊತ್ತು ಚರಿಪ್ಪುವು ಭು |
ಜಂಗಕುಲಮಾಮುನಿಪರೆಸಗುವ ತಪಃಪ್ರಭಾವದ ಬಗೆಯನೇವೇಳ್ವೆನು ||

ಬಿಸಿಲೊಳ್ ತಪಂಗೆಯ್ವರಂ ಕಂಡು ಪೆಡೆಗೊಡೆಯ |
ಪಸರಿಸಿ ನೆಳಲ್ಗೆಯ್ವುವಹಿಸಂಕುಲಂ ಪಣ್ಗ |
ಳೊಸೆದು ತಿಱುತಂದೀಗು ವನಚರಂ ವೃದ್ಧಮುನಿಗಳ್ಗೆ ಭರಿಕ್ಕೈಗಳ ||

ಸಸಿನಿತ್ತು ನಡೆಯಿಸುವುವು ಕಾಡಾನೆ ಬಳಲಿದ |
ಗೇಸೆವ ಗಱಿಯಿಂದ ಬಿಜ್ಜಳವಿಕ್ಕುದಪುವು ಶಿಖಿ |
ವಿಸರವೆನೆ ತತ್ತಪೋವನದ ಮುನಿಸ್ತೋಮೋನ್ನತಿಯ ಬಗೆದು ಬಣ್ಣಿಸುವರೊಳರೆ ||

ಘನಶಾಂತಿ ಮೆಯ್ವಾಂತುದೋ ಸದ್ಗುಣಂ ದಂಡ |
ವನೆ ಧರಿಸಿತೋ ಭೂತದಯೆಯುಟ್ಟುದೆ ವಲ್ಕಲಾ |
ಜಿನವನಾಚ್ಛಾದಿಸಿತೋ ಮುಕ್ತಿ ಜಡೆವೆತ್ತುದೋ ಪುಣ್ಯಂ ಭಸಿತವಾಂತುದೋ ||
ವಿನುತಶೇಮುಷಿ ಕೌಪೀನವಾಳ್ದುದೋ ಶಾಸ್ತ್ರ |
ದನುಮತಂ ತಾಂ ಕಮಂಡಲುವಿಡಿದುದೋ ಎನಲ್ |
ವನದೊಳ್ತಪಂಗೈವ ಋಷಿನಿಕರವಿರ್ದುದು ನಿರಂತರಂ ಸಂತಸದೊಳು || ೧೭

ಮಿಱುಪ ವನದಂತನೇಕಾಗಮನಿಯುಕ್ತರ್ ಸು |
ಧರೆಯಂತೆ ಸನ್ಮಾರ್ಗಶೋಭಿತರ್ ಕಿನ್ನರೇ |
ಶ್ವರನಂತೆ ಸನ್ನಿಧಿಭೂಷಿತರ್ ಸುಭಟನಂತುರುಶಸ್ತ್ರಸಂಯುಕ್ತರು ||
ಸರಿದಧಿಪನಂತೆ ಮುಕ್ತಾಮಯರ್ ಗರ್ಹಿತ |
ಕರನಂತೆ ಶಾಂತಗುಣಸನ್ನಿಹಿತರಾಗಿ ಮುನಿ |
ವರರಿರ್ದರಾಪುಣ್ಯನೈಮಿಶಾರಣ್ಯದೊಳ್ ಸತತಂ ತಪಂಗೆಯ್ವುತ || ೧೮ ||

ತರಣಿಯುಂ ತಗ್ಗಿಸುವ ಸುಧಾಂಶುವನುಷ್ಣ |
ಕಿರಣನಂ ಮಾಳ್ಪ ಶಿಖಿಯುಂ ಕಾಂತಿಗಿಡಿಪ ಸಂ |
ಚರಿಸವಂತನಿಲನಂ ನಿಲಿಪ ತಾರಾಗಣಂಗಳನಕ್ಷಮಾಳೆಗೆಯ್ವ |
ಕರೆವ ಮಾತ್ರದೊಳುಮಾಪತಿ ರಮಾಪತಿ ಕಂಜ |
ಜರ ತಮ್ಮೆಡೆಗೆ ಬರಿಪ ಸುಪ್ರಭಾವದ ಮುನೀ |
ಶ್ವರರಿಂದ ಮೆಱೆವುದಾನೈಮಿಶಮಹಾವನಂ ಕಣ್ಗೆ ಕಮನೀಯವಾಗಿ | ೧೯

ಜನಮನೋಹರಮಾದ ನೈಮಿಶಾರಣ್ಯದಾ |
ವನವನದೊಳಿರುತಿರ್ದ ಶೌನಕಪ್ರಮುಖರಸ |
ನ್ಮುನಿನಿಕರಮೊಂದು ದಿನಮೊಲ್ದು ಜಾಗ್ರತರಾಗಿ ಲೀಲೆಯಿಂದಿರುತಿರಲ್ಕೆ ||
ದಿನಜಾಪ್ಯಮಾಗಲೊಯ್ಯನೆ ಚಿತ್ತವಲಿ ಪುಣ್ಯ |
ಜನಕೇತಿಹಾಸಮಂ ಮನವೊಲ್ದು ಕೇಳ್ವೆಚ್ಛೆ |
ಕೊನರಲಾಗಳೆ ಸೂತಪೌರಾಣಿಕನ ಸ್ಮರಿಸಲಾಕ್ಷಣಂ ಮೆಯ್ದೋರ್ದನು || ೨೦

ಬರುತಿರೆ ಪುರಾಣಿಕನ ಕಾಣುತಿದಿರೆದ್ದು ಪ್ರೊ |
ತ್ತರಿಪ ಪುಳಕಂಗಳಂ ಪೊಂಗಿ ಸನ್ಮಾನದಿಂ |
ಕರಯುಗ್ಮಮಂ ನೊಸಲೊಳಂ ಬೆಸುಗೆಗೊಳಿಸಿಯುಳ್ವಳಿರ ಪಸೆಯಂಪಸರಿಸಿ
ಕರೆದು ಕುಳ್ಳಿರಿಸಿಯುಪಚರಿಸಿ ನೆನೆದೆಣಿಕೆ ಕೈ |
ನೆರವೇರ್ದುದೆಂದು ಮನಸಂದು ಸಾನಂದದಿಂ |
ಪರಮಮುನಿಜನವರ್ಗ್ಯರಧಿಕತಾತ್ಪರ್ಯದಿಂ ನಸುನಗೆಯೊಳುಸಿರ್ದರಾಗ ||೩೧||

ಪಿರಿದುಂ ತೃಷಾರ್ತಗೆಳನೀರ್ ದೊರಕಿದಂತೆ ಕಡ
ವರಮೆ ಬಡವಂಗೊಲ್ದವೋಲು ಪಸಿದವಗೆ ಮುಂ |
ಬರಿದು ದಿವ್ಯಾನ್ನಮೆಯ್ತಂದಂತೆ ನೆನೆದೆಣಿಕೆ ಮೆಯ್ದೋಱುವಂತೆ ನಿಮ್ಮ ||
ದರುಶನಾಮೃತಮಿಂದಿಲಾರ್ತಿವೆತ್ತಿರ್ದ ಬಗೆ |
ಪರಿತುಷ್ಟಿವೆತ್ತುದಿನ್ನಿಹಪರಸುಖಂಗುಡುವ
ವರಪುಣ್ಯಕಥೆವೇಳ್ದು ನಮ್ಮ ಕಿವಿಯಾಸೆಯಂ ತವಿಸೆಂದರು | ||೩೨||

ಆಮುನಿಕುಲೋತ್ತಮರ ವಿನಯೋಕ್ತಿಯಂ ಕೇಳ್ದು |
ಪ್ರೇಮದಿಂ ನುಡಿದನಾಸೂತಂ ಸುಕಥೆಗಳ ಮ |
ಹಾಮಹಿಮೆಯಂಕೇಳ್ವೆನೆಂಬವರ್ಗನಘಸನ್ನಿರ ಮುಂದೊಲ್ದುಸಿರ್ದೊಡೆ
ಮಾಮಳೆ ಸಮುದ್ರದೊಳ್ ಕಱೆದಂತವ್ಯರ್ಥಸೆ ನಿ |
ಮ್ಮಾಮನಃಪ್ರೀತಿ ಕೈಗೂಡುವಂತೊರೆವೆನಾ |
ಶ್ರೀಮಹಾನಂದಿಯ ಮಹಾತ್ಮ್ಯದ ಕಥಾಕುತೂಹಲವನಾಲಿಪುದೆಂದನು |

ಕ್ರೂರದುರಿತೋರಗನಿಬದ್ಧಪಾಶವಿನಾಶ |
ಗಾರುಡೋದ್ಗಾರಮಣಿಯಂ ಮಹಾಕಲುಷಹರಿ |
ಪೂರಿತಾರಾಮಪ್ರಕೃಂತನಕಠೋರಸಿತಕುಠಾರಮಂ ತ್ರಿವಿಧ |
ಘೋರದೋಷಾಗಣ್ಯದಾರಣ್ಯದಹನಾಗ್ನಿ
ಪೂರುಷನೆನಿಪ್ಪ ತ್ರಿಪುರಾರಿಯ ಚರಿತ್ರಮುಮ |
ನೋರಂತೆ ಬಣ್ಣಿಸುವೆ ಕರ್ಣಾವತಂಸಮಾಗಲ್ಮಧುರತರಕಥೆಯನು || ೩೪

ಗಿರಿರಾಜರಾಜತನಯಾಮಹಾವಾಮಭಾಗಾಂಕ |
ವರಪೀಠದೊಳ್ ಕರಾಳಕ್ಷ್ವೇಡ ಕಂಠದೊಳ್ |
ಪರಮಮಂಜುಳಕಂಜದೃಷ್ಟಿ ಕಲ ಪಿಂಗಳಕಪರ್ದಜೂಟಸ್ಥಲದೊಳು |

ಶರಜಾತಭವಮಸ್ತ ಹಸ್ತಾಗ್ರದೊಳ್ ಭಸ್ಮ |
ಪರಿಲಿಪ್ತ ದೀಪ್ತಕಾಯದೊಳು ಸುಕರೋಟೀಸ್ರ |
ಕ್ಕರದೊಳೊಪ್ಪುವ ಸದಾಶಿವಶಿವಪ್ರದನ ಸುಚರಿತ್ರಮಂ ಕೇಳೆಂದನು ||೩೫||

ಎಂದನಿಮಿಷೋನ್ಮೀಲಿತಾಕ್ಷನಾಗುತ ಮನೋ |
ಮಂದಿರದೊಳುಮಾಮಹಾದೇವನ ಪದಾಂಬುಜ |
ದ್ವಂದ್ವಮಂ ಭಾವಿಸುತ ಶೌನಕಾದಿಮುನೀಂದ್ರರೊಳ್ ಸೂತಪೌರಾಣಿಕಂ ||
ಸಂದ ಪರ್ವದಿ ನುಡಿದ ಭೂಮಿಯೊಳ್ ತೋರ್ಪ ನಗ |
ಬೃಂದದ ಯಶಃಪ್ರಭೆಯನಪಹರಿಸಿ ತತ್ಕಾಂತಿ |
ಯಿಂದ ಧಾವಳ್ಯಮಾಂತಂದದಿಂದೊಪ್ಪುವುದು ಕೈಲಾಸಗಿರಿ ಕಣ್ಗೆ ||೩೬||

ಕ್ಷೀರ ಹೀರ ಪಟೀರ ಹಾರ ಮಂದಾರ ನೀ |
ಹಾರ ಪಾರಾವಾರ ಭುಜಗೇಶನೆನಿಪ ಕ |
ರ್ಪೂರ ಸಾರದ ಶಾರದಾಭ್ರ ಕುಂದೇಂದು ವಾಕ್ಸುಧೆ ಶಂಖ ಶ್ವೇತಾಬ್ಜದ ||
ಸಾರಮಂ ನೀರಜಭವಂ ತೆಗೆದು ಪರ್ವತಾ |
ಕಾರಮಂ ಗೆಯ್ದವೊಲ್ ತಾರಾದ್ರಿ ಸತತಮುಸಃ |
ಕೀರವಾಕಂದಂ ಸುಮುಕ್ತಿಧಮ್ಮಿಲ್ಲ ಕುರುವಿಂದಂ ವಿರಾಜಿಸುವುದು ||೩೭||

ಉಲ್ಲಸದ್ವೃಷವಿರಾಜಿತವಾಗಿ ದೇವಪುರ |
ಮಲ್ಲ ಶ್ವೇತಪ್ರಚಾರಮದಾಗಿ ಬ್ರಹ್ಮಪುರ |
ಮಲ್ಲ ವಿಲಸನ್ನದಾನಗಜಾಭಿಶೋಭಿತಮದಾಗಿ ಕಾಂತಾಧಿಪಪುರಂ |
ಅಲ್ಲ ಹೇರಂಬರಾಜಿತದ ಸಂಯಮಿಪುರಮಿ |
ದಲ್ಲ ಪಶುಪತಿವಾಸವಾಗಿ ತೇಜೋವತಿಯು |
ದಲ್ಲವೆಂದೆನಿಸಿ ಕೈಲಾಸಾಚಲೇಂದ್ರಂ ಕಣ್ಗಳ್ಗೆ ಚಿತ್ರವ ಕಜಿಸುವುದು ||೩೮||

ತಳತಳಿಸುವೆರ್ವಮುತ್ತುಗಳ ರಾಶಿಯೋ ಸಮು |
ಜ್ಜಳಪ ಸತ್ಕಲಿಕೆಯೊಟ್ಟಲೋ ವಿರಾಜಿ ಮಂದೈಸಿ |
ಬಳೆದು ಬೆಳ್ವಳಪ ಬೆಳ್ದಿಂಗಳೊಬ್ಬುಳಿಯೊ ಲೋಕದೊಳ್ಪರ್ಬಿದಪುಣ್ಯದ ||
ಗೆಲಸೊ ಪೀಯೂಷ ಭಾಸ್ಕರರಶ್ಮಿಯಿಂದ ಕಾ |
ಯ್ದೊಳ್ಗಟ್ಟಿಗೊಂಡ ಬಗೆಯೋ ಶಾರದಾಭ್ರಸಂ |
ಕುಳಮನುಜಿ ಮಿದಿಮ ಮುದ್ದೆಯಮನಾಗಿಸಿದನಜನೆನಲ್ ಬೆಳ್ಳವೆಟ್ಟನೆಮುದು ||

ತಿಳಿಯೆ ಜಾಂಬವಸುಷೇಣಯುತತ್ತ್ವಮಿರೆ ರಾಮ |
ಬಲಮಲ್ಲ ಶಲ್ಯಭಾರದ್ವಾಜಸಿವಾನೆ |
ವ್ರೊಳಲೊತೆಮನೆಸೆವವೋಲ್ಹದವ ಲ್ಲಕ್ಷ್ಮಣನ್ಮಥಶೋಭೆಯಿರೆಯದುಗಳ‖
ಲಲಿತಸೈನಿಕಮಲ್ಲ ಭೀಮವಿಜಯನಾಸ್ತವಂ |
ದಳವು ಪಾಂಡವರ ಪಡೆಯುಳ್ಳಸಿಸಿ ಕರ್ಣ ಮಂ |
ಗಳಮನಾಗಿಸಿಮದಾಗೋತ್ರಂ ಧನದಮಿತ್ರನಾವಾಸಪಾತ್ರನಾಗಿ ‖ ೪೦ ‖

ಮಿಗೆ ಪಾಲ್ಗಡಲ್ಗಡೆಯೆ ತೇಲ್ದು ಡಿಂಡಿರಪಿಂ |
ಡಗಳ ತೆಗೆದೊಟ್ಟಿಲ್ ಘನೀಭೂತವಾಗಿ ಸ |
ನ್ನಗವಾಕೃತಿಯ ತಾಳ್ದು ದೋಷಿಯೊಡನಾಗಸವ ತಿರುಗಲಲಸಿ ಬಂದು‖
ಧಗಧಗಿಪ ಬೆಳ್ಳಿಂಗಳೊವೊತ್ತುವಾಗಿ ಸ್ಥೈ |
ನಿಗುರಿಪತ್ತಂಬಿನ್ಪ್ರೊಲ್ ನೋಳ್ಪ ಸತ್ಪುರುಷರ್ಗೆ |
ಸೊಗಸಾಪ್ತು ಕೈಲಾಸ ಮುಕ್ತಾಮಣಿಕೋಶ ನಂದೀಶ್ವರವಿಲಾಸವಾಸ ‖೪೧‖

— ಇಂತು ಎರಡನೆಯ ಸಂಧಿ. —

‖ ಮೂರನೆಯ ಸಂಧಿ ‖

---

ಸೂಚನೆ : -

ಮಿಱುಪ ಕೈಲಾಸಭೂಧರದ ವಿಸ್ತರದ ಸೌಂ |
ದರದ ಪರಿಯಂ ಮುನೀಶ್ವರರಿಂದ ಸನ್ನುತಿಸಿ |
ಹರುಷದಿಂ ಕೇಳ್ದು ಮುನಿವರರಿತತ್ರಿಗತಿಶಯಮೊಳಗಿನಿದನುವ್ರೊಸಗೆಯಿಂದ‖

ಲಾಲಿತಸುವಿಸ್ತರದ ಸನಕಾದಿಮುನಿಸಂತತಿ ವಿ |
ಶಾಲಮಹಿಮ ಶಿವನಸ್ಥಳವೋಳ್ ವಿಲಸತ್ಕಥ |
ಪಾಲಪಾಲಕ ಮೃತ್ಯುವಿಜಯ ವಿಜಯಪ್ರಸನ್ನಾಮರಾಲಯಕಾರ್ಮುಕ ‖
ನೀಲಲೋಹಿತ ಲೋಹಿತಾಶ್ವದ ಕಾಮವಿಶಿಖ |
ಕಾಲ ಕಾಲಗ್ರೀವ ರಾಜರಾಜಸಖಾಗ
ಮಾಲಯವಿಹಾರ ಪಾದಪದ್ಮಾಕಲಿತಾನುರಾಗ ನಂದೀಶ ಪಾಹಿ ‖ ೧ ‖

ಮುನಿಕುಲೋತ್ತಮರು ಚಿತ್ತೈಸಿ ಚಿತ್ತಜಮರ್ದ |
ನನ ಘನಚರಿತವಿದಮೋಘಭವಪಾಶಬಂ |
ಧನವ ಛಿಂದಿಪ ನಿಶಿತಕ್ಷುರಕ ನಿಷ್ಠುರನಿರಯಚಯದ ಗಂಟಲಗಾಳವು ||
ಅನುದಿನಮೊಳುಗ್ಗಡಿಪ ಸಂಸಾರಸಾಗರಕೆ |
ವನಧಿಸಂಭವನೆನಿಸುವೀಶಕಥಾಕುತುಕವಂ |
ಮನದಂದು ಕೇಳ್ವುದೆಂದೆನುತ ಕೈಲಾಸಶಿಖರಿಯ ಬಗೆಯ ಬಣ್ಣಿಸಿದನು || ೨ ||

ತುಂಗಿದಾಲೋಲಿತತಮಾಲಮಾಲೋಸ್ರಬಂ |
ಧುರವಂ ಮುಗಿಲ್ಗೆತ್ತು ಚಾತಕಪ್ರಕರ ವಿ |
ಸ್ಫುರಿತಕಲಧೌತರೇಖಾಕಲಿತಚಂಡಗಂಡಗ್ರಾವರುಚಿನಿಚಯವ |
ಮಿಂಚುಗಳೆನಿಸಿಗೆತ್ತು ಚಕ್ರಚಕ್ರಕ್ಷಮಾ |
ಕರಕಾಂತಕಾಂತಿ ಕೌಮುದಿಗೆತ್ತು ಸುಚಕೋರ |
ನೆರವಿ ನಿರುತಂ ಮೊರೆದು ನೆರೆದು ಬಾಯ್ದೆರೆವ ಸಂದ ಪರಗಿರಿ ಮೆರೆದಿಸುವು ||

ಪುಲ್ಲೆ ಮೃಗಗಳ್ ಮೊಲೆಯೂಡಿ ಸಲಹುವ ಸಿಂಹ |
ವಲ್ಲಭೆಯರಿಂದೆರಗಿಕುನ ಪಕ್ಕೆಯೊಳ್ಕೆ |
ಸಲ್ಲೀಲೆಯಿಂದೋರ್ವುತಿರ್ಪ ಪುಲಿವೆಣ್ಗಳಿಂದೆಂಟಡಿಯ ಪೋತಂಗಳ್ ||
ಪಲ್ಲವಿಸಿ ಪಾಸಿನೊಳು ಪಟ್ಟಿರಿಸಿ ಮರದ ನೆಳ |
ಲಲ್ಲಿ ಪೋಷಿಪ ಜವಳವಲೆವಕ್ಕೆಯಿಂ ದೇವ |
ಬಲ್ಲಹನ ಬೆಳ್ಳಿಮಲೆಯಲ್ಲಿ ನಿರ್ಮತ್ಸರದಿ ತಳ್ತುರ್ಪವಳ್ತಿಯಿಂದ || ೪ ||

ಪರನಗೋತ್ತರಮಾದ ದಿಕ್ಕಿನೊಳು ಪರಮಭೂ |
ಸುರಕಮಂಡಲುದಂಡಪಾಶಾಕ್ಷಮಾಲಿಕಂ |
ಸ್ಫುರಿತಶೇಷೋಪವೀತಂ ಹಂಸವಾಹನಕ್ಷಿತ್ರಯಂ ಬ್ರಾಹ್ಮಿಯೆಂಬ ||
ವರಶಕ್ತಿಗೂಡಿ ತನ್ನಾಕೃತಿಯ ಭುಜಬಲೋ |
ತ್ಕರವೇಳುಕೋಟಿ ಭೈರವರೊಡನೆನಾರತಮು |
ಮಿರುತಿರ್ಪನಸಿತಾಂಗನಾಮ ಭೈರವನು ಗೌರವದೊಳಧ್ಯಕ್ಷನಾಗಿ || ೫ ||

ಕರಚತುಷ್ಟಯದೊಳಂ ಖಟ್ವಾಂಗ ಡಮರುಗಾ |
ಯುರುಶೂಲಮಂ ತಾಳ್ದು ವೃಷಭೇಶ್ವರಂಗಕ್ತ |
ನೆರಸಿ ಭಾಳಾಕ್ಷದಿಂ ಶಾಕ್ವರಸಮಾರೂಢನಾಗಿಯಿನಾರುಲು ಕೋಟಿ ||

ಪರಿಗಣಿತಭೈರವಸಮಾಕೀರ್ಣದಿಂ ತುಂಗ |
ತರದಂಷ್ಟ್ರವದನದಿಂ ಕನಕಾಂಗಭೈರವಂ |
ಮರುತಸುತಾಶೆಯೊಳ್ವಾಸಮಾಗಿರ್ದಪ ನಿರಂತರಂ ಸಂತಸದೊಳು ||೬||
　ಅಂತಕನ ದಿಗ್ಭಾಗದೊಳ್ ಶೂಲಪವಿಶಕ್ತಿ |
ಕುಂತಮಂ ತಾಳ್ದು ಸವಿಲೋಲ ಕೌಮಾರಿಸಹಿ |
ತಾಂ ತನ್ನ ಸನುಬಲರ್ ದಶಕೋಟಿಭೈರವ ಸಮೇತ ಸಂರಂಭದಿಂದ ||
ಅಂತರಿಸದಾವಗಂ ತುಳ್ಕುತಿಪ ರೌದ್ರರಸ |
ದಿಂ ತೊನೆವ ಚಂಡಾಸ್ಯಭೈರವ ಮಹಾತೇಜ |
ದಿಂ ತರಣಿಯಂ ಜಯಿಸುತುಜ್ಜ್ವಲಿಪ ಜ್ವಲನಾಕ್ಷದಿಂದಿರ್ದ ಕೋರ್ಪಿಸಿಂದ ||
　ಅಸುರಸೇನೆಯೊಳ್ ಗರ್ಜನೆಸಿಪ ಭೈರವ ಪೀತ |
ವಸನಂ ತ್ರಿಲೋಚನಂ ಶಾರ್ಙ್ಗಕೌಮೋದಕೀ |
ಸ್ವಸಿತಶಂಖಚಕ್ರಧರಭೈರವಂ ಫಾಲನೇತ್ರಂ ಮಹಾಶೌರ್ಯಪಾತ್ರಂ ||
ಭಸಿತಲಿಪ್ತಂ ಪಂಚಕೋಟಿ ತತ್ಪ್ರಾಕೃತಿಯೊ |
ಳೆಸೆವ ಭೈರವರೊಡನೆಯುತ್ತಿಭವನಾಸಕರಸಂ |
ಪಸರಿಸಲ್ ಪರಿತೋಷದಿಂದಿರ್ದನಲ್ಲಿ ಮಂಡಳಿಸಿಯುರುತೇಜದಿಂದ ||೮||
　ವರುಣದಿಕ್ಕಿನಲಿ ಪಾರಾಪಶಕ್ತಿಸಮೇತ |
ಸುರುಮಹಿಷವಾಹನಂ ಶಂಖಪಲಕಿರೀಟಮುಂ |
ದ್ಗರಯುತಂ ಕಾಮರ್ಣಗಿಲ್ವಣ್ಣಮಂ ತಳೆದ ಭೈರವ ಗರುತ್ಮದಾರೂಢಂ ||
ನರೆ ತನ್ನ ತುಲಿತಶೌರ್ಯೋನ್ನತರ್ ಭೈರವರ್ |
ವೆರಸಿದಜು ಕೋಟಿಯೊಡಗೂಡಿ ಗೌರವದೊಳ್ |
ಲ್ಲಿರುತಿರ್ದ ಸ್ಥಾನಗಂ ಘೋರಾಭಿಧಾನದಿಂದತಿಸಾವಧಾನವಾಗಿ || ||೯||
　ಕರನಾಲ್ಕರೊಳ್ ಚಾಪಶರವಜ್ರಶಕ್ತಿಯಂ |
ಧರಿಸಿ ಜೆಳ್ವಸೆಯನಪರ್ಣಯಿಂದಾಣಿಯೊಡ |
ವೆರೆವಂಬುರುಹರಾಗಮಣಿಸ್ಫುರಿತಪ್ರೋಲಿಸೆವಂಗದಿಂ ಜಟಾಪಟಲದಿಂದ ||
ಸ್ಫುರದಗ್ನಿಲೋಚನದಿ ವಾಯುವಿನ ದೆಸೆಯು ಕಾ |
ದಿರುತಿರ್ದ ತನ್ನೊಲಿಪ ಭೈರವರ್ ಮುಕ್ಕೋಟಿ |
ವೆರಸಿ ಸುಖಕ್ಕಾಸ್ಪದದೊಳ್ಕಲಿಯುಮೆನಿಸುತುಂ ಸಮಾಖ್ಯಾತಮಾಗಿ ||೧೦||

ಲೀಲೆಯಿಂ ಕೈನಾಲ್ಕರೊಳು ಗಂಟೆ ಡಮರುಗ ತ್ರಿ |
ಶೂಲಂ ಕರೋಟಿಪಾತ್ರಂ ಫಾಲನೇತ್ರನಾ |
ಭೀಲಧೂಮ್ರಾಂಗ ಚಾಮುಂಡಿನಿಜಶಕ್ತಿ ಬಲಿಭುಕ್ಕವಾಹಂ ದಕ್ಷನು ||
ಓಲಗಿಸುತಿರೆ ಪನ್ನೆರಳ್ಕೋಟಿ ಭೈರವರ್ |
ಪೌಲಸ್ತ್ಯದೆಸೆಯ ಬಾಗಿಲ ಕಾದು ಸಂತತವಿ |
ಶಾಲಸೌಭಾಗ್ಯದಿಂದಿರ್ಪ ಭೀಷಣನಾಮ ಭೈರವ ಭಯಾನಕದೊಳು || ೧೧ ||

ತರವಾರಿಚರ್ಮಖೇಟಕಟಂಕವಿಭ್ರಾಜಿ |
ಕರನಿಕರ ಧೂಮಧ್ವಜಾಂಬಕ ಸುವರ್ಣಭಾ |
ಸುರಕಳೇಬರ ಮಹಾಕಾಳಸಹಿತ ಸ್ವಗಾಲಗಮನ ಫಣಿಭೂಷಣವನು ||
ಧರಿಸಿ ನಿಜಸಾರೂಪ್ಯಮಂ ಪಡೆದ ಭೈರವರ್ |
ನೆರೆದೆಂಟುಕೋಟಿಯಿಂದೀಶಾನ್ಯದೊಳ್ ನವೂ |
ದ್ಧುರಶೌರ್ಯಸಂಪನ್ನತೆಯೊಳು ಸಂಹಾರಾಖ್ಯಭೈರವನು ನೆಲಸಿರ್ಪನು||೧೨

ಶಿವನಿರೂಪದೊಳೆಂಟು ದೆಸೆವಾಗಿಲಲ್ಲಿ ಭೈ |
ರವರಸಂಖ್ಯಾತರ್ ದಿವಾರಾತ್ರಿಯೊಳ್ ಮಹೋ |
ತ್ಸವದಿ ಕಾದಿರ್ಪರಾಕೈಲಾಸದೊಳ್ ಸೋಮಸೂರ್ಯವೀಥೀಸಹಸ್ರಂ ||
ಸವನಿಸಿಹುವವರಲ್ಲಿ ಗಣವರ್ಯರೋರೋರ್ವ |
ರವಿರತಂ ಮುಖ್ಯರಾಗಿರೆ ಮೆರೆವುದಚಲ ಸ
ದ್ಭುವನಸೌಧಜನಿತಲತಿಕಾಕಂದ ಶ್ರುತಿಸಿಕರಶುಕನೇಪ್ಯವಹಾಕಂದವು || ೧೩ ||

ಪರಿಖಚಿತನವರತ್ನನಿಚಯದಿಂ ಪ್ರಚುರವಾ |
ಗಿರೆ ಮೆರೆವ ಕರುಮಾತಗಳ್ ಗಣನೆಯುಂ ಗಣೇ |
ಶ್ವರರ ಗಣನಾರಹಿತಮಣಿಗಣಾಂಚಿತಧರ್ಮಹರ್ಮ್ಯಾವಳಿಗಳ್ |
ಬರೆವೊಡೆಣಿಪೊಡೆ ಬಾಣಕರಕುರಗಪತಿಜಿಹ್ವೆ |
ಗುರೆ ನೋಳ್ಪೊಡಾ ಲೋಚನಸಹಸ್ರನಕ್ಷಿಗೆಯುಮ |
ದಿರದೆಸಲ್ ಮಿಕ್ಕಿಹರ್ಪುದೆ ಎನೆ ರಾರಾಜಿಸುತ್ತಿಹುದು ಕೈಲಾಸಶಿಖರ || ೧೪ ||

ಆ ಮಹಾಗಿರಿವರೇಣ್ಯದ ಮಸ್ತಕದೊಳು ನಾ |
ನಾಮಹೀರುಹವಿತತಿವ್ರತತಿಪ್ರತನಾಗು |
ಲ್ಮಾಮಲನಿಕುಂಜಪುಂಜಂ ರಂಜಿಸುವ ಕುಸುಮಕುಲಫಲಪ್ರಚಯದಿಂದ ||

ಆಮೋದಸಂಯುತಸಮೀರಸಂಚಾರದಿಂ |
ರಾಮಣೀಯಕಪಿಕಪ್ರಕರವಿಲಸತ್ತರು |
ಸ್ತೋಮದಿಂ [ತಾಮರಸಪೂರ್ಣಕಾ] ಸಾರದಿಮುದ್ಯಾನಸಿರಿ ಮೆಱೆದುದು ||
ಕರಕ ತಿಂತ್ರಿಣಿ ಪಾರಿಜಾತದಿಂ ಚೂತದಿಂ |
ಶಿರಿಷ ಪಿಪ್ಪಲ ಕರ್ಣಿಕಾರದಿಂ ಬದರದಿಂ |
ಸುರಗಿ ಮಂದಾರ ಹಿಂತಾಲದಿಂ ತಾಲದಿಂ ಜಂಬುಜಂಬೀರದಿಂದ ||
ಕುರವಕ ಕಪಿತ್ಥ ಪಿಚುಮಂದದಿಂ ಕುಂದದಿಂ |
ಹರಿಚಂದನ ಕುಟಜಾಮಲಕದಿಂ ತಿಲಕದಿಂ |
ಕರವೀರ ಪಾಟಲಿ ತಮಾಲದಿಂ ಸಾಲದಿಂದುಪವನಂ ಮಿಗೆ ಮೆಱೆದುದು ||
ನಾರಿಕೇಳಂ ತಾಳ ಬಿಲ್ವ ಬಕುಳಂ ಕೋವಿ |
ದಾರ ಕಾಶ್ಮೀರ ಸಿಂಧುವಾರಾಶೋಕ ಬದರಿ ಮಂ |
ದಾರ ಸುಪಟೀರ ಮುಸಿ ಮಾತುಲುಂಗ ಲವಂಗ ಪುನ್ನಾಗ ಪಾರಿಭದ್ರಂ ||
ಹೇರಿಳೆ ಬಾಳೆ ಚಳ್ಳಿಪ್ಪೆಯುರುಟಾಳ ಸಡೆ |
ಗೇರಾಲ ತಾರೆ ತಮಕಣಿಲೆ ಸಂಪಗೆ ಬಸಿರಿ |
ನೇಱಿಲೆಲವಂ ಕೌಂಗು ಸುರಹೊನ್ನೆ ಹೊನ್ನೆಯಿಂದಾಬನಂ ಕಣ್ಗೆಸೆದುದು ||೧೭
ತರಣಿವೊಲ್ ವಿಮಲೋದಯಾನ್ವಿತಂ ವೇಶ್ಯಾಸಿ |
ಕರವವೊಲ್ ವಿಟಪೀನರಾಶ್ರಯಂ ಚಾರುವಿ |
ಸ್ತರವರ್ಣಕಕೃತಿವೊಲ್ಕ ಸುಮನಷ್ಟಪದಪ್ರಕಟಸ್ರಶೋಭಿತಕರ ||
ಸಿರುತಂ ಸುರಾರಿವೊಲ್ ಸುಮನೋಹರಂ ಸಿತಾ |
ಕರನವೊಲ್ ಸಕಲೌಷಧೀಶ ತಾನಾಗಿ ಭಾ |
ಸುರಮಾದುದಾರಾಮ ಪ್ರಮುಖಕೇಳೀಧಾಮ ಲೋಕಾಭಿರಾಮಮಾಗಿ ||೧೮||
ಸೌರಭದ ಸೊಗಸಿಂಗೆ ಮಿಗೆ ಕವಿದು ಮೊರೆಯುತಿ |
ರ್ಪಾಱಡಿಯ ಪಡೆ ಮುಗಿಲ್ ಪೋಲ್ವೆಳವಳಿರ್ಮಿಂಚು |
ಕೀರ ಪ್ರಚಯಮರೆಯಚೆ ಸುರಚಾಪಮುದಿರುವೆಲರಾಲಿಗಲ್ ಪಿಕ ಕರ್ಮುಕಿವ ||
ಕೋರಕದಿ ಸುರಿವ ಸೊನೆಮಸಿ ಮಳೆಯದಾಗೆ ಸಹ |
ಕಾರಸಾಂದ್ರೋಪವನಮಧ್ಯದೊಳ್ ಕಣ್ಗೆಸೆವ |
ಬೀಱುತಿರ್ದುವು ಮೇಘಕಾಲದ ಸುಲೀಲಾವಿನೋದಮಂ ಮೋದದಿಂದ ||೧೯||

ವನವನಾಶ್ರಯಿಸಿ ಸವಿಯಾಹಾರಮಂ ಕೊಂಡು |
ವಿನುತವಲ್ಕಲವಸನಮಂ ಪೊದೆದು ಪರ್ಣಜಡೆ |
ಯನು ಧರಿಸಿ ಚಳಗಾಳಮಳೆಬಿಸಿಲನಾಂತುದಚಲತ್ವದಿಂ ಮೋನದಳೆದು ||
ಅನುದಿನ ತಪಂಗೈವ ಮುನಿವರ್ಗಮೆನೆ ಫಲದ |
ಗೊನೆ ಕಮಂಡಲದಿಂದ ತೆಂಗುಗಳ್ [ನೆಲಸಿಂದು] |
ಬನದೊಳುನ್ನತವಾಗಿ ನೆರೆದಿಪ್ಪ ವಿಜಾತಿಗೆಡೆಗುಡದಿಪ್ಪವು ಸಡಗರದೊಳು ||
ಪರಿಪಕ್ವಸತ್ಫಲಪ್ರಚಯರುಚಿಯಿಂದ ಭೂ |
ಚರವರ್ಗಮೈದೆ ತಣ್ಣನೆ ತಣಿವುದೀವರೆಗ |
ಮುರಗಸಂದೋಹ ಸವಿಗಾಣ್ಬೊಡಟ್ಟುವೆನೆಂದು ವೃಕ್ಷಾಭಿಮಾನದೇವಿ ||
ಕರುಣದಿಂ ಕಳುಹಿಸಿದ ಮಾಳ್ಕೆಯಿಂ ಜೇರ್ಗಳೊಳ್ |
ನೆರೆ ಕಾಯ್ತು ಪಲಸುಗಳ್ ಕಣ್ಗೆಸೆವುವಾವನಂ |
ತರವಲಯವಳ್ಳಿ ಸತ್ಸೌರಭಕ್ಕೆಳಸಿ ಬಳಸಲ್ ತುಂಬಿಬಂಬಲುಗಳು || ೧೧ ||
ಜನಿಸಿದಾರಭ್ಯದಿಂ ಸೌರಭ್ಯಮಂ ಬಿಡದೆ |
ಮಿನುಗಳಯುದನುಗೆಡದೆ ಕರಯ ಮಲ್ಲಿಗೆಯ ಪಾ |
ವನಕುಸುಮಪರಿಮಳವನುಂಡು ತನ್ಮಕರಂದದೊಳ್ಮಿಂದು ಪುಷ್ಪಾಡಿಯೊಳು ||
ಮನವೊಲ್ದು ಪೊರಳ್ದಿವಿಸಿಂದ ಕಪ್ಪಾಗಿ ಕ |
ಮ್ಮನೆ ಕೆದಱಿ ಝೇಂಕರಿಸಿ ಸಂಚರಿಪ ಷಟ್ಪದಿಗ |
ಳನುರಾಗಿಸುತ್ತಿರ್ಪುವಾವರವನಾಂತದೊಳ್ ಸಂತತಂ ಸೈಪಿಸಿಂದ || ೧೨ ||
ಮಿಱುಪ ತಳಿರಂತೆಪೊಳೆದೊಪ್ಪೀಗಿಪ್ರಚಾರಮಂ |
ಬರದಪೊಲ್ ಪಂಸಪ್ರರೋಹಿ ವನನದಿಯಪೊಲ್ |
ತಱುಗಿಮತ್ಕಲಿಕಾಸಮೇತಮಸಿಮಿಷಪುರಿಯ ತೆಱದೆ ಸುಮನೋರಾಜಿತಂ ||
ಸ್ಫುರಿಪ ಗಣಿಕಾಗ್ರಪದಪೊಲ್ ಪರಭೃತೋತ್ತಮಂ |
ವರನದಿಯಪೊಲ್ ದ್ವಿರೇಫಾಂಕಿತಮದಾಗಿ ಭೂ |
ಸುರಮಾದುದಮಲಕೋಳಿವನಂ ನಿಟ್ಟಪರ ದಿಟ್ಟ ಪಾವನಮಾಗೆ || ೧೩ ||
ವರಕೀರವಾರಸಚಟ್ಟಡಿಂ ಶೈತ್ಯದಿ |
ಸ್ಫುರಿತಮಂದಾನಿಲಸ್ಪರ್ಶದಿಂ ಕಿಸಲಯೋ |
ತ್ಕರುಷಪ್ರಶೋಭಿತಾನೋಕಹಪ್ರಚಯಸ್ವರೂಪದಿಂ ಪ್ರೇಕ್ಷ್ಯಮಾದ ||

ಉರುಫಲಕುಲಾತಿಮಾಧುರ್ಯರಸದಿಂ ಸುಮೋ |
ದ್ಧುರಗಂಧದಿಂ ಪಂಚತತ್ವಾಧಿಕಾರಮಂ |
ಧರಿಸಿದಂತಾರಾಮ ಶಿವನ ಕೈಲಾಸಧಾಮ ಲೋಕಾಭಿರಾಮಮಾಯ್ತು || ೨೪ ||

ಸಂತತಂ ಮಾರನಾರ್ತ್ಯದತ್ತಣಿಂ ರಮಿಸಿ |
ಸಂತೈಸುತಾಲಸಂಗೋಳ್ವಳಿಯ ಬಳಗಕೊಲ |
ವಂ ತೋಱಿ ತನಗಾದವನ ಮೆಱಗಲೀಯದೆ ಪ್ರಿಯಂಗೂಡಿ ಸಂತಸದೊಳಂ ||
ಸಂತಾನಮಂ ವನಸ್ಪತಿಯೊಳ್ ಪಡೆದು ಸೌಖ್ಯ |
ಮಂ ತಳೆದು ಜನಹಿತಮೊಳ್ಪಾರಾಮಸಿ |
ಮಂತಿಸಿ ಮಹಾಪತಿವ್ರತೆಯಂತೆ ಕಂಗಳಿಗೆ ಮಂಗಳಮದಾಗಿರ್ದುದು || ೨೫ ||

ಬಿರಿದಪ್ಪ ಮಲ್ಲಿಗೆಯ ಬಲರ್ದಳ್ ಪೞಿ ಜೇನ್ಪು |
ವರಿದು ನೈದಿಲ್ಪುಷ್ಪಡಿಯನಸೆದು ಕರ್ಬೊಳೆಸ |
ಧರಿಸಿ ಬಂದುಗೆವೂವಿನ ಪರಾಗಮಂ ಪಳಚಿ ಪೊರಳ್ದು ಚಂಬೊಗರನಾಂತು ||
ಹರಿಹರವಿರಿಂಚಿಗಳ್ ಗುಣಪೆಸಕಮಂ ತಳೆದು |
ಚರಿಸುವಂ ಮೆಲ್ಲಮೆಲ್ಲನೆ ಮಂದಮಾರುತಂ |
ಮಿಱುಗುವುಪವನದೊಳ್ ಶೈತ್ಯಸೌರಭ್ಯಮಾಂದ್ಯಂಬೆತ್ತು ಮಸಕದಿಂದ || ೨೬

ಮೊರೆವ ತುಂಬಿಗಳೊಳ್ ವಿಹರಿಸಿ ಮರದೞಗಳೊಳ್ |
ಚರಿಸಿ ತಣ್ಗೊಳದೊಳಂ ಕ್ರೀಡಿಸಿ ಲಸತ್ಸುಮೋ |
ತ್ಕರಗಂಧಮಂ ತಾಳ್ದು ಪರಿಪಕ್ವಫಲಗಳಂ ಸೊಗಸಿ ಶುಕಸಮ್ಮೋಹಿಷ್ಟಿಗೆ ||
ತಳಿಸಂದು ನವಪಲ್ಲವಾವಧೂಪ್ರಚಯದೊಡ |
ವೆರಸಿ ಸಮ್ಯೋಗಿವೋಲ್ ಮಂದಾನಿಲಂ ಮೆಲ್ಲ |
ನುಱಿ ತಿರುಗುತಿರ್ದ ಶ್ರೀನಂದೀಶ್ವರೋಪವನವಲಯದೊಳ್ ಸಮುಳದಿಂದ ||

→ ಇಂತು ಮೂಱನೆಯ ಸಂಧಿ ←

## ॥ ನಾಲ್ಕನೆಯ ಸಂಧಿ. ॥

ಸೂಚನೆ :--

ವಿಬುಧಪ ರಜತಗಾತ್ರವರಗೋತ್ರಪವಸದ ವಿ |
ಸ್ತರಣಪ್ರಭಾಪುಂಜದಿಂ ರಂಜಿಸುವ ಸಭಾ |
ವರಮಂಟಪದೊಳ್ಭವನಿರ್ದನು ವಿಶಿಷ್ಟಮಣಿವಿಷ್ಟರಾಸೀನನಾಗಿ ||

ತಾರತಾರಾಧಸತ್ಕಾಯ ಕಾಯಜಮದವಿ |
ದಾರ ದಾರಾರ್ಪಿತಾರ್ಧಾಂಗಪಘನ ಘನಮಹಿಮ |
ಸಾರ ಸಾರಸಮಿತ್ರಕೋಟಿಕಳಾಧರ ಧರಸುನಿಲಯ ಲಯಕಾಲ ವಿಶ್ವಾ |
ಕಾರ ಕಾರಣ ದಿವಿಜವಿನತಾನಿಲಾಹಾರ |
ಹಾರ ಗಿರಿಜಾನಾಥ ನಾಥಜನವಿರಹಿತೋ |
ದ್ಧಾರ ಜಿತಮತ್ತರಾಜ ರಾಜರಾಜಪ್ರಿಯ ಶ್ರೀನಂದಿನಾಥ ಪಾಹಿ || ೧ ||

ಪ್ರೀತಿಯಿಂದಾದರಿಸಿ ಸಂಸಾರಘೋರುಪರೋ |
ತ್ಪಾತಚಂಡಪ್ರಭಂಜನ ವೃಜಿನಸಂಕಸಿ |
ಧೂರ್ತಲೀಲಾಸರಿತ್ಪ್ರವಶ ಸತ್ಕಥೆಯ--ತದ್ಗಿರಿವರದ ಮೇಲ್ಗಡೆಯೊಳು ||
ನೂತನಾರಾಮ ಕಮಲಾನ್ವಿತದ ಚಕ್ರಶೋ |
ಭಾತಿಶಯದಿ ಸುಪರ್ಣರಂಜಿತದ ಕುಸುಮಶರ |
ಜಾತಲೀಲಾಸ್ಪದದ ವನವಾಲಿಯಿಂದದಿಂ ಕಣ್ಗೆ ಸೊಗಸಾಗಿರ್ದುದು || ೨ ||

ಇಂತು ಚೆಲ್ವಾಂತೆಸೆವ ವನವಲಯಕಂದಮರ |
ಕಾಂತಾಕದಂಬವೊಗ್ಗಾಗಿ ಪರಿಪಕ್ವಫಲ |
ಸಂತತಿಲತಾಂತಾಪಚಯಮೆಸಗಿ ಸಜ್ಜಲಕ್ರೀಡೆಯನೊಡರ್ಚಲೆಂದು ||
ಸಂತಸದಿ ಮುಂ ತಳರುತಿರೆ ಕವಿಯುತಿಕ್ಕೆಲದೊ |
ಳಂ ತವೆ ಮಸಂದಣಿಯುದಂಗಸೌರಭಕುಲಿಯು |
ಕುಂ ತುಱುಗಿಕೊಂಡಳಿಕಳಭಕುಳಂ ಬಳಸಲೋರಂತೆ ನಡೆತರುತಿರ್ದರು ||

ಬಿನ್ನಣದಿ ಪುಟವಿಳಿವ ಸೊನ್ನಯ ತಿರಸ್ಕರಿಪ |
ಚೆನ್ನೆಯರ್ ಶೋಭಾಪ್ರಸನ್ನೆಯರ್ ಪೊತ್ರಣಿಯ |
ರನ್ನೆಯರ್ ಸದ್ಗುಣೋಪಪನ್ನೆಯರ್ ಸೌಖ್ಯಸಂಪನ್ನೆಯರ್ ಪೊಸಹರೆಯದ ||

ಕನ್ನೆಯರ್ ಪ್ರಿಯರ ಮನವನ್ನೆಯರ್ ಸತ್ಕಲಾ |
ಭಿನ್ನೆಯರ್ ಲೋಕಮೋಹನ್ನೆಯರ್ ವಿವಿಧವಿ |
ತ್ಪನ್ನೆಯರ್ ಸ್ಮರಸ್ಯಪನ ಮನ್ನೆಯರ್ ನಸುನಗೆಯ ಚೆನ್ನೆಯರ್ ನಡೆತಂದರು ||
ಕರಿಗಮದ ಕಾಂತೆಯರ್ ನಗೆಮೊಗದ ನಾರಿಯರ್ |
ಗುರುಕುಚದ ಗುಣಧಿಯರ್ ಸಿಡುಮೊಳ್ ಸಿಂಹಿಯರ್ |
ಪರಿಮಳದಪ್ರತಿಮೆಯರೊಲ್ಪಿತ್ತ್ರಿಯಸೊಬಗೆಯರಲ್ಲಿಯಲತಾಂಗಿನಿಯರು
ಸಿರಿಗುರುಳ ಸಿಪ್ಪುಣೆಯರ್ ಚೆಲ್ವಿನ ಚಪಲೆಯರ್ |
ತರಳಲೋಚನದ ತರಳೆಯರಧಿಕಮೋಹನದ |
ಭರತ ಭಾವಯುರು ರಾಗಾನ್ವಿತದ ರಮಣಿಯರ್ ಬಳಕೊಳ್ಳುವರು ತಿರ್ದರು ||
ವರಚಿತ್ರಸಿಂಹಪ್ರಕರ ಮಧುರಸ್ವರೋ |
ತ್ಕರ ಮನೋಹರಮನಿಕರ ಸತಪ್ರತಿಸಮದಮು |
ಸ್ಫುರಿತಕೃಷ್ಣಾಘುತಥಮರಾಧನವಚಕೋರವಾರಸ್ಮೃತಕಳಾಭಿಮುಖದವಿ (?) ||
ಪರಿಶೋಭೆವೆತ್ತ ಮೃದ್ಯಾನಂಗನಂದನಾಂ |
ತರಕೆ ನಡೆತಪ್ಪಂತೆ ಪ್ರಮುದಿತಸ್ವಾಂತದಿಂ |
ದುರುಚಕಿತಮೃಗಶಾಬಸಮೃಶಾಂಬಕೀಕದಂಬಂ ನಡೆದು ಬರುತಿರ್ದುದು ||೬||
ಕರಟಕೋಕಿಲಗಳಂ ಧ್ಯಾನದಿಂ ಗಾನದಿಂ |
ಬರುಹಿಚಕ್ರಂಗಳಂ ಕಚಗಳಿಂ ಕುಚಗಳಿಂ |
ವರತಟಿಚ್ಚಯವನಗಳಂ ಸಿಜಾಪಾಂಗದಿಂದಂಗದಿಂ ಕೀರರಾಜಶುಕಪಾತವ ||
ಉರಗವಂ ವಿಲಸತ್ಸ್ವಪಾಣಿಯಿಂ ವೇಣಿಯಿಂ |
ವರಕವಳವೊಳ್ಕೃಣಿಮನಪರದಿಂದಧರದಿಂ |
ಸರಸಿರುಹಕೇತಕಿಯ ಮುಕುಳಗಳಿಂ ನಖಗಳಿಂ ಜಯಿಸಿಯಮರ್ತ್ಯೆತಂದರು ||೭||
ಎರಳೆ ಪುತ್ರಾಲ ಪೆಸಲನೆಳೆಗಪ್ಪು ಪಳಸನಿಗೆ |
ಕುಚಾಹೆಂಬರೀಸುಪತಿಯರ ಪದಸಿಂಧುನಪ |
ಕರಬಿಂಬದೊಳ್ಜೃಂಭಿಪುಪ್ಪ ಕೈರವಾಜನದಸುಧ್ರಮರಚಂಪ್ರೋದ್ಗಮಂ ||
ಕುಂದುಮಿಂದಹೀರದರ್ಪಣದೊಳಸ್ಫುಪ ಪಿಧ |
ಸ್ಮರಚತುವರ್ಣದ ಕೈಗೆಸ್ಪು ಬಗೆಯಂದು ಸಿ |
ಜೃಂಗಾಂತು ಚಿತ್ರಮಂ ನೋಡುವ ವಧೂಜನಸ್ತೋಮಮಾದಾಮುದಧಿ ||

ಕುಡಿತೆಗಣ್ಗೊನೆ ಮಿಂಚುಗಳ್ ಪೊವಳ್ದಸೆವ ಸೋ |
ರ್ಮುಡಿ ಮುಗಿಲ್ವೊತ್ತ ನವರತ್ನಮಯಹಾರಮು |
ಗ್ಗಡದಸುರಚಾಪನೂಪುರರವಮೆಮೊಳಗುಮೈಸೊಬಗೆಸೆವಸೋನೆಗಱೆಯ |
ಕಡುವಿಚಿತ್ರಮಕಾಲದೊಳ್ ಬನಕೆ ಕಾರ್ಗಾಲ |
ನಡೆತರ್ಪುದೆಂದು ನೋಳ್ಪವರು ಬೆಱಗಾಗಲಾ |
ಮಡದಿಯರ ಮೋಹರಂ ಮೊಗ್ಗರಿಸಿ ಬರುತಿರ್ದುದಾಗಳನುರಾಗದಿಂದ ||೯||

ಕಳಭ ಕಾಳಾಹಿ ಕಿಸಲಯ ಕೀರ ಕುಲಿಶ ಕೂ |
ರ್ಮ ಲಘುಕೇಸರಿ ಕೈರವಂ ಕೋಕ ಕೌಮುದಿ ವಿ |
ಮಲಕಂಜ ಕಸ್ತೂರಿಯುಂ ಗಮನ ವೇಣಿ ಕರತಳ ಲಸದ್ವಾಕ್ಯ ರದನಂ |
ಚಲನ ಮಧ್ಯಾಂಬಕ ಸ್ತನ ಹಸನ ವದನ ತನು |
ಕಲಿತಸೌಗಂಧದಿಂದೇಳಿಸುವ ಕಾಂತೆಯರ್ |
ನಲವಿನಿಂ ವನವಲಯದೊಳ್ ಕ್ರೀಡಿಸಲ್ಕಾಗ ಮೆಲ್ಲನೈತರುತಿರ್ದರು ||೧೦||

ಕಣ್ತಾವರೆಯ ಪೋಲ್ವ ಕಾಮಿನಿಯರಳಮುಂಬಿ |
ವೆಣ್ದುಱುಬಿನಾಂತ ವನಿತೆಯರು ಪೊಂಬಾಳೆಗಳ್ |
ನುಣ್ದೊಡೆಗಳಿಂದಿಳಪನೀಱೆಯುರುಸೊಬಗಿಡಿದುಶೋಭಿಸುವಸೌಂದರಿಯರು |
ಪಣ್ತಾಲವಣ್ಣಱಿವ ತುಟಿಯ ಪ್ರಮದೆಯರು ಮಿಗೆ |
ಜಾಣ್ತುಱುಗಿ ತೋರ್ಪ ಜವ್ವನೆಯರಲಗೋರ್ಗಲುಗಳ್ |
ಪೆಣ್ದಂಡವಾಮುದೆನೆ ಪದೆಪಿನಿಂ ಮುನವನಕೆ ಬಂದರಬ್ಜಾನನೆಯರು ||೧೧||

ಬಿಸಜದೆಸಳೆಸಕವ ಮಸುಳಿಸುವೆ*ಸಳ್ಗಣ್ಣಸಿಯ |
ರೊಸಗೆಯಿಂ ಮಿಸುಪಸಿಯ ಜಸಗಿಡಿಪ ಮಧ್ಯದು |
ಲ್ಲಸದ ಸತಿಯರ್ ಮುಸಕವಸುವಸದಿ ಕಸವರದ ರಸುಮೆಯೋಳಿಸುವಂಗದ |
ಪಸುಳೆಯರ್ ದೆಸೆದೆಸೆಗವೊಸೆದು ಪಸರಿಸುವ ತ |
ಮ್ಮುಸಿರ ತನಿಗಂಪ ಬೀಱುವ ಸೊಬಗೆಯರು ಮಾ |
ನಸದಿ ಜನ್ಮಿಸಿದವನ ವಿಶಿಖವಿಸರದಿನೆಸೆವ ಪೊಸಬನಕೆ ನಡೆತಂದರು ||೧೨||

ಪದ್ಮಾಭಿರಾಮತೆಯ ಗೆಲ್ವ ವೃತ್ತಾನನದಿ |
ಪದ್ಮಕರ್ಣಿಕೆಯ ನೆಱೆ ಜಱೆವ ತುಂಗಸ್ತನದಿ |
ಪದ್ಮನಾಳಪ್ರಶೋಭೆಯ ಸಮತೆಗೊಳವ ಕೋಮಲಿತಸದ್ಬಾಹುಯುಗದಿ |

ಪದ್ಮತಂತುವನಿಳಿಪ ಘನಸೂಕ್ಷ್ಮಮಧ್ಯದಿ ಸು |
ಪದ್ಮಗಂಧವ ಮಿಗುವ ಲಲಿತಾಂಗಪರಿಮಳದಿ |
ಪದ್ಮವನದಂತೆ ರಸಿಕೌಘರೋಲಂಬ ನಲಿಯಲ್ ಸತಿಯರೈತಂದರು || ೧೩ ||
ರಸವೆ ರಂಜಿಸುವಂತೆ ಚೆಲ್ವೆ ಚೈತನ್ಯವಾಂ |
ತಸೆವಂತೆ ಚೆಲ್ವವೊಲ್ ಪ್ರನ್ನಮಪ್ಪಂತೆ ಭಾ |
ವಿಸಲಲಂಕಾರವಾಕಾರವಾಂತಂತೆ ಕಲರುತಿಯೆ ಮಾತಾಡುವಂತೆ ||
ಬಸೆದು ಚಾತುರ್ಯವೇ ಚಾರುತನುವೆತ್ತು ಕರೋ |
ಭಿಸುವಂತೆ ಕಳೆಯೆ ಕಾಲ್ಬಳೆದು ನಡೆವಂತೆ ಸವಿ |
ಯೊಸೆದು ಸಾಲಿಡುವಂತೆ ವನಿತೆಯರ್ ನಡೆತಂದರುಪವನಕೆ ಮಹಿಲದಿಂದ ||
ಇರದೆ ಸಿಂಗರದಿಂಗಡಲ್ ಮೇರೆವರಿವಂತೆ |
ಸ್ಫುರಿಸ ತಿಂಗಳ ಬೆಳಗು ಮೊಂಪರಿಸಿ ಬಂದಂತೆ |
ಪರಮಸನ್ಮೋಹನದ ಮೊತ್ತ ಮೊತ್ತರಿಸಿದಂತುಜ್ಜ ಚೆಲ್ವು ಚಮರಿಸಿದ ||
ಪರಿದು ಬರ್ಪಂತೆ ಕಾಮನ ಕೀರ್ತಿ ನಡೆವೆತ್ತು |
ತೆಱದಿಂ ವಸಂತವರ್ಪಂ ಪರಿಜನಾಂತು ಚೆ |
ಚ್ಚರವ್ಯಮವಂತೆ ದೇವವಧೂಟಿಯರ್ ಬಂದು ಬನದೊಳಂ ಬಿನವಿಸಿದರು ||
ಲಲನೆಯರ್ ಲಲಿತವನವಳಯದೊಳ್ ಮಹಿಲದಿಂ |
ದೊಲಿದು ಸಂಚರಿಸಿ ಬಿಡದಲರಾಯಲೆಂದು ಕೋ |
ಮಲಲತೆಗೆ ಕಲಿಕೆಗೆ ಸುಕಿಸಲಸುಕೆ ಕುಟ್ಮಲಕೆ ಮಂಜರಿಗೆ ರಂಜನೆಯೊಳು ||
ನಳನಳಿಪ ಮುಪ್ಪನುಂ ಬೆರಲ ಕೈವಳವ್ರುಗುರ |
ಕಲಶಕುಚಮುರುಸೊಬಗ ಬಿಂಬಾತ್ತಂಗುಟಿಮುದಿಗ |
ಳಲಿ ಸಿಂದು ವ್ಯೈಸಿಮಿರೆ ಕಂಬೆಳಗು ಬಿಸ್ಪಣಾನನಾನರಿಸೆ ಪ್ರೂದಿಜಿದರು ||೧೬||
ಸಲ್ಲಲಿತಜಾತಿಯೊಳ್ ತಳ್ತು ಪಾದರಿಯಿದಿರ |
ಸಲ್ಲದೆಂದಳಸುತುಂ ಮಧುಪನ ಪ್ರಸಂಗಮುಂ |
ಸಲ್ಲದೆಂದುಳವತಿಪವಿತ್ರತ್ವಮಂ ತಳೆದುಪೆಂದು ಸಂಪಗೆಯ ಪೊಗಳ್ದು ||
ಎಲ್ಲರೊಳ್ ಕೇತಕಿಯ ಕಂಟಕಿಗಳೆನುತ ಜತಿ |
ಯುಲ್ಲಿ ಕೊಯ್ವಂತೆ ವನವಲಯದೊಳ್ ಪರಿಪರಿದು |
ನಲ್ಲವೆಣ್ಗಳ್ ನಲಿದು ಪುಷ್ಪಾಪಚಯಗೈದುನೆಸಗಿದರಾವನಾಂತರದೊಳು ||೧೭||

ಜಱಿವುಗುಳ್ದಪೆದೊಡಂ ಚೂತವಕುಳಾಶೋಕೆ |
ಯುರಳ್ದೀರ್ವರ್ವೆಂದವಂ ಬಿಟ್ಟಪ್ಪಿ ಸವಿನುಡಿಯು |
ಕರತಳದೆ ನೋಂಕಿ ಸತಿ ಕೊಂಡಾಡಿ ನಗೆಗೂಡಿ ನೋಡಿ ಮಿಗಿಲೊಲ್ದು ಪಾಡಿ ||
ಕುರವಕವನನುಲಮಂದಾರಪ್ರಿಯಂಗುವಂ |
ವರಕರ್ಣಿಕಾರಚಂಪಕತಿಲಕಪುನ್ನಾಗ |
ತರುಗಳಂ ಸತ್ತ್ರೀ ಪ್ರಾವಿಣ್ಯಸರಾತರುಣಿಯರ್ ತ್ವರಿತದಿಂದಱಿ ಬನದೊಳು ||

ಪಱಿವೆಗುರುಳ್ವರು ಕಮ್ರಲಗಳಂ ಪಿಕರವೆಯು |
ರಱಿ ಚೆಂದಳಿಗಳಂ ಗಳಸುತಿಯುವರ್ ಪಣ್ |
ನುರಗಸಿಘವೇಣಿಯರ್ ಬಾವನ್ನಮಂ ಸಿಂಪಮಧ್ಯೆಯರ್ ಪುನ್ನಾಗಮಂ ||
ಕರಿಗಮನೆಯರ್ ಕದಳಿಯಂ ಚಕ್ರಮಿಥುನಭಾ |
ಸುರಸಯೋಧರೆಯರ್ ಸರೋಜದಳಂಗಳನು ಪರಿ |
ಪರಿಪಱಿಸಿದರ್ ಪರಮಪಾವನವನಾಂತದೊಳ್ಕಾಂತೆಯರ್ ಸಂತಸದೊಳು ||೧೯

ಯುತಿಗಳ್ಗೆ ವಿರಹಿಸಂತತಿಗಳ್ಗೆ ಸತತಮು |
ನ್ನತಸುರಗಿಯನಾಗಿರ್ದ ಕಾರ್ಣಿಕ ದರ್ಶಕಂ |
ಚತುರತೆಯೊಳಂ ಸುರಗಿಯೊಂದು ಪೆಸರಿಟ್ಟ ಸತಿಹಿತದಿ ದಂಪತಿಗಳೊಲ್ದು ||
ಕೃತಫೋಗದಿಂ ಪರ್ವಗಲ್ತಿಪ್ರಿಯಮೆಂದು |
ನುತಿಸಿಯೋರೊರ್ವರ್ಗೆ ಪೇಳ್ದಪ್ಪಿ ಪ್ರಿಯಂಗುಸುಮ |
ತತಿಯಂತ್ರಿಜುವರಾವನಾಂತದೊಳ್ ವಿಯಂತಳದ ಕಾಂತೆಯರ್ ಸಂತಸದೊಳು ||

ತಿಳಿಯುಮುಸಿರ್ವುದು ಜನಂ ಸಹಕಾರವೆಂಬ ಪೆಸ |
ರಿಳೆಯೊಳಿರಸಲ್ಲಗಲ್ದ ಗೆಮಸ್ಸಹಕಾರ |
ಮಳವಡಿಸಿದಪುದಿಸೆಂದತಿಕೌತುಕದಿಂದ ತರುಣಾರುಣಪ್ರಭೆಯೊಳೆಸೆವ ||
ಎಳೆಯ ಮಾಂದಳಿರ ಕೊಯ್ದರ್ ತಳದಿರ್ಕೆಯ ಕೋ |
ಮಲಲತಾಯುತಿವೆತ್ತ ಮೃದ್ವಂಗಿಯರ್ ವನದ |
ವಲಯದೊಳ್ ವಹಿಲದಿಂ ವಿಹರಿಸಿದರಾಗಳಸುರಾಗದಿಂದೇವೇಳ್ವನು || ೨೧ ||

ನಡೆವಕ್ಕಿಯೊಡನೆ ನಡೆವಾಡಿ ಕನ್ನಡವಕ್ಕಿ |
ಯೊಡನೆ ಸವಿವಾತಾಡಿಯುಲರ್ವಕ್ಕಿಯೊಡನೆ ಬೆಂ |
ಬಿಡದೆ ಮಿಗೆ ಪರಿದಾಡಿ ಸರವಕ್ಕಿಯೊಡನೆ ಸೊಗಸೂಡಿ ನಲಿದಾಡಿ ಪಾಡಿ ||

ಮುಡಿವಕ್ಕಿಯೊಳ್ ಮುಡಿಯ ಮುಟುಕಮಂ ಮಾಡಿ ಸವ |
ಗಡೆಯ ಸಖಿಯಿಂಡಿಯರ್ ಪಿಂಡೆಳ್ದು ವನದೊಳೊ |
ಗ್ಗಡೆಯುಮುಮ್ಮೇಳದಿಂ ಕೆಳೆಯುತ್ತ ಮಳೆಯುತ್ತ ಪೊಳೆಯುತ್ತ ವಿಹರಿಸಿದರು

ಜಲಜಮುಖ ರಂಭೋರು ಬಿಂಬಾಧರ ಭ್ರಮರ |
ಕುಲಶಿರೋರುಹ ಲತಾಮಧ್ಯ ಕಿಸಲಯಚರಣ |
ಲಲಿತಚಂಪಕಸುನಾಸಿಕ ಶ್ರೀಫಲಸ್ತನ ಮರಾಳಗತಿ ಕೈರವಾಕ್ಷಂ ||
ಮಲಯಜಸುಗಂಧ ಶುಕವಾಕ್ಪಿಕಾಲಾಪ ಕೋ |
ಮಲಿತಭುಜಪಾಶ ಕುಂದರದಂಗಳೊಪ್ಪಲಾ |
ಲಲನೆಯರ್ ನಡೆವನದ ಪೊಂಗಿಸಿಂ ಪೊಂಗಿ ವಿಹರಿಸಿದರ್ ವನಾಂತರದೊಳು ||

ಆ ರುಚಿರಪಾವನವನಾಂತದೊಳ್ ಸಂತತಂ |
ಕೈರವದ ಕೆಳೆಯನಂಬುಜದ ಬಿದ್ದಿನನಮಲ |
ಮಾರುತನ ಮಿತ್ರಸುರುಕಾರ್ಮಿಂಚುನವರತ್ನಕೋಟಿಗಳ ಸಮುಚ್ಚಯದೊಳು ||
ಓರಂತೆ ನಿರ್ಮಿಸಿದ ಬೊಮ್ಮನೆಸೆ ಕೈವಶಾ |
ಸ್ತ್ರೀರುಪದ್ಧತಿಗೆ ತನಿರ್ನನೆಯೆನಲ್ ಮೆರೆವುದು ಪು |
ರಾರಿಯೊಳಗಣಾಳಿ ಮುಕ್ತಿರೋಲಂಬಿಕಾವೇಶವತ್ಯುಸುಮಮಾಲೆ ||೨೪||

ಮರಕತದ ನೆಲಗಟ್ಟು ಮಾಣಿಕದ ಜಗತಿ ವಿ |
ಸ್ಫುರಿಪ ಹೇಮದ ಕಟ್ಟು ಪರಿಸಿಲಮಣಿಯ ತೊಲೆ |
ವರಸ್ಫುರುಸ್ತಂಭಂಸುಮೌಕ್ತಿಕದ ಜೋಗರಿವೈಡೂರ್ಯಮಯಜೋದಿಗೆಗಳು ||
ಮಿಂಚುವ ಗೋಮೇಧಿಕಕಪೋತಂ ಪವಳಶೋವೆ |
ಯುರುಪುಷ್ಯರಾಗದಿಂ ಮಾಗಿಸಿದ ಬಾಗಿಲಾ |
ಗಿರಿಜಾಮನೋಧವನ ಮಿಸುಪೋಲಗದ ಭವನ ಮೆರೆವುದತಿಶಯವಿಭವದಿಂ ||

ಮಿಂಚುವ ಮಣಿಮಯಮಕರತೋರಣದ ಲೋರಣದ |
ಲುಮಿ ತಳ್ತ ಚೀನಚೀನಾಂಬರದ ಪೊಂಬುರುದ |
ಸುರುಚಿರವನೇಕಸುಪತಾಕೆಗಳ ಜೋಕೆಗಳ ತಳತಳಪ ತಳೆಯ ಕಳೆಯ ||
ಹರಡುವ ಸುವರ್ಣಕಳಶಕಳಸದಿಂ ವಿಳಸದಿಂ |
ದುಮಿ ಬಿಗಿದ ರತ್ನಮುಕುರಂಗಳಿಂ [ಪೊಗಳಿಂ] |
ವಿರಚಿಸುವ ನೃತ್ಯಗಾಯನದಿಂದ ಜಸದಿಂದ ತತ್ಸಭಾಲಯಮೆಸೆದುದು ||೨೫||

ಮಲ್ಲಿಗೆಯ ಮಾಲೆಗಳ್ ಮಿಸುಪ ಮಂಟಪದಗಲ |
ದಲ್ಲಿ ನೇಲ್ತಿರಲು ಸೌರಭ್ಯಕಳಸಂಕುಲ ಸ |
ಮುಲ್ಲಾಸದಿಂ ಮುತ್ತಿ ಮುಸುಕಿರಲ್ಕಂಡು ಕೃಷ್ಣಾಹಿಗಳೆಸಿಪ ಶಂಕೆಯಿಂ ||
ಸಿಲ್ಲದಾಡುವ ಸಲುಗೆಯಿಂ ನವಿಲ್ಗಳ್ ಗಮಿಗ |
ಳಲ್ಲಾಡೆ ಮೊಗನೆಗಹಿ ಲಪಲವಿಪುವದ್ರಿಜಾ |
ವಲ್ಲಭನ ಗುಣಕುಲದ ಬಲ್ಲಹನ ಮೊಗಸಾಲೆಯಲ್ಲಿಯಾಶ್ಚರ್ಯಮಾಗೆ||೨೭||

ಎಸೆವ ಮಂಟಪದ ಮೇಲ್ಪಲಗೆಯೊಳ್ ಪದ್ಮರಾ |
ಗಸಮಾಜದಿಂ ಸಮೆದು ಮಿಗೆ ತಿರ್ದಿ ತೋರ್ಪ ಕಮ |
ಲಸಮೂಹಮೆಳೆಗಟ್ಟನೊಳ್ಕೆಉಪಪಳುಕಿನಸರೆಯಲ್ಲಿ ಮಾರ್ಗೋಳಿಯಲಾಗ ||
ಪಸಿದು ಸುಳಿವರಸಂಚೆಗಳ್ ಕಂಡು ಭ್ರಮಿಸಿ ಕಿಸು |
ಬಿಸಜಂಗಳೆಂದು ತತ್ತಂಡುಲದ ತುಂಡದಿಂ |
ದೊಸೆದು ತೆಗೆದುಣಬಗೆದು ಬಿಸದಿಸುವ್ರವಾತಿವಸಭ್ರಾಂತಮೊಳಗೇವೇಳ್ವನು ||

ಬಿಜ್ಜಣವನೊಲ್ದು ಬೀಸುವ ವೀಳೆಯಮಸೇವ |
ಸಜ್ಜುಕವಲಮರ್ಪಿಪ ಚಮರವಿಕ್ಕುವ ರತ್ನ |
ದುಜ್ಜಳಿಪ ದೀಪಮಂ ಬೆಳಗಿಸುವ ಸೀಗುರ್ಪಿಯುಲಿಪಿನ ಕತ್ತುರಿಯನೊರೆವ||
ಗುಜ್ಜುಮಂಚಗಳ ಪಚ್ಚಿಪ ಧೂಪದ ಪೊಗೆಯ |
ಸಜ್ಜುಗೊಳಿಸುವ ಸವ್ಯಲಾವಣ್ಯದಿಂದೆಸೆವ |
ಸಜ್ಜೀವಪುತ್ರಿಕೆಗಳಿರ್ದಪುವು ಕಪರ್ದಿಯಾಸ್ಥಾನಮಂಟಪದೆಡೆಯೊಳು ||೨೯||

ಆ ಮಹಾಸ್ಥಾನಮಂಟಪದೊಳಗೆ ಪರಮಪ್ರ |
ಭಾಮಯವಿಶಿಷ್ಟವಿಷ್ಟರಮೊಪ್ಪುತಿರ್ದಪಾ |
ತಾಮರಸಮಿತ್ರನುದಯಾಸ್ತಮುಂ ತಾಂ ಪರಿಭ್ರಮಿಸಲಳವಲ್ಲವೆಂದು ||
ಕಾಮದಿಂ ಸತ್ಕರಸಹಸ್ರಯುತನಾಗುತ ಮ |
ಹಾಮಹಿಮಶಿವನನೋಲಗಿಸ ಬಂದಂತೆಯು |
ದ್ದಾಮತೆಯೊಳುಜ್ಜಳಿಸುತಿರ್ದಪುದು ನವೀನರತ್ನಮರೀಚಿವೀಚಿಯಿಂದ|| ೩೦ ||

ದೋಸಿಯಾದಾಸಸಿಯ ತಲೆಯಲ್ಲಿ ತಾಳ್ದ ಪೂ |
ಬಾಸಿಗದೊಲನ್ನನೇಳಲಗ್ಗೈದೆಯಿದು ಮಹಾ |
ದೋಸವೆಮ್ಮೆರ್ವರಂ ಪಮುವಲೆಡಬಲಗಣ್ಗಳಾಗಿ ನಿಂ ಕಾಣ್ಬುದೆಂದು ||

ನೇಸಱಡಿದಾವರೆಯ ಭಯಭಕ್ತಿಯಿಂದಲೋ |
ಲೈಸುವಂದದೊಳು ಸಮ್ರುಚಿರತ್ನರುಚಿರ ಸಿಂ |
ಹಾಸನಂ ಭಾಸಮಾನಮಾಗಿ ರಂಜಿಸಿದುದಾಸಭಾಭವನದಲ್ಲಿ || ೩೧ ||

ವರಪುಷ್ಯರಾಗಾಶ್ಮಫಲಕಸೋಪಾನಸೌಂ |
ದರಮಾಗಿರಲ್ಕದಱ ಪಾರ್ಶ್ವದೊಳ್ ತಳತಳಿಪ |
ಹರಿನೀಲಮಣಿಬದ್ಧವೇತಂಡತುಂಡದವಿ ತದಗ್ರದೊಳ್ ಶೋಭೆವೆತ್ತ ||
ಸುರುಚಿರಾಟ್ಟಳಮದಱ ರತ್ನದೀಧಿತಿಯಿಂದ |
ಮಿಱುಪ ಮಂಜುಳಮಂಟಪಂ ಮೋಹಿಸಿತ್ತು ಮೇ |
ಗರೆಯೊಳೊಪ್ಪುವ ಶಾತಕುಂಭಕುಂಭಚತುಷ್ಟಯಂಗಳಿಂ ಸಿಂಗರಮೆಸೆ || ೩೨ ||

ಎಸೆವಾಮೃಗಾಧಿಪಾಷ್ಟಯಪೀಠದಲ್ಲಿ ರಂ |
ಜಿಸುವಂಚೆಮಪ್ಪುಳಿಂವಾಗಿಸಿದ ಮಿಱುಪಾಗಿ |
ಮಿಸುಪ ಲಲಿತಾಸ್ತರಣದಲ್ಲಿ ರಂಜಿಸುವಂತೆ ಸಿಚ್ಚಳದಿ ಪಚ್ಚಟಿಸಿದ ||
ಪೊಸಮೊವಟದ ಶೋಭೆಯಿಂ ಮನೋಹರದ ಮೇ |
ಹಿಸುವ ಭದ್ರಾಸನಸುಖಾಸೀನನಾಗಿರ್ದ |
ಶಶಿಧರ ಶ್ರೀನಂದಿನಾಥನಾಸತತರಭಿಷ್ಟಾರ್ಥಮಂ ಪಾಲಿಸುತ್ತ || ೩೩ ||

→ ಇಂತು ನಾಲ್ಕನೆಯ ಸಂಧಿ. ←

## || ಐದನೆಯ ಸಂಧಿ. ||

ಸೂಚನೆ :—

ಸುಲಲಿತಸಭಾಭವನದೊಳ್ ಸಿಂಹಪೀಠದೊಳ್ |
ನೆಲಸಿ ಬ್ರಹ್ಮೇಂದ್ರಾದ್ಯರಿಂದೋಲಗಂಗೊಂಡು |
ತುಳುಕುವಾನಂದದಿಂದಭವನಾಣತಿಯೀಯುತನಿಬರಂ ಬೀಳ್ಕೊಟ್ಟನು ||

ಉನ್ಮದಪರೀವೃಢರದನಿಖಂಡ ಖಂಡೇಂದು |
ಸನ್ಮೂರ್ಧ ಮೂರ್ಧಾಳಕಾಳ ಕಾಳೀಶ ಶರ |
ಜನ್ಮಪಿತೃ ಪಿತೃಪತಿವಿದಾರ ದಾರಾರ್ಪಿತಾರ್ಧಾಪಘನ ಘನಸನ್ನಿಭಾಸ ||
ಪ್ರೋನ್ನಂಜುಕಂಧರ ಧರಾಧರಸಧರ್ಮ |
ಚಿನ್ಮಯ ಮಯಾತ್ಮಜಾವರದ ವರದ ಸನ್ಮುನಿಪ |
ಹೃನ್ಮಂದಿರಾವಾಸ ವಾಸವಾರ್ಚಿತ ಮೃದುಲಚರಣ ನಂದೀಶ ಪಾಹಿ || ೧ ||

ಆಲಿಸುವುದೇಕಮಾನಸರಾಗಿ ಸಕಲಮುನಿ |
ಜಾಲ ವೃಜಿನಕರಾಳಶೈಲಭೇದನಘನಾ |
ಭೀಲಪವಿದಂಡೋಪಮಾನ ಮಾಹೇಶ್ವರಕಥಾಮಾಲಿಕೆಯಂ ಲೀಲೆಯಿಂ ||
ಓಲಗದ ಶಾಲೆಯೊಳ್ ನವರತ್ನಕೀಲಿತವಿ |
ಶಾಲಸದ್ವಿಷ್ಟರಾಸೀನನಾಗಿರ್ದ ನಗ |
ಜಾಲೋಲಸಮರಪ್ರಪಾಲಸು ಧೃತಶೂಲನತಿದಯಾಶೀಲನೊಲಿದು || ೨ ||

ಜಡೆಮುಡಿಯೊಳಾಂತಸೆವ ಹೆಱೆಹೊಱೆಯ ಮೃಗಾಂಕ |
ಣ್ಬಡೆವ ಫಣಿಕುಂಡಲದ ಕಳಕಳಿಪ ನಗೆಮೊಗದ |
ಕಡುಮಿಱುಪಸುಲಿಪಲ್ಲಬಾಯ್ದೆಱೆಯಬಿಸಗೊರಲಯೊಲುವಳೆಯಮಂಡೆಮೈಗೆ ||
ತೊಡೆವ ಭಸಿತಾನೆಯ ಮೊವಲ್ಲೊವಕೆ ಪುಲಿಸಮ್ಮ |
ದುಡಿಯನೀರೈದೋಳ್ಗಳಂ ಪಾವುದೊಡವಡಿಯ |
ತೊಡರುಲಿಯುಗುರ್ಗಳಗ ಬೆಳಗಿಪಂ ಶಿವಂ ಸಿಂಹವಿಷ್ಟರಾಗ್ರದೊಳಿರ್ದನು ||

ಪಸದೊಸಗೆಯಿಂವ ಪೊಸಸಿಸುಸಸಿಯ ತಲೆಯನೇ |
ಱಸಿದಸಮಬಿಸವ ಬಿಸಬಿಸಿಗೆ ಜಗಮಸಿರುಸಿಕ |
ನಸಿಯೆ ಕಂಡಸಮಸದಿ ಸಸನೆ ಪಿಡಿವೆತ್ತಿ ಪೊಸೆಪೊಸೆದು ಕರಬಿಸಜದಿಂದ ||
ಪಸದಿ ನುಣ್ಗೊರಲ್ಗೆ ಲೇಪಿಸಿದ ರಸ ಬಸಿವಚ್ಛ |
ಪಸಿದೊವಲ ವಸನವಂ ಗೃಮ ಪೆಸೆಯುಟ್ಟು ಶಂ |
ಜಿಸುವ ಕುಸುಮಸರನೊಳ್ಪ ಸವಸುಜಿ ಗೆಲ್ದ ಶಿವನೆಸೆವ ಸಿಂಹಾಸನದೊಳು ||

ನಿರುಪಮಧ್ವಜಕಲಶಕುಲಿಶಾತಪತ್ರಾ |
ಮುರಸೋರ್ಧ್ವರೇಖಾಂಕಿತಾರುಣಾಂಭೋಜಮಂ |
ಧುರಮೃದುಲಪದಯುಗನಖತತಿರಕರಕಿರಣಗಳ್ ದೆಸೆಗಳೊಳ್ ಪಸರಿಸೆ ||

ವರರತ್ನಖಚಿತಮಂಜೀರದೀಧಿತಿ ಮನೋಜ್ಞ |
ಹರಮಾದ ಗುಲ್ಫಂಗಳಿಂ ಶರಧಿಸಂಕಾಶ |
ಸ್ಥಿರಳತರಜಂಘಾದ್ವಯಂಗಳಿಂದೊಪ್ಪುವ ಭವಾನೀಶನೆಸೆದಿರ್ದನು ‖ ೫ ‖
ಶರಜನ್ಮಗಣನಾಥರಂ ಬಾಲಲೀಲೆಯಿಂ
ಧರದಾತಲಾಸ್ಪದಮದಾದ ಬಲದೊಡೆ ಗಿರೀ
ಶ್ವರಸುತೆಯನಾರತಂ ಮಂಡಿಸಿ ಮುದೋಲ್ಲಾಸದಿಂದಿರ್ದ ವಾಮಾಂಕದಿ ‖
ಸಿರುಸಮವ್ಯಾಘ್ರಾಜಿನಾಮೃತಸೂಕ್ಷ್ಮವಿ |
ಸ್ಫುರಿತನವರತ್ನಪ್ರಖಚಿತಕಟಿಸೂತ್ರಭಾ |
ಸುರಮಾದ ಸನ್ಮಧ್ಯದಿಂದಾವಮದ್ಘಾಂತರಹಿತನೊಪ್ಪುತ್ತಿರ್ದನು ‖ ೬ ‖
ದಕ್ಷಿಣಾವರ್ತಸಿಜನಾಭಿ ಶೋಭಾನ್ವಿತನು |
ಲಕ್ಷಣಮದಾಗಿರಲು ಶೈವಾಲಲತಿಕೆ ಪ್ರ |
ತ್ಯಕ್ಷಮಾದಂತನೆನೆ ವರರೋಮರಾಜಿ ತತ್ರ್ಯವಳಿವಿಡಿಸೊಪ್ಪಿರೆ ‖
ಲಕ್ಷಿಸೆ ಚತುರ್ದಶಜಗಂಗಳಂ ಪುದಿದಿರ್ದ |
ಕುಕ್ಷಿ ತ್ರೈಲೋಕ್ಯಂತು ಕಣ್ಗೊಳಿಸೆ ಗಿರಿಜಾಕುಚಕಸು |
ಯುಕ್ಷಕರ್ದಮುಕ್ತಾಂಕಿತಫಣಿಸಸೂತ್ರಯುತವಕ್ಷಂ ವಿರಾಜಿಸಿದನು ‖ ೭ ‖
ನವಶಂಬರಶೋಭೋಪಹಾರಣಾಗ್ರ್ಯದ ಕ್ಷ್ಯೆ |
ಡವನಾಂತು ಸಿಂಹಾಘಮಂ ತಳೆದ ವರ್ತುಳ |
ತ್ವದ ಧರಿಸಿ ಸಲ್ಲಸದ್ರುಂಡಮಾಲಾಕಲಿತಮಾದ ಸುಗ್ರೀವದಿಂದ ‖
ದಿವಿಜವಲ್ಲರಿಯ ಸಲ್ಲಲಿತಕಾಂತಿಯ ಕಳೆ |
ಲುಬ್ಬ ವ ಭುಜಗಳಿಂದುರಗಬಾಹುಪೂರಗಳಿಂದ |
ಲವಿರತಂ ವಿಶ್ವತೋಬಾಹು ಸಿಂಹಾಸನಾಗ್ರದೊಳು ಕಣ್ಗೊಳಿಸಿರ್ದನು ‖ ೮ ‖
ವರದಾಭಯಕಾಸ್ಪದಮದಾದ ಉರಗವಿ |
ಸ್ಫುರಿತಕಂಕಣಕೆ ನೆಲೆಯಾದ ವರವಿದ್ರುಮಾಂ |
ಕುರಸಿಭಾಂಗುಳಿಗೆ ಪಕ್ವಾದ ವಿವಿಧಾಯುಧಕ್ಕೆ ಹೆಯಾದ ಅಸುಗೆವಳರಂ ‖
ಜರಿವ ಕರಪಲ್ಲವಗಳಿಂ ಕಂಬಳಾಶ್ವತರ |
. . . . . . . . . . . . . . . . . . . . |
ವರಕುಂಡಲಪ್ರಭಾಕಲಿತಕರ್ಣಂಗಳಿಂದೆಸೆವಿಶನೊಪ್ಪಿರ್ದನು ‖ ೯ ‖

ವರಚಾಮರಕಶೋಭೆಯಿಂ ತಾಂಬೂಲಚರ್ವಣ |
ಸ್ಫುರಿತಾರುಣಾಧರಪ್ರಭೆಯಿಂ ಸುಮುಕ್ತಾಪ್ರ |
ಕರಸಿತರದಶ್ರೇಣಿಯಿಂ ವಿಲಸಿತಘ್ರಾಣಮಿಂದುರವಿನೇತ್ರದಿಂ ||
ವಿಲಸದ ನವಭ್ರೂಲತೆಗಳಿಂ ತ್ರಿಪುಂಡ್ರಾಂಕಭಾ |
ಸುರವಿಸುಸ್ತ್ರೀಲಿತಶೋಭಿಪ್ಪ ಫಲನಾಕ್ಷಟಂ ಮನೋ |
ಹರಮಾದ ಸುಲಲಾಟದಿಂದೆಸೆವ ಶಿವನಿರ್ವಾಣಸುನ್ನತವರಾಸನದೊಳು || ೧೦ ||

ಲಲಿತಪ್ರವಾಳಲತಿಕಾಪುಂಜಮಂ ಜಯಿಸ |
ವಿಲಸತ್ಕರಪದಪಟಲಂ ಸಲಸ್ಫುಟಮಾಗ |
ತೊಲಿದನಮ್ಯಾಂತಸಂತಸದ ಬಿಂದುರೂಪವಾಗಿರಲೊಲ್ದು ಚಂದ್ರಕಳೆಯ ||
ತಳೆಯೊಲ್ದಂ ತಾಳ್ದು ಭಕ್ತಾದಿಗಳ್ ಪೂಜೆಗೆ |
ಪದ್ದಲಿಂದೆಯಿಂದೆಸೆವ ಪ್ರೌಢಮುಕುಟಂ ರತ್ನ |
ಕುಲಕಲಿತವಿಷ್ಟರವಿಶಿಷ್ಟಾಸನಸಮೊಳರ್ದನಾಸತಾಮರಭೂಜನು || || ೧೧ ||

ಸಿರಿಮಾಣಿಕಜ್ಯೋತಿರೂಪಂ ಚಿದಾನಂದ |
ಭರಿತಂ ನಿರಾಕರಂ ನಿರಂಜನನಂ ಸ್ಥಿರಂ |
ನರಪೂಜಿತಾಂಘ್ರಿಪದ್ಮಂ ಷಡ್ಗುಣೈಶ್ವರ್ಯಯುಕ್ತಂ ಗುಣಾತೀತನು ||
ಪರಮಪುರುಷಂ ಪವಿತ್ರಂ ಪಂಚವರ್ಣಾದಿ |
ಸ್ಫುರಿತಕಾರ್ಮುಕ ಪುಣ್ಯನಿಲಯಮಂ ಸದಾಶಿವಂ |
ಪರಿಪುಷ್ಟರಾಗ್ರಮೊಳಾತ್ಮಕೀರ್ತಿನೆತ್ತಿರ್ದಂ ಪ್ರಮುಖಸಿಕರನೊಲಿಗಿಸಲು ||೧೨||

ಪರಮೇಷ್ಠಿ ಸರ್ವಾಯುಧಮುಕ್ತ ದಿಕ್ಪಾಲಕಿಂ |
ನರಸುರರ್ ವಿದ್ಯಾಧರರ್ ಖೇಚರರ್ ಯಕ್ಷ |
ಗರುಡೋರಗಸಪ್ತಋಷಿಗಳ್ ಪ್ರಮಾನಂತ್ರಸೇವತೆಗಳಾಸನಂಗಳು ||
ಮರುತಗಂಧರ್ವದಕ್ಷಾಕ್ರಿಸೇವಿಪರ್ ಸುಕಿಂ |
ಪುರುಪಘಾತಕ್ಷೇತ್ರಸಿದ್ಧಸಾಧ್ಯರ್ ಚಂದ್ರ |
ತರಣಿರುದ್ರರ್ವಸುಗಳರ್ಕಪರ್ವಿಯೊಡಜ್ಯೋತಿಲಗದೊಳಳ್ತಯಿಂದ||೧೩||

ವೀತರಾಗರ್ ವೇದವೇದಾಂತಪಾರಗರ್ |
ಪೂತಪ್ರವರಧ್ಯಾತ್ರಸದ್ಧ್ಯಾನನಿರತರ್ ವಿ |
ಧೂತದೋಷರ್ ವಿಜ್ಞರಸ್ಪಂದನೋಷ್ಠರ್ ವರಸ್ವಸ್ತಿಕಾಸೀನರು ||

ಜ್ಞಾತರಜ್ಞಾತಸಿದ್ಧಾಕ್ಷುತ್ತಿಪಾಸರ್ ವಿ |
ಭೂತಿರುದ್ರಾಕ್ಷಮಂಡಿತವಸ್ತ್ರಾಂಬರಧರೋ |
ಪೇತರ್ ಸುಸಂಜಾಗ್ನಿಮಧ್ಯಸ್ಥಿತಿಯುತರಿಸ್ಪ ಮುನಿಗಳ್ವೆರಸಭೆಯೊಳು ||೧೩||
ವಾಸುದೇವ ಸನಂದ ವ್ಯಾಸ ಪರಾಶರನುಂ |
ಜಾಮದಗ್ನ್ಯಂ ವಾಲಖಿಲ್ಯ ಶಾಕಲ್ಯನುಂ |
ಕಾಮಕಾಯನ ಕುಶಿಕ ಶ್ರೀವತ್ಸ ಕುತ್ಸ ಸುಮಗಸ್ತ್ಯಂ ಪುಲಸ್ತ್ಯ ಜಮ್ಮು |
ಶ್ರೀಮದಂಗಿರ ಗಾರ್ಗ್ಯ ಕೌಶಿಕ ಮುಕುಂ ವರಂ |
ಸೋಮಪಾದ ಸುಮಂತು ಸನತ್ಕಂದ ವಿಂದನುಂ |
ರೋಮಶವಸಿಷ್ಠನು ಮತಂಗ ಮಹರ್ಷಿ ಭೃಂಗಿವರರ್ ಶಿವಾರ್ಧನಸಭೆಯೊಳು |
ಸ್ಫುರದೇಕದಂತಾಷ್ಟವಿಷುವಕ್ತ್ರನೇತ್ರರ್ಗಳ್ |
ವರತತ್ವಋಭುತನಯಾತ್ರ ಕೇಯುರಾಂಗರ್ ಜರ್ |
ವಿಜಯ ವಿಶ್ವದೇವರಾರುದ್ರ ರಾಜರಷಿಗಳಾತ್ರಿ ವಸುಕಾಮಗಳು ||
ಪರಮತಿಥಿಗಳ್ ಕಳೆಗಳಿಂದಮಿಮುಕರಮುಂ |
ರುರುಭಕ್ತಿ ಕೃಪಿಂಗಳ್ ಭವನೋಲಗದೊಳ್ಪದೆ |
ನೆರೆದು ಪರಿತೋಷಪಿತ್ತಿ ಮುನಿಗಣೆತಸುರಸೂಕ್ತಮ ಸುತ್ತತ್ತ ವದೆಯೊಳು ||
ಶುಕ್ತಿಘೋಷದಿಂ ಜಲಾಧೀಶದಿಂ ಬಿಗ್ಗಸ |
ತತಿಯಿಂ ಸುಗಂಧವಾಪಸ್ರ ಚಮಯಿಂದಲ |
ಕ್ಷತವಿರಚಿಂದ ಕುಸುಮನಾಕರವಿರಾಜದಿಂ ದಿವ್ಯಧೂಪಜ್ಯೋತಿದಿಂ |
ಸತತಗಣಕುಲದೀಪದಿಂದಬಲಮು ತಾಂಧಸ್ರ
ತತಿಯಿಂದ ಸುಪರ್ಣಮುತ್ತ್ಯಾದಿಂ ಶಿವನ ಪಿ |
ಶ್ರುತಪೂವ ಸಭೆಯುಷ್ಟವಿಧದಾರ್ಚನೆಸ್ತ್ರೋತ್ರಮಂಗಳಾಗಳಸುರಾಗದಿಂದ ||೧೭||
ಪರಮಹಂಸಪ್ರಕರದಿಂ ಕಲಾಪೂರ್ಣದಿಂ |
ವಿಜಯಪ್ರ ಶಾಸ್ತ್ರಪ್ರಸಂಗಸುಸಂವಾದಭಾವದಿಂ
ನೆರೆದ ವಿಬುಧಸ್ತೋಮದಿಂ ಸುರಾಚಾರ್ಯನಿಂ ಶಿವಕವೀಶ್ವರಮುಖ್ಯರಿಂ ||
ಸ್ಫುರಿಪಶಶಿಧರಕುಮಾರಯುರಿಂದ ಬಿರಿಯಿಂದ |
ಪರಿಶುಭ್ರವಡೆದುದು ಸಮಗ್ರಪಾತ್ರಕವಾಗಿ |
ಹರನೋಲಗದ ಮಂದಿರಂ ಶರಣಪುತ್ಥ್ರ ಮುದವನಪ್ರಾಣಿವನಾಡಿದಿರಂ ||

ಇಂತು ಗಣನಾತೀತವಾಗಿ ನೆರೆದಿರ್ದ ಗಣ |
ಸಂತತಿಯು ಸರ್ವಾಧಿಪತ್ಯಮಂ ತಾಳ್ದು ವ್ರೋಂ |
ರಂತೆ ಸಂದೀಶಸೆರ್ದಂ ಕರವಿಲಗ್ನಕಲಧೌತಸದ್ವೇತ್ರದಿಂದ ||
ನಿಂತಿರಲ್ ಶಂಖಿಕಾಷ್ಟಾಂಡಕಮಹಾಕಾಳ್ |
ರುಂ ತಮ್ಮೊಡನೆ ಕೋಟಾಕೋಟಿ ಸದ್ಗಣನಾಥ |
ರಿಂ ತಳ್ತು ಶಶಿಕಲಾಮೌಳಿಯ ಪದಾಬ್ಜಸೇವಾಸೌಖ್ಯದಿಂದಿರ್ದರು || ೧೯ ||

ಶತಕೋಟಿಗಣನಾಯಕರ್ಸಹಿತಮೋರೆಯರ್ದ |
ರತಿಬಲವಿಶಾಲಪಾರ್ಶ್ವಕಸಿಂಹರೂಪನುಂ |
ಜಿತಭಿಂಡಿಪಾಲಕುಂಟಿಕಪೀಠಲಂಜೋರ್ಮದಾಗ್ನಿಕರೆಯೊಳಗಿಸಲು |
ಶತಸಹಸ್ರಸಹಿತಲಾವೊರ್ಘಂ ಮಹಾಪದ್ಮ |
ಯುತದ ಕುಮುದಂ ಸುಮಂತ್ರಕನು ಮೂನಾಕೋಟಿ
ಧೃತಶೂಲಗಣರೊಡನೆ ಪುಷ್ಪದಂತಸೇವಾತಿಸನ್ನದ್ಧರಾಗಿರ್ದರು || ೨೦ ||

ನಂದಕಂ ರೌದ್ರಮುಖರುಂ ಮೂರು ಮೂಕೋಟಿ |
ಯಿಂದ ವಿಸ್ಫೂರ್ತ್ತ್ಯವಿಕ್ರಮತಾಸ್ಫಾಲನದ |
ಮುಂಮುಖಿಗಳುಂ ನಾಲ್ಕುನಾಲ್ಕು ಕೋಟಿಯೊಳಂ ಮಹಾಸೇಲನುಂ ಕಾಲನುಂ ||
ಕುಂದವಿಷ್ಕಂಭಕಂ ಮಂಡಲಾಗ್ರಂ ಮರ್ದ |
ದಿಂವತ್ತೈದು ಕೋಟಿಯೊಳ್ ಪಶ್ವಸೇತ್ರನಾಸ
ವೃಂದರಂ ಪರ್ವಕರಾಲ್ಪಾರ್ಶ್ವಕೋಟಿಗಣರೊಳಗಿಸುತಿರುತಿರ್ದರು || ೨೧ ||

ಇರಪೆ ಸರ್ವಾಂತಕಂ ಸಮವರ್ತಿಗಳ್ ಕುಮುದ |
ನುರುಸುಮುಖಕಾಪಾಲಿಯೆಂಟೆಂಟು ಚಂದ್ರಭಾ |
ಸುರಸುಹಾಕೇಶನುಂ ಒಂಬತ್ತೊಂಬತ್ತು ಶಂಖವರ್ಣಾಂಗಧೃಂಗರಿಟಿಯು ||
ಉರುಕೇಸರಾಂಗಸ್ಥೈರ್ಯೈದು ಕೋಟಿ ಗಣ
ವರರಿಂ ಮಹಾದಂಷ್ಟ್ರ ಹಸ್ತ್ಯಾಸ್ಯ ಕೋಟಿಯಿಂ
ಗಿರಿಕುಂಡಲಂ ಕಜ್ಜಲಾಕೇಶಿ ಪನ್ನೆರಳ್ಕೋಟಿ ಗಣದಿಂದಿರ್ದರು || ೨೨ ||

ಕೋಟಿಸಪ್ತಕ ಕೋಕಿಲಾಪಿತ್ತರುಂ ಕೆಷ್ಟಣೆ |
ಕೋಟಿಸಹ ತಾರಾಂಗನುಂ ಮೂವತ್ತೆಳ್ಪತ್ತು
ಕೋಟಿಯಿಂ ಸಂತಾನಕಂ ಮಹಾಶಂಖಮೊಡನಾಥೀಲಲೋಹಿತಾಂಗಂ ||

ಕೋಟಿ ಮುವ್ವತ್ತಾಱುಂ ಕರಾಳ್ಗಂ ಲಕ್ಷ |
ಕೋಟಿಯಿಂ ಮುಂಡಪಿಷ್ಟಲನಿಕುಂಭಂ ತ್ರಿಳಯೆ |
ಕೋಟಿಮುವ್ವತ್ತೆರಳ್ಗಣನಾಯಕರ್ಸಹಂ ಸಿರಿಕಂಟನೋಲಗಿಪರು ||೨೩||
ಅರ್ಬುದಗಳೀರೈದಱಿಂದ ಕಾಕಂ ಸಹ |
ಸಾರ್ಬುದದೊಳಾಪೂರ್ಣಭದ್ರನೈವತ್ತು ನಾ |
ಲ್ಕರ್ಬುದದಿ ಭೂತೇಶನಿರ್ದತ್ತು ಸಾವಿರದಲರ್ಬುದದಿ ವೀರಭದ್ರಂ ||
ನಿರ್ಬುದಾರ್ಬುದದಿಂದೆ ಶಕ್ತಿಮೂರ್ತಿಯುಮುಮುತ |
ನಿರ್ಬುದದೊಳಂ ಮಹಾಭದ್ರಕಂ ಸತ್ತ್ಯ್ರಮು |
ನಿರ್ಬುದದಿ ಭುವನಕುಂತಲನೆಸಿಪ ಪ್ರಮಥಗಣಸಹಿತಿರ್ದರಾಸಭೆಯೊಳು ||
ಪರಮಹಾಸದಿಯು [ಶ್ರೀರದ] ಸ್ಯಕತಕಣಸ್ರ |
ಕರಮಂ ಕಱುವ ಮೇಘಜಲಬಿಂದುಜಾಲಮಂ |
ಚರಿಸುವ ಬಿಸಿಲ್ಗುದುರೆಗಳ್ ಶರನಿಧಿಯ ತೆರೆಯ ಪೊಯ್ಮೀಳ್ಗಸೀಕರಗಳ್ ||
ಪರಿಗಣನೆಗೊಳ್ ಪಕ್ಷಮುಕ್ತ್ಯಂ ಗಣಾಧಿಪರ |
ನೆರವಿಯುಂ ಮತಿಗೊಂಬರಾಗದೆಂಬಂತಪ್ರೋಲ್ |
ಗಿರಿಶನೋಲಗದೊಳಿರ್ದರ ಪಿಕ್ರ ತ್ರಿನೇತ್ರತಿಶಯಮನೇವಣ್ಣಿಸುವೆನು ||
ಅರೆಬರ್ ಸಹಸ್ರಾಕ್ಷರರೆಬರ್ ಸಹಸ್ರಕರ
ರರೆಬರ್ ಸಹಸ್ರಶಿರರರೆಬರ್ ಸಹಸ್ರಪದ
ರರೆಬರ್ ಜಟಾಧರತ್ರ್ಯಕ್ಷರರೆಬರ್ ಫಾಲಶಶಿಕಲಾಕ್ರತಜಟರು ||
ಅರೆಬರ್ ಮಹಾನೀಲಕಂಠರರೆಬರ್ ಕೋಟಿ |
ತರಣಿಪ್ರಕಾಶರರೆಬರ್ [ಸ್ವರ್ಣ] ಕುಂಡಲಾ |
ಭರಣರರೆಬರ್ ಫಣಿಪ ಹಾರವಲಯರ್ಮಱುದಿರ್ಪರ್ಶನಿವೇಶನದೊಳು ||೨೬||
ಸ್ಫುರಿತವಿಕಟಾಯತಾಂಗರ್ ಕರ್ಕಶಾನನರ್
ಪರಲಂಬನಾಸಿಕರ್ ಮಹದಗ್ನಿದಂಷ್ಟ್ರಧೀ |
ಕರಕರದಿನಿಂದಹಾಸರ್ಬಲಮುಳಿದರುಂ ಶರಭಸಿಂಹಘೋರಾಕಾರಯುವಹರು ||
ಸರಟವಾನರಮೂಷಿಕಾಕಾರಘೂಕಕಾ |
ಕರವದುಂ ಕಲಿವೃಗವ್ಯಾಘ್ರಸದವರ್ ಮೇಷ |
ತುರಗರೂಹರ್ ತ್ರಿಸಾವಾಷ್ಟಸಾದಗಣಂಗಳಾಸಭೆಯೊಳೆಸೆದಿರ್ದರು ||೨೭||

ಬಂದು ಕಣ್ಣೊಂದು ಕೈಯೊಂದು ಕಾಲೊಂದು ಕಿವಿ |
ಯೊಂದೆರಳ್ಗಳ್ಮೂಱು ನೂರ್ಸಾಸಿರಂ ಸಾಸಿ |
ರಂಡೋರ್ದ ಜಿಹ್ವೆಯಿಂದೊಪ್ಪುವರ್ ಕರಿಕಾಸರ್ಪ್ಪಣವೃಕಶುಕಕಚ್ಛಪ ||
ಪಂದಿ ಪಾರಿವ ಪರ್ದು ಮುಂತಾದುವೆಲ್ಲವಂ |
ತಂದು ಪಾಪನಗಳಾಗಿಸಿದ ಗಣಿಸಿಕರ ಪ್ರೌ |
ಢೋರ್ದಂಡಮಹಿಮಾಪಂಡಿತ್ರೀತಂದನದ ಕಾಟಿಯ ಶಿವನ ಸೇವಿಸುತಿರ್ದರು ||೧೮||

ಲಲಿತಶಂಖಕಪಾಲಭೂಷಿತಕರರ್ ಮಹೋ |
ಜ್ಜ್ವಲವಿಶೇಷಮಣಿಮಕರಕುಂಡಲಯುತರ್ ಕಲ್ಪ |
ಕಲಿತಸ್ರಗ್ವಲ್ಲಿಜಯಂತೀಹಾರಶೋಭಿತವಿಶಾಲವಕ್ಷರ್ ಲಕ್ಷಿಸೆ ||
ಜಲಜಪಾವಕನೇತ್ರರುಂ ಪೀತವಾಸನುಮೆ |
ಪುಲಿಸಮ್ರವಸನರುಂ ಗರುಡೋಕ್ಷವಾಹಗಣ |
ಕುಲಪರಿಪ್ರಾಕೃತಿಗಳಿಂದೆಸೆದಿರ್ದರಾವಿರಾಕ್ಷನೇತ್ರನ ಭಜಿಸುತ ||೧೯||

ಗಿರಿಧರಧರಾಂಬರಾಂಬರಕೇಶಕೇಶರಂ |
ಶರವಿಧೃತಧೃತಶೈಲಶೈಲಕಂತುಕಕಂತು |
ಹರಣರಣವಿಜಯಸೋಮಕಸೋಮಕರಮಕರಗಮನಗಮನೋತ್ಸಾಹನು ||
ಪರಿಯುಕ್ತಯುಕ್ತಪಂ ಗುಣಪರ್ದಪರ್ದಕಂ |
ಉರಗವಸನವಸನನಲಿನನಲಿನವನಾಮನಾಮಕಂ |
ನೆರೆದಿರ್ದರಾಪ್ರಾಂತಕಸಂತರಹಿತವಸಾಗೆನವಾಸಭಾಂತರದೊಳು ||೨೦||

ಪರಮಪಾರಸಿಕಪಿಷ್ಟಲಪೀನಕಾಯರ್ಪ್ರ |
ಷ್ಕರಪೂರ್ಣಶೇಷಸ್ಯಸ್ಯೆಂದ್ರಸುದೋತ್ರಿ ಪೌಲಸಂ |
ಜರಕ ಪಪ್ರಜವರದವಾಹಕವಿನೇಶಪೀಸಕಮರುಪದವೂಸರಾಂಗ ||
ನಿರುತಪೇಪಲಕಸ್ಯೆವಷ್ಣಪೂರಕವಾದ
ವರದಂಡಮಪ್ಕರತೆಸಿಪ್ಪ ಪ್ರಮುಖಾಘೀಶ
ರುರುಭಕ್ತಿಯಿಂ ಪಾರ್ವತೀಪತಿ ಶಂಕರನ ರುಫಕರನಸೋಲಗಿಪರು ||೨೧

ಶರಭಶುಕಸೌರಿಸೂನಂದನುಂ ವೃಂದನುಂ |
ವರುಷವಾಹನವಾರ್ಧಿವಾಸನುಂ ಕೇಶನುಂ |
ಚರಕಚಂಚಲಚಪಲಗಾತ್ರನುಂ ಚಿತ್ರನುಂ ಮತಿಕಾಯನುಂ ಮಾಯನುಂ||

ಉರಗಾಸ್ಯನುಲ್ಕಮುಂಮಾರನುಂ ತಾರನುಂ |
ಕರಿಮುಖಕನವಿರ್ನಮಾರ್ತಾಂಡನುಂ ಕುಂಡನುಂ |
ವರಲೋಹಿತಾಂಗವಸುದಸ್ತನುಂ ಧೃಸ್ತನುಂ ಶಿವನೋಲಗದೊಳಿರ್ದರು ||
ಗಿರಿಶಯುನವಾರಿಸಿಧಿಘೋಷಣಂ ಭೀಷಣಂ |
ಗಿರಿಮಾಲಕಂಕಾಲಧಾರಣಂ ಕಾರಣಂ |
ಗಿರಿಭಕ್ತಮೃತ್ಯುಕುಲಮಾರಣಂ ಸಾರಣಂ ಗಿರಿಕರ್ಣಸೌವರ್ಣನು ||
ಗಿರಿಕುಂಡಲಂ ರುಂಡಮಾಲನುಂ ಶೀಲನುಂ |
ಗಿರಿವಾಹನಂ ಭಸ್ಮಶೀಲನುಂ ಪಾಲನುಂ |
ಗಿರಿಮೌಳಿ ಬ್ರಹ್ಮಾಂಡಕೀಲನುಂ ಲೀಲನುಂ ಶಿವನ ಸಭೆಯೊಳೊಪ್ಪಿರ್ದರು ||
ಗಿರಿತುಂಡಮಂಡನಾಭೀಷ್ಟನುಂ ತುಷ್ಟನುಂ |
ಸ್ಫುರಿಪ ಸಾರಸಘೋರದೀಪ್ತನುಂ ವ್ಯಾಪ್ತನುಂ |
ಕರಿಕಾಯಸುರಜೇಯರುದ್ರನುಂ ಭದ್ರನುಂ ಕಾಲಾಂಗನುಂ ಭೃಂಗನುಂ ||
ಉರಗಕರವೃಷ್ಣಿಧರವರ್ಣನುಂ ಪರ್ಣನುಂ |
ಉರುವಿದಕ್ತಂ ಮುಕ್ತಕುಂಭನುಂ ಕುಂಭನುಂ |
ಗರಭಕ್ಷವಕ್ಷಪ್ರಭಂಜನುಂ ಭಿಂದನುಂ ಓಲಗದೊಳೊಪ್ಪಿರ್ದರು || ೨೪ ||
ಬಾಲಮಭರ್ಗಮಮದನಕಾಲಜಂಬಕದರ್ಪ |
ಚೇಲನುದ್ದಾಲವಸನಮಾಲಸರ್ವಾಂತಕ ಮ |
ರಾಲಕನಕಾಂಗವ ಕುಚೇಲ ಮನ್ಮಥ ಗುಪ್ತಶೀಲ ಮರ್ಧರಸಗೋತ್ರ ||
ಸ್ಥೂಲನಿರ್ಮಲಧೃತಕಪೋಲಕಾಲೀಶನುಂ |
ಡಾಲವಿದ್ಯುಜ್ಜಿಹ್ವಕೀಲನಿರ್ಜೋಳಮಾನು |
ಶೂಲಕೋಮಲಕೃಶಕಪಾಲಿಗೋತ್ರಕರಾಳಜಾಲರಿರ್ದರ್ ಸಭೆಯೊಳು || ೨೫ ||
ತುಂಗಮಾತಂಗಬೃಹದಷ್ಟಪ್ರಬುದ್ಧ ಸಾ |
ರಂಗದಿವ್ಯಾಂಗಸುಮುಖಪತ್ರಿಮುಖನಸಕಗ |
ರಾಂಗಜೇಶಾರ್ಂಗಬಕಮರ್ಮಪತಿವಾಂತಕಜನಾಂತಕಸುರಾಂಕದಮ ||
ಶೃಂಗಸಿಸ್ನಂಗಸಿಷ್ಟಂದಕೋಕಿಲಿಬಲಿಸು |
ರಂಗಕೃಷ್ಣಾಂಗಯೋಮಸುಧಾಮನಮದಗ್ನ |
ಷಂಗಂ ಕುರಂಗಂ ತರಂಗಂ ತುರಂಗಂ ಸಿರಂಗಂ ಸಭೆಯೊಳೆಸೆದರು || ೨೬ ||

ಅಣುವಿಗೊಲ್ಲರ್ ಬ್ರಹ್ಮಪದಮಂ ಪುರಂದರನ |
ತೃಣಕೆ ಬಗೆಯರ್ ಸಕಲಲೋಕಸಂಪತ್ತನಿವ |
ನೆಣಿಕೆಗೊಳ್ಳರ್ ನಿಜನಿಧಾನಮಂ ಧ್ಯಾನಿಸರ್ ಸಿದ್ಧಿಗಳ್ ಶುದ್ಧಿಗಳ್ಗೆ ‖
ಅಣಕವಾಡುವ ಮಹಾಸುಪ್ರಸಿದ್ಧರ್ ಪ್ರಬಲ |
ಗಣವಸಂಖ್ಯಾಕದಿಂ ನೆರೆದಿರ್ದುದಾಗಳಾ |
ತ್ರಿಣಯನ ಸಭಾಂಗಣದೊಳಂ ಭಕ್ತಿರಕ್ತಿಯಿಂ ತುತಿಗೆಯ್ಯುತಿರ್ಕೆಯಿಂದ ‖

ನಿಲು ಪುರಂದರ ಮುಂದುವರಿಯಬೇಡಗ್ನಿ ಯಮ |
ತೊಲಗು ನೈಋತಿ ಪದಾತನಾಗಿರು ತೆಗೆ ವಳಾ |
ವಳಿ ಬೇಡ ವರುಣ ಚಲಿಸದಿರು ಪವನ ನಾನ ಧನದೇಶ ಭಕ್ತತೆಯುತನದ್ರು ‖
ಸಲದು ಸಾರಿರ ದನುಜಸುತರು ಸುಳಿಯದಿರಿ ಮುನಿ |
ಕುಲ ಗಲಭೆಬೇಡ ಮನುಗಳ್ ಬಿಸುಕದಿರಿ ಎಂದು |
ಸಲೆ ವೇತ್ರಕರ್ ಬರಾಬರಿಗೆಯ್ಯುತಿರ್ದರಾ ಭಾಳನೇತ್ರನ ಸಭೆಯೊಳು ‖೩[illegible]‖

ಚಾರುನನ್ನವತಂಸನಿದಿರೊಳಗೆ ನಿಲದೆ ಪೋಪ |
ಸೂರಗ್ನಿಕುಂಡ ಶಿಖಿನೇತ್ರನಿವರಿಂದ ಕಡೆ |
ಸಾರು ತೃಣದಿಂದು ಸೂರ್ಯನಯನತ್ರ್ಯನಿದಿರೊಳಿರದೆ ತೊಲಗೆನುತಲಾಗ ‖
ದೂರ ನಡೆ ಸಂಜನುದ್ಭಸಿದಿರದೆ ಗಜಕ ಕೆಲ |
ಸಾರು ವರನೀಲಕಂಠನಿದಿರೊಳಿರದೆ ವಿದು |
...ರೊಳ್ಗಾನನಯೆಂದು ನೆರೆದಿರ್ದ ಸಗರ್ಗಳಂ ನೆರೆ ಬರಾಬರಿಗೈದರು ‖೩[illegible]‖

ತಡೆ ತಬಾಬು ಪೊಗದಿರು ಪೆಬನ್ನಾಕರ್ಣ ಸಂದಣಿಯು |
ಬಿಡಿಸು ಬಿಡದೆಡೆ ಸಿಲ್ಲು ನಡೆನೋಡು ಪೊಸಬಿಗರ್ |
ಜಡಿ ನಮ್ಮ ಪೊಂ ಸ್ಯಾಕು ನಮ್ಮ ಟಂಬಿಡಿಸೆನುತ ಘಂಟಿಕಂಕಾಳರೆಂಬ ‖
ಪಡಿಯರರ್ ಬಿಡದೆ ಗದ್ದಿಸಲು ಸಾವಿರಾಸ್ಯನು |
ಗ್ಗಡವ ಸಾರೂಪ್ಯನವವಿಯ ಪಡೆದ ಗಣನಾಥ |
ರಿಡಿಕಿಱಿದ ಸಿಂಹಾಸನದ ಸೊಂದೆಯೊಳಿರುತಿರಲ್ತ್ರ್ಯಕ್ಷನೋಲಗಂ ಮೆಱೆದುದು ‖

ಪುರಹರ ಪರಬ್ರಹ್ಮಮೂರುತಿ ಪರಾಕು ಸು |
ಸ್ಥಿರ ಸುರಾಲಯ ಧರ್ಮನಿರ್ಮಲ ಪರಾಕು ಮುನಿ |
ವರಹೃದ್ವನೇಜಾತಕರ್ಣಿಕಾನಿಲಯ ಮಣಿದೀಪಪ್ರಭಾ ಪರಾಕು ‖

ಶ್ವರಜನ್ಮಕಾರಣ ಪರಾಕು ಗಿರಿಜಾಸ್ವಹಿಪ |
ಕರಕಿರಣಪಾನಲೋಲುಪಚಕೋರ ಪರಾಕು |
ನಿರುಪಮ ಪರಾಕೆನುತ ಚಂಡಕೀರ್ತಿಗಳ್ಪೆದೆ ಕೀರ್ತಿಸುವರಾರುವ್ರನಂ ||೪೧||

ಕರಿದಾನವಂ ಮಾನಗೆಟ್ಟಳವುವಂ ಜಲಂ |
ಧರನುರ್ಕಿಸಿಂ ದಾಂಟಿಸಿದ ಧಕ್ಕಡೆಯತನದ |
ಪುರುಬೆಮುಗ್ಗಿ ಮದವ್ಯಾಘ್ರಾಂತಕನುಗ್ರದಿಸಮಗ್ನತೆಯುಮಿಗೆಸೊಂಪಳಮುದ||
ಉರವಣಿಸಿ ಮುಂಬರಿದು ಪಳಚಿ ಉಳಳರಳದುವಂ |
ಪರಿಪರಿಯೊಳ್ಥಿನಯಿಸಿ ತೋಱು ನೆಱ ನಗಿಸುವಾ |
ಪರಿಹಾಸಕಪ್ರಕರವಿರ್ದುದು ಕಪರ್ದಿಯ ಸಮುದ್ರಸಸ್ಥಿಥಸಭೆಯೊಳು ||

ಪುರದೊಳಂಧಕನ ಗೆಲ್ದ ಸಹಾಯಶೂರ ಮೆ |
ಲ್ವರಿವಸಂಗನ ಜಯಿಸಿದಾಶ್ಚರ್ಯಶೌರ್ಯ ತ್ರಿ |
ಪುರವರಿದ ಪೌರುಷಾಧಿಕ್ಯ ಭಸ್ಮೀಕೃತಿಯ ಭಂಗಿಸಿದ ಬಿರುದಾಂಕನು ||
ಹರನೆಂದು ಭಕ್ತಿಯಿಂ ಪೆಂಗೆಯುದೊಳುಂ ತುತಿಪ |
ಪರಿಹಾಸಕಪ್ರಕರದಿಂದಲಾಸ್ಥಾನಮಂ |
ದಿರವಮುಳಹಾಸ್ಯರಸಪೂರ್ಣಾರ್ಣವದೊಳಿರ್ದುದೇಂವೇಳ್ದಪೆಚ್ಚರಿಯನು ||೪೨

ಗಂಧರ್ವರೊಲ್ದು ಗಾಯನರಸಂ ತುಳುಕೆ ಮುದ |
ದಿಂದ ಪಾಡಲ್ಮತಂಗಂ ಮೃದಂಗಂ ನುಡಿಸ |
ಲಂದು ಮೇನಕೆ ಮಂಜುಘೋಷೆ ರಂಭಾಮುಖಪ್ಸರಾದ ಸುರನರ್ತಕಿಯರು||
ಚೆಂದದಿಂ ಶುದ್ಧಾಂಗ ಬಹುಚಾಳಿ ದೇಸಿ ಮಾರ್ಗ |
ದಿಂದ ಹಾವಸುಭಾವವಿಭ್ರಮವಿಳಾಸದೊಳ್ |
ಸಂದು ಪೆಕ್ಕಣವಾಡುತಿರ್ದರೊಂದೆಸೆಯೊಳಂ ಶಂಕರನ ಸಮ್ಮುಖದೊಳು ||

ವರಭೃಂಗಿನಾಥನೊಂದೆಸೆಯೊಳುಂ ಹಾಸ್ಯರಸ |
ಮುರುಭಕ್ತಿರಸ ಭಾವರಸ ನಾಟ್ಯರಸಮೈದೆ |
ಯುರುಸಭೆಯ ತುಂಬಿ ತುಳ್ಕಾಡಲುಂ ಪಾಡಿ ಶಿವಕಥನಮಂ ಕಥೆಯದಾಗಿ ||
ನೆರೆ ಪೇಳ್ವ ಮುನಿಗಳ್ಗೆ ಯಿಂಡಿಸುವ ನಾಟಕವ |
ಹರುಷದಿಂ ನೋಡಿ ಪುರಿಯಿಟ್ಟಂಗಜಿತ್ತ್ವಮಂ |
ಸಂದಾಗ ಬಾಲಕೂಷ್ಮಾಂಡಗಣನಾಥನೊಳ್ ನಂದಿ ವಂದಿಸಿ ನುಡಿದನು||೫೩||

ಎಲೆ ಶಿವಗಣಾಧೀಶ ಕೂಷ್ಮಾಂಡಗಣಪ ಕೇ |
ಳೆಲೆದು ಭಾರತವರ್ಷಮಧ್ಯದೊಳಿಳಾವೃತ
ಸ್ಥಲಗಳೊಳಗತಿಬಲಿತ ತಪಸ್ಸಿದ್ಧಿಯಾಗುವ ಮಹೋತ್ತಮಕ್ಷೇತ್ರಮಿರ್ದು ||
ನೆಲೆಯನಾಲೋಚನೆಯೊಳಂ ತಿಳಿದುಸಿರ್ದೆನ್ನ |
ಸಲಹೆಂಬ ಸಂದಿಯುಂ ನೋಳ್ಪ ಸಿಂ ತಪಕೆ ಸಿ
ಸ್ಥಲಚಿತ್ತನಾದ ಕಾರಣಮದೇನುಸಿರೆನಲ್ ನಸಿವ ಮಾನಸನುಸಿರ್ದನು || ೫೬

ತಂದೆತಾಯಿಗಳೊಳಾಡಿದ ಮಾತನತಿಹಿತರ |
ಮುಂದುಸಿರ್ದಂಬ ನಯಮುಂಟಾಗಿ ಸಂದಿಯಾ |
ನಂದುಸಿರ್ದನೀಶನುಮೊಯ್ಯಂ ಕರೆಯ ಕಳುಹಲಾಂ ಪೋಗೆ ಶಿವಸಾರೂಪ್ಯದ ||
ಸಂದೇಹದಿಂದೀಶನೆಂಬ ಭ್ರಮೆಯಿಂದೆಳು |
ವಂದಮಂ ಕಂಡು ಕಾಲ್ಗೆರಗಿ ಕಿಂಕರನು ತಾ
ನೆಂದುಬೀಳ್ ಪೇಳಿಕೊಂಡೆನವರೀಶ್ವರರೂಪಂ ನೋಡಿ ತನಗೆಂದನು ||

ಅತಿವಿಕಾರಿಣಿ ಕ್ರೋಧಿನುವರ್ಷ ವಿರೋಧಿನು
ಮತಿ ವಿಕೃತಿವ್ಯಯಕಾಲಯುಕ್ತಿ ಜ್ವಾಲಾಧಿಪೋ
ಧಿತಚಿತ್ರ[illegible]ವ್ರೊಲ್ವಿ ವಶಾರ್ಕ್ಯರಿಯೊಳ್ (?) ರುಧಿರೋದ್ಗಾರಿರಕ್ತಾಕ್ಷಿಯಾಗಿ
ಸತತ ವಿಘ್ನ ಕಲಹಂಗೊಂಡು ನಂದನ
ಪ್ರತತಿಯೋವದೆ ಪ್ಲವಂಗಪ್ರಕೃತಿವೆತ್ತ[illegible]
ಸತಿಯುಳಿದು ಸೌಖ್ಯಮಿರ್ದವನಂತೆ ಸಾರೂಪ್ಯಮಂ ಬಿಡಲುಸುಹಮೆಂದನು ||

ಕೂರೆಳು ಜಗದ ಜನನಿಗೆ ಮತಿಭ್ರಾಂತಮಂ |
ತೋರ್ಪವಿರೂಪನಿಗೆ ಹಗೆಯಾಯ್ತಿದಂ ಬಯಕ
ತೋರತಪದಿಂ ಪುರಾರಿಯನೊಲಿಸಿ ಮಗುಳೊಪ್ಪಿಸುವೆ ಮದೀಯಾಕಾರವ ||
ಕಾರಣಮಿದೀಗೆಂದು ಪೇಳ್ದ ಗಣವರನ ಶಂ
ತಾರನೋಕ್ತಿಯ ಕೇಳ್ದು ಕೂಷ್ಮಾಂಡಗಣನಾಥ |
ನೀರಂತೆಸುಚಿರಂಮುಗುಳ್ನಗೆಮುಖಾಂಬುಜದೊಳುಣ್ಮಲತಿಸಂತಸದೊಳು ||

ಹರ ಮಹಾದೇವ ಕೇಳಿದೆವಲಾ ಚಿತ್ರಮಂ
ಬರ್ಪಿದಿ ಭ್ರಾಂತತ್ವಮಂ ತಳೆವನಕಟೇನೆಂದಿ |
ಯೋವರ್ದೇನಾಯ್ತೊ ತನ್ನಂ ಕಂಡಗಾತ್ಮಭವೆ ಶಿವನೆಂದು [illegible] ||

ಹಿಮವಾಗಿ ಪೊಂಗಲ್ಕಾದಿತ್ಯನೊಳ್ ಮಂಜು |
ವರಶೀತಕಿರಣನೊಳ್ ಬಿಸಿ ಮಧ್ಯಾಹ್ನದೊಳ್ ಶಾಂತಿ ·
ಯಿರಮುಸ್ಸೆ ಗೊರಲ್ಲಿ ಕಲ್ಪಷಂದೊಳ್ಬಲ್ಲದೆ ಸಾಕು ಮಾಣೆಂವನು ||೬೦||
ತಳಗೆಲೆ ದವಾಸಲಿನ ಕೆಡಿಸಬಲ್ಲದೆ ಕಲಿಘ |
ನುಳಿವ ದಳ್ಳುರಿಯುನಾಳ್ವುದೆ ತಮದೊತ್ತರಂ
ತರಣಿಪ್ರಭಾತಕವನಗ್ಗಿಪುದೆಯುರಗಂ ಬಿಸಿಡಿಲು ಕಡು ವರ್ಷದ |
ಮುರಿವುದೆ ಬಳ್ವೆ ಎಳೆ ನಂದಿ ಸಿನಗಿಟೆಂತೆ
ಕೊರಗಿಪುದೆ ಬಿಡು ಗಿರಿತನೂಜೆ ಶಿವಸಾಕಾರ |
ವಿರಲೊಳ್ಬಗೆದಳವಳಿಂದ ಸಿನಗೆನೆಂದು ಕೂಷ್ಮಾಂಡನಿಂತೆಂದನು ||೬೧||
ಸಿಡಿಲುವಕ್ತ್ರಗೆ ಜಡೆಯು ಬಳೆಯು ಮದ್ರಾಸಗಂ
ನಡಕುವಗ್ಗದೆ ಗಂಡಘೇರುಂಡನಿಗೆ ನಂಟು
ಗಡೆಯು ಸಿಂಪಕೆ ಸಿಪಿಯು ಉರಳೆ ಹುಬ್ಬಿಲಿಗೆ ಬಿಡಿಕಲ್ಲ ಪೇರಿಕ್ಕಲಂಗೆ |
ಹೆಡೆಗೆ ಗೊಂತವೆ ಮುಗ್ಗಿ ಸುಪ್ರೀತೆ ಶಿವರೂಪ್ಯ ನಿ
ಸ್ನಡೆಗಿಡಿಸಿ ಚಿಂತೆಗೊಳಗಾಗಿಪುದೆ ಶಿವೆಶಿವಾ
ಬಿಡುಬಿಡಾತಂಕಮೇಕೆಂದು ಕೂಷ್ಮಾಂಡನುಡಿಯುಲಾ ನಂದಿಮುಗುಳ್ನಗೆಸಿದನು ||೬೨||
ಮೊಗಳನ ಬಳಕ ಮುಕುಂದನ ನೊಟಿವೆ ಕಿವಿಯು
ಸೀಗವಾಮಲೆ ಗೀತದ ಸೊಗಸೆ ಕಾಲ್ಲಗಳ್
ಪೋಗೆ ಕಬ್ಬಿನ ಮೆಲಗಾಸೆಯೀ ಕಣ್ಣಳದ ಬಳಕ ನಿವರ ಯಾತ್ರೆಯೆ ||
ಆಗಿರ್ದ ಕಾಲ್ ಪೆಳಪುಗೊಂಡಮೇಲ್ ಸೊಡೆಯದ |
ಭೋಗವೇ ಕಟಕಟ ಗಿರಿಜೆದಸೆಯೊಳಾದ ಭ್ರಮು |
ಗಾಗಿದೆನಗಿಸ್ಸುಳವೆ ತಪದೊಳನ್ಯ್ಯಡಲು ದಂಡಿಸೆಂದೊಡಿಂತೆಂದಳು ||೬೩||
ಕಳಪಂಸನೆತ್ತ ಪುಳಯುಳಿಯೆತ್ತ ಬಿಸಿಲುಗ್ರ
ಕಳೆಯೆತ್ತ ಜೊನ್ನವಕ್ಕಿಯದೆತ್ತ ಗ್ರೀಷ್ಮದ
ಗ್ಗಳಬಿಸಿಯು ಮಾರುತನದೆತ್ತ ರಗನೆತ್ತ ಟ್ಟವಗ್ಗೆತ್ತ ಗಿಳಿಯದೆತ್ತ |
ಬಳಕದಿಂ ಕಾಳಿವ ಬಿಜುವಳೆಯೆತ್ತ ಬಾದಗೆಯು |
ಯೊಳಮುಳಿಯದೆತ್ತ ಶಿವಶರಣಾರ್ತ ಸೀನೆತ್ತ
ತುಳತಪದ ಜಂಜಡಮಿದೆತ್ತ ಸಿಪ್ತಾರಣವೆನುತ್ತ ಕೂಷ್ಮಾಂಡ ಜಡಿದ ||೬೪||

ತಂಗದಿರನಿಂದಿಂಗಡಲ್ ಪೆರ್ಚದಿರಲಾಸ |
ತಂಗನಿಂ ಬೆಳಗಾಗದಿರಲಾವಸಂತನಿಂ
ಪೊಂಗಿ ಚಂದನ ತಳಿರ್ದೋರದಿರಲಾ ಸ್ವಾತಿವನಿಯಿಂದ ಚಿಪ್ಪುದುರ್ದು ||
ಕಂಗೊಳಿಪ ಮುಕ್ತಾಫಲಂಗಳೆಯುದಿರಲು ಮೇ |
ಘಂಗಳಿಂ ಚಾತಕಂ ತೃಪ್ತಿಗೊಳ್ಳದಿರಲಾಪು |
ದಂಗಭೂಷಣನಿಂದ ನಿನ್ನ ಸಂದೆಗ ಪೋಗದಿರೆ ತನಕೆ ಪೋಗೆಂದನು ||೬೫||

ನಿನಿವು ಸೌಖ್ಯಂ ಪಾರಿರುವಕೆ ಚೈತ್ರಾಗಮದ |
ಬನಗೆ ಜಾತಿಗೆ ನವ್ಯ ಹೇಮಂತಾಂಕೋಯುಸ |
ತ್ಕುಸುಮನೌರಭ್ಯ ಷಟ್ಪದಗಿಂಪುದೋರ್ಪಂತೆ ನಿನ್ನ ಬಗೆಯುಂ ವಿವರಿಸೆ ||
ಬನೆಮ | ನಿನ್ನನುಜ | ಬಿಸಿಗಣ್ಣ ಮಮತೆಯೊಳು ಲಾ |
ಲಿಸಮಾಡಿಸನೆ ಶಿವಶಿವ ಪೇಳ್ವೆನೆಂ ಪಿತಾ
ಳಿಸಿತು ಬಿಡು ಬಳಲ್ದೆ ಜೀವನದ ತನುವೇಕೆಂದು ಕೂಷ್ಮಾಂಡಸಂತತಿವನು ||

ಗಣನಾಥ ನೀನೆಂಬ ಬಗೆ ಸತ್ಯವಾದೊಡಂ
ತ್ರಿಣಯನನ ತಪಸ್ಯದು ಮೆಚ್ಚಿಸಿ ಮನವಾಂಗಭೂ
ಷಣವಾದ ನಾರೂಪ್ಯಮಂ ಸಮರ್ಪಿಸಿ ಬಳಿಕ ನಿವೇದ್ಯಕಮಂ ನೂಕಿದ ||
ಘಣಿಯಂತೆ ಮುನ್ನಿನಾಕೃತಿವೆತ್ತು ನಿಮ್ಮ ನಂ
ದನೆಗೆ ನಲ್ವಿಂ ಪಾವನಾಶ್ರಮದ ಪೇಳಿದಂ
ಗಣನಿಧಿ ಮಹಾನಂದಿ ನುಡಿಯೆ ಕೇಳ್ದು ಗಲಾಕೂಷ್ಮಾಂಡನಿಂತೆಂದನು ||೬೭||

ಪ್ರದೋಷಾಲಿಸು ನಂದಿ ಗಣನಾಥ | ಗುಣಯೂಥ
ಮೋದನಿಧಿ ತಪೋಲಬ್ಧಿಯ | ನೃಪಜತ್ವಮೆಂದರಮ
ಹೀಂಧರದೆ ಮಥಿಸಿಯಿಷ್ಟಾರ್ಥಾಮೃತವ ಪಡೆಯು ಬಗೆವರಂಬುಧಿಪರಿಧಿಯು |
ಮೇದಿನಿಯೊಳಂ ಸಮುದ್ರವ್ವಿಪಕಾನನದ
ರಾಧರಪ್ರಕರದೊಳಗೆಂದು ಪುಣ್ಯಾದ್ರಿಯಿತು
ನಾದರಿಸಿ ಪೇಳ್ದು ಕೇಳಲ್ಲಿ ನಂದೀಶ್ವರನ ಭಜಿಸು ನೆನೆದೆಣಿಕೆಯುಪಿನು ||೬೮||

ಇಂತು ಎಂಬತ್ತನೆಯ ಸಂಧಿ.

## ॥ ಪತ್ತನೆಯ ಸಂಧಿ. ॥

---

**ಸೂಚನೆ :—**

ಜನನೊಂತ ನಂದಿನಾಕಬಸ್ತ್ರಂದನಾ ಸನಂ
ಜನದಿಂದ ಪೇಳ್ದ ತಾ ಮನ್ನ ತನಕೆಂದನಿ
ವಸುಧೆಯೊಳು ತಿರುಗಿ ಕಂಚಿರ್ದ ಸುಕ್ಷೇತ್ರಸ್ಥಾನನಂ ಚಿತ್ರದೊಳು ॥

ಕಂದರ್ಪದರ್ಪಹರ ಸುರರಾಜರಾಜ ಗುರು
ಸಿಂಧು ಸಿಂಧುರಸುತವರಾಂಬರಾಂಬರಕೇಶ ।
ಕುಂದೇಂದುವೃಷಭಸ್ಥರಸ್ಥರತಿದರ್ಪದಶ ಧ್ವಜನೇತ್ರಾಕ್ಷವಿಶೇಷದಕ್ಷ ॥
ಕಂದಳಿತದ ತ್ರಿವೃತ್ತಾಲಸೇವಿತ ಪಿತೃ ।
ನಂದಿ ಸುತರಂಗರಂಗತ್ತರಂಗಾಕರ್ಣ ।
ಮಂದಾಕಿನೀಕಲಿತವರಜಟಾಪಟಲ ನಂದಿಗೀಶ ಕಾಯ್ಕೆ ಸತತಂ ೧ ॥

ಶ್ರೀಶೈಲಮಂದಾಕಿನ್ಯಾದಿ ಸಕಲಮಹಿಮಾಲ ಕ
ತ್ರೀಲಸಂಪನ್ನ ಕರೆದು ಬಂದೆನವಾಸಂ ।
ದಗೋಳಕಸಂಗ್ಯಮ ದಂಡಿಯು ಪಿಂಡಲಿಂಗಭಾದನಸನ್ನಿಂದ ಬಂದ ।
ಉಳ್ಳೋಳಚಿತ್ರಭಾವಸಂಭಾವಕಂದತಿಕ ।
ರಾಲತಸವಂ ಗ್ಯದ ಶಿವನೊಲಿಸಬಂದನದು
ಶ್ರೀಲಕೂಪಾಂತಗಣಸಾಲಸಾನೆನಸಿದ ಜನಗೊಳ್ ಬಾತಸಿಂಶಂದನು ೨ ॥

ಉರುಧೈರ್ಯಧರರಂ ಬಿಳ್ವೆದು ವ್ಯಾಮತಸಂತಂದ
ಕರಕಾಂತದಿಂದ ಜ್ವಾಲಾಕಲಾಸಗಳಿಗೆ ।
ವರಬುದ್ಧಿ ಸನಲಿಯ ನಿರ್ಗಳಿತಭಾತಂಕವ್ಯಗತಪ್ಪದೊಳ್ಪುವತೆಯು ॥
ಪರಮಪತಿಗಾಪದ್ವಾದ ಬತ್ತಳ್ತಿ ಬಳ
ವರಿದ ಚಿಂತಾಪೂರ್ವಕಾಲದೊಳ್ ನಿರು ಜೀ ।
ಸಬಳಿನಂ ಕೂಷ್ಮಾಂಡಗಣಮನಿವಂ ನಿಂದವಾಗಮನಿಪೊಂಕ್ತಿಗಳನು ॥೩॥

ಅಳವಡಿಕೆಗೊಳ್ಗಾಯ್ದುಳ್ವರ್ ಚಿಂತಾಮರೆಯ
ಜ್ವಳಕಲಾಪಜ್ವಾಲೆಯಿಂ ಮಿಗಲು ನೆರೆದಿಸಲು ।
ಪಲವು ಪಿಂಯಮಾಸಭಿಂದುಗಳ ತಳವಂತೆ ವಿಲಸದ್ವನಜಭ್ರಕೋಟಿ ।

ತುಳುಂಕುತಿರೆ ಕೂಷ್ಮಾಂಡಗಣವರ್ಗ ಜೀವನಂ ।
ವಳೆದು ಮುಮ್ಮುಳಗೊಳ್ವ ಸಂದಿಯು ಮುಸಕ್ಕೆ ಶಿ ।
ತಳಕೆ ಸಂಭವಿಸಿ ಪುರುಳೊಗೆವಂತೆ ಸಾರಮಾಧುರ್ಯೋತ್ತರವ ನುಡಿವನು ॥ ೪ ॥

ಕರ್ಪ್ಪುರದೊಳಾಗಿಸಿದ ಕೆಣ್ಣಗ್ನಿಪುರುಷನೊ ।
ಲ್ದಪ್ಪುಲುಳಿವಪುದೆ ಕಾವಳ ಕವಿಯೆ ದೀಪಕಂ ।
ಮುಪ್ಪುಮುದೆ ಶಾಲೂರಶಾಬಕಂ ಕಮಗಿ ಬಡಿವಟ್ಟಿದೊಡೆ ಘಟಿಸರ್ಪದ ।
ವರ್ಪ ಕೆಡುವುದೆ ಸಾಕು ನುಡಿ ಶಿವಗಕಟಕಟ ।
ಬಪ್ಪುದೇ ಮಾಪ್ತ ಶಿವಗಭವನಸ್ಥಿತಿಯೊಳಂ ।
ತಪ್ಪಿಸಿದರೇಕೆ ತಪದಾತಂಕವೆನುತಲಾ ಕೂಷ್ಮಾಂಡಸಿಂತೆಂದನು ॥ ೫ ॥

ಅಗಲದಕೇಸು ನಿಷ್ಠಭಕ್ತಿಯಿಂ ತಪವ
ನಾಗಿಸಿ ಸದಾಶಿವನನೊಲಿಸಿ ಸಾರೂಪ್ಯಮಂ
ನೀಗಬಗೆವರೆ ಕೈಯ ಸಾರ್ದ ಸುರಮಣಿಯ ಮುಳಿಲಿತದೊಳಂ ಮುಡಗದಿರದೆ ॥
ಪೋಗಲಾಡವಿರು ಮನೆಯುಂ ಪೊಕ್ಕ ಲಕ್ಷ್ಮಿಯಂ ।
ಕೂಗಿ ಪೊಱಮಡಿಸದಿರುಯೆಂದೊಡಾಳ್ದ ಬುದ್ಧಿ ಸಿದ ।
ಗಾಗಿರದು ಹಿತವೆಂದು ಬಾಣಕೂಷ್ಮಾಂಡಕಂ ಮುಡಿವನನುರಾಗದಿಂದ ॥ ೬ ॥

ಕೇಳಲೆ ಮಹಾತ್ಮ ನಾನಾದಿಯೊಳ್ ಸಾವರದೆ ।
ಭಾಗನೇತ್ರನ ಭಜಿಸಲೆಂದು ಭಾರತವರ್ಷ ।
ದೇಳಗೆಯೊಳಂ ಪಾವನಾತ್ಮಮವನಾಶ್ರೈಸಲೆಂದು ಕಾನನವನಗಳ ।
ಶೈಲಗಳ ಸುಕ್ಷೇತ್ರಗಳ ತೀರ್ಥಗಳ ನದಿನ
ದಾಳಿಯುಂ ತಿರುತಿರುಗಿ ನೋಡುತ್ತೈತಂದೆನು ನಿ ।
ರಾಲಸದೆ ಮನ್ಮನಕೆ ರಮ್ಯವಾಗುವ ತಾಣಮಂ ಕೆಸ್ತ್ರೀಣಿಯೊಳ್ ಕಾಣದೆ ॥

ತೊಳಲಿದೆಂ ಕೇರಳ ಕರಾಟ ಕುರು ಲಾಟ ಸಿಂ
ಹಳ ಶೂರಸೇನ ಘೂರ್ಜರ ಪಾಂಡ್ಯ ಮದ್ರ ಕಂ
ತಳ ಮಗಧ ಕಾಶ್ಮೀರ ಕಾಂಭೋಜ ಗೌಳ ಕಾಮೋಜ ಸೌರಾಷ್ಟ್ರನಗರ ॥
ತುಳುವ ವಂಗ ಕಳಿಂಗ ವೈದರ್ಭ ಯವನ ಬಾ ।
ಹ್ಲಿಕ ಚೀನ ಪುಳಿಂದ ಪಾಂಚಾಳ ಚೋಳ ಕೋ ।
ಸಳ ಸಿಂಧು ಶಾಲ್ಮಲ್ಯ ವತ್ಸ ಮಾಜಾಲ ನೇಪಾಳ ಮಾಂಡವ ಮಾದ್ರವ ॥

ಪಾರಸಿಕ ಪ್ರಾಜ್ಯೋತಿ ಬರ್ಬರ ಸುಘೋಷ್ಣ ಗಾಂ |
ಧಾರ ಪೊಯ್ಸಳ ಸೈವ ಪಮ್ಮೀರ ಮುದ್ಗಲ ಚ |
ಕೋರ ಚೈತ್ಯ ತುರುಷ್ಕ ತುರಗ ಮುಖ ಬಂಗಾಳ ಕರ್ಣಾಟಕಂ ಕೊಂಕಣ ||
ಕೂರಿಷ ನಿಷಧ ಮಾಳವ ದ್ರಾವಿಡ ಕೇಕಯಮ |
ದೀರಚನೆವೆತ್ತ ಛಪ್ಪನ್ನ ದೇಶಂಗಳೊಳ್ |
ಗಾರ್ಗೈಮ ನೋಡುತ್ತ್ಯಂದೆನ್ನ್ಯ ತಂದೆ ಮನಕಂದವಮಾದಾಶ್ರಮವನು || ೯ ||

ತಿರುಗಿದೆಂ ಜನನದೆ ದೇಶವಾರಣ್ಯಮಂ
ಪರಮಪಾವನಮಪ್ಪ ಕುಲಪರ್ವತಂಗಳಂ
ಶರಸಿಧಿಗಳೆಗ್ಗಳಪ್ಪಪುಷ್ಪತೀರ್ಥಂಗಳಂ ಮುನಿವರಾಶ್ರಮಗಳ ||
ಗುಣಾಂತಾದ ನದಿಸರೋವರ ಗುಹೆಗಳಂ ಮನಸಿ |
ಗೆಂಕವನವಾಶ್ರಮವ ನೋಡುತ್ತ್ಯತರೆ ಕಂತೆ
ನಿರುಪಮಿತವಾದ ರಚನೆಯೊಳು ರಂಜಿಸುವ ಸುಪವಿತ್ರಕಾಶೀಕ್ಷೇತ್ರವ || ೧೦

ಪ್ರಳಯಕ್ಕೆ ಪೊಱಗಾಗಿ ಕಲಿಕಾಲಕಲ್ಮಷದ |
ವಿಲಸನಕೆ ವ್ಯತಿರಿಕ್ತವಾಗಿ ಯಮಯಾತನೆಯ |
ಟ್ಟಳಿಗೆ ಯೋಗ್ಯಮದಾಗಿ ಪ್ರಾಣ್ಯಸಂಚಿತಕೆ ಪಕ್ಕಾಗಿ ಪರಮಾನಂದಕೆ ||
ನೆಲೆಯಾಗಿ ತ್ರಿವಿಧ ಸುಖಕೆ ತವರಾಗಿ ಧರೆ |
ವಲಯಕ್ಕೆ ಯೋಗ್ಯಾಗದ ಭವನ ಕರಾಗ್ರದೊಳ್
ತೊಳಪ ಶೂಲದ ತುದಿಯೊಳಸೆವ ಕಾಶೀಪುರಂ ಕಣ್ಗೆ ಕೌತುಕವಾದುದು ||

ಪರಮಪ್ರಣ್ವದ ನೆಲೆತ್ತು ಮುಕ್ತಿ ಬೆಳಸಿದ ಬಿತ್ತು |
ಶ್ರುತತತ್ತ್ವಪ್ಪದಾದ ರೂಪದ ಸಾಗರೋ |
ತ್ಕರುಷ ಭಕ್ತಿಯ ಬೀಡುಬಿಡಾ ಪ್ರಸದ ನಾಡು ಕಲ್ಮಷವ್ರಜದ ಕೇಡು ||
ಪರಶಿವಾಗಮದ ಕಣ ಸೂಕ್ಷ್ಮ ತಪೋನಿಧಿಗಳ ಮನೆ
ಸಿರುತ ತಪಸಿನ ತಾಣ ಧರ್ಮದ ಧೇನುವಿನ ಬಾಣ
ಸುರಮುನೀಶಸ್ತೋತ್ರಪಾತ್ರ ಕಾಶೀಕ್ಷೇತ್ರ ಕಮರಸ್ಯವಾಗಿರ್ದುದು ||

ಲಲಿತತತ್ಕ್ಷೇತ್ರಪಂಚಕ್ರೋಶದೊಳಗೊಗೆದ |
ಶಿಲೆಯೆಲ್ಲಮುಂ ಸದಾಶಿವಲಿಂಗಮಯ ಮನುಜ |
ಕುಲಮೆಲ್ಲಮುಂ ಪ್ರಮಥಕುಲಜಾಲಮದೆಲ್ಲಮುಂ ರಮಣೀಯಮತೀರ್ಥಮನಿಶಂ

ಉಳಿವ ವಾಕ್ಯಮದೆಲ್ಲ ಶ್ರುತಿಸಮ್ಮತಂ ನಡೆವ ।
ನೆಲವೆಲ್ಲ ಶಾಸ್ತ್ರಪದ್ಧತಿಯಾಗೆ ಕಣ್ಗೆ ಮಂ ।
ಗಳವಾಯ್ತು ಕಾಶೀಪುರಂ ಮುಕ್ತಿಗೃಹಗೋಪುರಂ ಭೂಸತಿಯ ನೂಪುರಂ ॥
ತನುವೊಂದು ತಲೆಯೊಂದು ತೋಳ್ಗಳೆರಡಿಪ್ಪ ಜಡ ।
ಮನು ಸೀಗಿವನೆನೆಂದು ಬಾಂದಸನ ಬಿಡಲೊಡನೆ ।
ತನುವೆಂಟು ತಲೆಯೈದು ತೋಳ್ ಪತ್ತದಾಗೆವಿಗುಂ ಮರಣವಿಲ್ಲದಂತೆ ॥
ಜನಿಸುವೀಕ್ಷೇತ್ರಮಂ ಶ್ರೋತ್ರಿಯರನೇಕಮನು
ಘನಮೆಂದು ಸ್ತೋತ್ರಮಂ ಮಾಳ್ಪರಿದು ಚಿತ್ರಮೆಂ ।
ದೆನೆ ಕಾಶಿ ಭಕ್ತಜನಸನ್ನುತೋಷಿ.....ಘನಭಯಪ್ರೋಷಿಯೊಲಿದು ॥ ೧೪

ಸಲೆ ಯಥಾ ಬೀಜಂ ತಥಾಂಕುರಂ ಎಂದು ಶ್ರುತಿ ।
ಕುಲ ಸ್ವಾಮಿವಂತಿಳಾತಳದೊಳಂ ಬಿತ್ತಿದುದೆ ।
ಫಲಮುಪ್ಪುದೆಂಬುದಿದು ಸಿದ್ಧಮಂ ಭಾವಿಸುತ್ತೊಪ್ಪಂತಲ್ಲಿ ಕಾಶಿಯು ॥
ಲಲಿತಸ್ವರ್ಣಕ್ಷೇತ್ರದೊಳ್ ಪ್ರಾಣಬೀಜಮಂ ।
ಸಲೆ ಬಿತ್ತಿದೊಡೆ ಶಂಕರಾಂಕುರಂ ಜನಿಸುವೀ ।
ಬಲುಕೌತುಕಂ ವಿಕ್ತ ಬಳಿಯೊಳೆಲ್ಲಂ ರಾರಾಜಿಪುದು ತೇಜದಿಂದ ॥ ೧೫

ಆಪುರದೊಳಂ ಸಮಾಶಿವವಿಶ್ವನಾಥನುರು ।
ಗೋಪುರಂ ಕಣ್ಗೆ ಮಂಗಳವಾಗಿರಲ್ಕದರೊ ।
ಳಾಪರಂಜ್ಯೋತಿರ್ಮಯಾಕಾರಲಿಂಗ ಗಂಗಾತರಂಗಾವತಂಸಂ ।
ಲೋಪರಹಿತಂ ಭಕ್ತಭಾವನಾತೀತ ವಿ ।
ಖ್ಯಾತಪುಣ್ಯೋಪೇತ ನವಪಾರಿಜಾತಪ್ರ
ಭಾತಿಶಯನಿರೆ ಕಂಡು ವಂದಪ್ರಣಾಮವಂ ಗೈದು ಸನ್ನುತಿಯಿಸಿದನು ॥

ವಿಕ್ಕಲ್ಲ ಪರಿವೃತಬ್ರಹ್ಮಸುಪರಿಶೋಭಿ ।
ವೃಕ್ಕಂತಿಭ್ರಾಂತಕದಳ್ಳಸ್ಮೈತ್ಕೈ
ತ್ರ್ಯಕ್ಕಾಯಸುರಪ್ರಮಥಸಪ್ರಮುಖ ಪೂಜಿತಪಾದನೇಕಪಾದ ।
ತಕ್ಕಂಭಿತಾಪ ಘನತಾಪಸಸ್ತವನ ಸ
ಮ್ಯಕ್ಕಲಿತಗಿರಿಸುತಾಕಾರುಣ್ಯಮಲ್ಲಿಕಾ
ಸ್ರಕ್ಕಾರುಭೂಷಣ............ಪಾಲಿಸುವುದೆಂದನು (?) ॥ ೧೬

ಧರ್ಮರಾಜಸ್ತ್ರಮಥನಂ ಕಂತುವಿಜಿತಕೃತ
ಧರ್ಮಪಾಪೋನ್ನತಯಶಸ್ಕ ಸತ್ಪ್ರಸಂತ |
ಧರ್ಮಚೇಲ ಶರಾಸನಾರ್ಜುನಶರಸ್ತ್ರದ ಪ್ರಮಥನಿಕರಸೇವ್ಯ ||
ನಿರ್ಮಲ ನಿರೀಹ ನಿತ್ಯಾನಂದಭರಿತ ನಿ
ಷ್ಕರ್ಮ ತಾಪತ್ರಯನಾಶದ ಮತಂಗಜನ್ಯತ್ಕ
ಮರ್ಮಭೇದನ ವಿಶ್ವನಾಥ ಗಣನಾಥ ಪಿತ ಎಂದು ಮುದದಿಂದೆಂಗಿದೆಂ ||೧೮

ಪರಮ ನಿರುಪಮ ವಿಧೃತನೂತನ ನಿಸ್ಸೀಮ ನು
ಧಿರ ಸಕಲವೇದಾಂತವೇದ್ಯ ಜಗದಾಧಾರ
ನಿರುಪಮಿತಲೋಕವಿಸ್ತರಣ ಭಕ್ತಾಭರಣ ಜಿತಕಾಲ ಭಾಳನೇತ್ರ |
ಪುರನಿರ್ದಹನ ತ್ರ್ಯಂಬಕೇಶ ಗಿರಿಜಾಧೀಶ
ಸುರವರೇಣ್ಯ ವಿನತಶಂಕರ ದುಷ್ಟ ತಮಹರ
ಕರಜಸ್ಮಿತಾತ ತ್ರಿತನುಭೂಷಣ ನಿಮ್ನಗಾಧರ ಸಲಹೆಂದು ತುತಿಯಿಸಿದನು ||೧೯

ತರುಣಹಿಮಕರಮೌಳಿ ಗಂಗೋತ್ತಮಾಂಗನಂ
ಪರಮಪ್ರಭಾಪುಂಜ ಮಂಜುಳ ಗಾತ್ರನಂ
ಗಿರಿಶಯನಹಿಮಾನಿಲಕಲ್ಪವಿಗಲ್ಪನಂ ಸರ್ವೇಶ್ವರನಂ ಈಶನಂ |
ಉರಗಾಧಿಪತಿಪದಸಂಪ್ರಾಪ್ತರಭೀರನಂ
ಸುರಪನ್ನಗಕೃತನಮ್ರಶಾಸನಿಶಾಸನಂ
ವರಕಲ್ಪವೃಕ್ಷಾಂಕವಕ್ಷಪ್ರಪಂಚನಂ ಭಜಿಸಿದಂ ಭಕ್ತಿಯಿಂದ || ೨೦ ||

ಪರಮಪಾವನಪಿಂಗಕಪರ್ದ ಹಿಮಧಾಮ
ಕರಜೂಟ ಪ್ರದಪಿಜಯ ಪ್ರಾಜಿತಾಖಿಲಲೋಕ
ನುರುಶೋಭಕೀರ್ತಿಮಥನ ಕೃಪಾಕಟಾಕ್ಷ ಪ್ರೋಕ್ಷಿತತಪ್ತೋಘನಾಚಯ |
ನಿರುತ ಪೌರುಷಕಾರಿ ಸಂತಾಪಹಾರಿ ಪಿತ
ವರಗಮನಚಂಚಿತಾನನಾಂಕಜಾತಭಾ
ಸ್ಕರ ಕೃಪಾಪೂರ್ಣಕ್ಷಣಂದೊಳ್ಪ್ರಸನ್ನದ ಭಕ್ತರ ಸಲಿಯುತಿರ್ದಲ್ಲಿ |

ಇಂತುಬಿ ನಿವನೊತ್ತಿತ್ರ್ಯಮಂ ಮಾಡಿ ವರಭಕ್ತ |
ನಂತತಿಯ ಮಿಗೆ ನೋಡಿ ಮನದಣಿ ಹರಂ ಪಾಡಿ
ನಂತಸದೊಳ್ ಕೂಡಿ ತಪವಿರ್ದ ದಾನಕರಿಗಂ ನೀಡಿ ಪುಳಕವಾದಿ |

ಮುಂತೈತರಲ್ ಮೊಱೆವ ಕಂತುಹರಮುಡಿಯೊಳಾಲ |
ತಾಂತವಂತಿಪ ಘನಭ್ರಾಂತಿಯುಂ ತವಿಸುವ ಗು |
ಣಂ ತೀವಿಮಲವರ್ಣಿಸು ಚಿಂತಾಮಣಿಯುಮೆನಿಸ ಭಾಗೀರಥಿಯ ಕಂಡೆಸು ||
ಜಡೆಮುಡಿಯೊಳೆನ್ನ ಮಗನುಡಿಯುಂ ಪಲಕಾಲ |
ಮಡಗಿಕೊಂಡಿರಲೆನ್ನ ಸಂಸಾರ ಮುನ್ನೇರೊ |
ಳೊಡಗೂಡಿ ಕ್ರೋಧದಿಂದೆಂದ ದಯವಿಂದವರನನ್ನ ಕೈಗೂಡಿಸೆಂದು ||
ಅಡಿಗಳೊಳ್ಬೈಸಿ ಬಿನ್ನೈಪ ಪಾರ್ವತಿದೆಸಲ್ |
ಕಡುರವ್ಯವಸಾಯ ಸುರನದಿ ಪಿಪ್ಪನಾಥನಿಪ
ರೆಡೆಯುಲ್ಲಿ ಪಿಂದರಸು ಚಂದ್ರಧರದಿಂ ನದಾಗ್ದ ಸೆಂಪಿನಿಂ ಗುಣ್ಣನಿಂದ ||೨೩||
ವರಚಿತ್ರಕಾಶಪ್ರಭಾಪೂರದೊಳ್ ರಜತ |
ಗಿರಿ ತ್ರಿಪುರದಹನ ನೆಕೆಯಿಂ ಕರಗಿ ದನಿದಾಗಿ |
ಪರಿದುದೋ ಮುಕ್ತಿಸಾರಂ ಪೊಸಬೆಳ್ದಿಂಗಳಾದುದೋ ಪುಣ್ಯಪ್ರಭಾವದೊಲ್ದು ||
ತೊಱೆದುದೋ ಸತ್ವಗುಣಮುಂ ಪ್ರವಾಹಮಾದುದಾಗಿ
ಮೆಱೆದುದೋ ಶಿವಾಂಗರುಚಿ ನದಿಯಂಗವೆತ್ತಿರೆನೆ |
ಸುರಗಂಗೆ ಕಣ್ಗೆ ಸೊಂಗಸವಾಗಿ ತೋರ್ದುದಾ ಕಾಶೀಪುರಾಗ್ರದಲ್ಲಿ ||೨೪||
ಅರಸುದೊರೆಪಡೆದಂತೆ ಸುರಭಿಪ್ರಭೋಭಿತಂ
ಪಱೆದುಕುಲದಂತುಱೆ ದ್ವಿರೇಫಾನ್ವಿತಂ ವಿವಾ
ಕರನಂತಿಮುಕರಾಸ್ಪದ ಸುಧಟನಂತೆ ಪ್ರೋಜ್ವಲಾ ಜಾತರತರವಾರಿಯುಕ್ತಂ ||
ಉರುಸುಜನನಂತೆ ಲಲಿತಾಪತ್ರದಿಂ ತುಳಿಪ
ಗಿರಿಯಂತೆ ಭಾಸುರತಪಾರರಂಜಿತ ಸದಾ
ಧರೆಯಂತೆ ಜಪಳಾತಕಬಂಧದುಯುಗಂ ನುರನದಿ ಕಣ್ಗೆ ಸೊಗಸಾದುದು ||
ಅತಿಘಂಗಮುತವನದ ಪ್ರತ್ಯಂಗವರ್ಣದೊಳ್
ಭಿತವನವ ವಿಷಧರತವನವಭಿಕಕುಲಗೋತ್ರ |
ತತಿಯ ಭೇದಿಸ ಕುಟಿಲವಾಗಾನುಗತವಾದಳೆಂದು ಜನ ನಿಂದಿಸದೊಲು ||
ರತಪವಿತ್ರಕ್ಷೇತ್ರಕಾಶೀನಿವಾಸ ಸ
ದ್ವ್ರತವನಾಚರಿಸಿ ನಿರ್ಮಲತಪತ್ತಂತೆ ವಿ
ಶ್ರುತದಿ ಮೆಱೆವಳ್ ಗಂಗೆ ವಿಶ್ವೇಶನನ್ನಿಧಿಯ ಪುಣ್ಯತವೆ ನದಿಯಾದೊಲು ||

ತನ್ನೊಳವಗಾಹನಂಗೆಯ್ದು ರವಸಾನದೊಳ್ |
ಸನ್ನಿಹಿತವಿಂಪವರ ಮಸ್ತಕಾಗ್ರದೊಳಿಪ್ಪ |
ತಾನ್ನೆಲಸಿ ತೋರ್ಪ ಮಹಿಮೆಯೊಂತ್ಕ್ಷೇತ್ರದೊಳ್ ಪಾಪ್ಮಿದು ನಿರ್ಮಲಜಲ
ಸನ್ನುತಸ್ನಾನಮಂ ಗೈದು ಶಿವಪೂಜೆಯಂ ಮ [ದೊಳು]
ಹೋನ್ನತಿಯೊಳೆಸೆವ ಶಿವಭಕ್ತಸಂದೋಹವನು
ಮನ್ನಿಸುವ ಶಿವಕಥಾಶ್ರವಣಾನುರಕ್ತಿಯಿಂ ಕೇಳುವನನಂ ಕಳೆವನು ||೧೮||
ಇಂತು ಕಾಶೀಕ್ಷೇತ್ರಪ್ರಸ್ತುತಪ್ರಖ್ಯಾತಿಯು
ದಿಂ ತೊಳಗುತಿರೆ ಪಶ್ಚಿಮಾಂಬುಧಿತೀರದೊಳು
ರಂತೆ ಪ್ರತಿಬಿಂಬಿಸಲ್ ತದ್ಗೋಕರ್ಣಕ್ಷೇತ್ರಪ್ರಕಾಶದಿಂದ
ಮುಂತೆ ಶರಧಿಯಲಾಗಿ ತಾಂ ತ್ರಿಕೂಟಾಚಲದ
ಸಂತದೊಳ್ ತಾಪ್ತ ಸಂದ್ರುಮಸ್ಥಾಣುವಿನ
ಕಂ ತಳೆದು ತಿರದೊಳ್ ಬಿಂಬಿಸಲಾಗಿ ಲಂಕಾಪ್ರದಂ ಮೊಳಗಿದುದು ||
ವೊಂಕೆ ಸದ್ವೃತ್ತಪ್ರಖ್ಯಾತಿಯನಾಂತಿಹ |
ಶಾಲಮಾಗೊಸ್ತು ಮನವಾಸತಿಂಬಷ್ಟ್ರದಂ
ಕೀಲಾಲನಿಧಿಯೊಳಗೆ ಮಹಾಪ್ರಭಾವ ಪ್ರತಿಫಲಿತ ಶಾತವರ್ಣ ದಾಂತಿತಮಾದ ||
ಸಾಲದಿಂ ಸಾಲಂಗಳಾದ ಮಹಾಮರತ್ನ
ಕೀಲಣದ ತನಿಯ ಶೆಕ್ಕಗಳಿಂದ ಲಂಕಾಪು
ಹಾಲಸತ್ತ್ವದವರ ಪಿರಾಜಿಪ್ಪವರ ಬೆಳ್ಳು ಬೆಳೆದು ಬಿಟ್ಟಿ ಸುವರೊಳದೇ ||೧೯||
ವಿಬುಧ ಮಣಿಕೋಟಿಯುಟ್ಟು ಲಕ್ಷಂ ದಶಕೋಟಿ |
ವರಶಿವಾಲಯಗಳಿಂ ನಾಲ್ಕು ಲಕ್ಷಂ ಪಕ್ವ |
ತರಣಿಬಿಂಬಪ್ರತಿಮ ಚತುರ್ಗೋಪುರಂಗಳನಂ ಪಡೆದ್ದು ಬಿಳ್ದ ||
ವರಮಂದಿರಂ ನಾಲ್ಕು ಲಕ್ಷ ಲಕ್ಷಿಸೆ ಮಿಕ್ಕ
ವರ ನೆರೆವ ಗುಡಿಗಟ್ಟಿ ಗಳಿಸುವರಮಾರೆನಲ್
ಮೊಳೆಮುದಾವಹಮುಂದಸ್ಥ ಮಹಾಕ್ಷರಿಗೆಮಾದ ಲಂಕಾನಗರವು ||೨೦||
ಧರಣಿಜೆಯ ಸಂಗಡಿಟ್ಟ ಶೋಕವನಪರಮುನಿಯು |
ವರಕುಂಭಕರ್ಣನ ಮಹೋನ್ನತಿಯು ಮೊದಲಿರಪ |
ಸುರವಿರೋಧಿ ದಶಾಸ್ಯನರಮನೆ ಮಹಾವಾಕ್ಷ ಸಪ್ರಕರವಾಲಯಗಳ ||

ಪರಿರಚಿತರತ್ನಪ್ರರೋಹದಿಂ ಧರೆಯೊಳಂ
ಬಿರುಪಸುರಮಂಡಲವ ತಂವಿಸಿದಂತೆ ಸ್ವ :
ರ್ಗವುವತಿಚೆಲ್ವು ಲಂಕಾಪುರದ ಏಸ್ಕರದ ಬಗೆಯು ಬಣ್ಣಿಸುವ್ರೊಡಳವೆ ॥ ೨೧ ॥
ಸುರಪತಿ ಪುರಾಗ್ರಸರ್ಗ್ಯವು ತನ್ನ ಕೆಯಿರ್ದ
ವರಚತುರ್ವರ್ಣಸುಪಾತ್ರಂಗಳಿಂ ಪುಷ್ಪಿ :
ಮಣಿಜೆದಿಂ ಕೊಂಡುಬಂದು ಕಡುದಾರ್ವಿಗೆ ನೊಂದು ವರಕಂಧರಂಗೆ ॥
ವೆರಸಿಯಿತಲ್ ಬಂದು ಬಲದಂಬರ್ದ ಸಾಗರಂ
ಪರಕೆಗೊಂಡಂತೆ ಕನ್ನಡಿಸುತ್ತುಂ ನೊಸ್ವ್ವ
ಚ್ಚರಿಯಾಗಿ ಲಂಕೆ ಬಪುಜನಸುಖದ ದಂಕೆ ಸುತ್ತುವರಿಗೆ ಸಿಸ್ತಂಕೆಯು ॥ ೨೨ ॥
ರಾವಣನ ಧಾಷ್ಟ್ರ್ಯದಿಂದ ನವಗ್ರಹಂಗಳಿಂ
ಲ್ಲಾವಗಂ ಧರಿಸುವಸನವರತ ದರ್ಪಣ ಏನ
ಲೋಪಿ ತನ್ನಂಕದವರಾತ್ರಸಿಸಿ ತೋರ್ಪಂತೆ ನವರತ್ನವರಪುರದೊಳುಂ ॥
ತೀವಿ ಕನ್ನಡಿಪ್ರನೆಸೆ ಕೆಂಪಿನ ಕರುವಡವ
ಪನ್ನವಗಗ್ರ್ಯದ ರತ್ನಾಂಚಿತಸುವಾಗಿ ರೆಪ
ಭಾವಪದೊಳಿರ್ದಸೆರ್ಪ ತತ್ತ್ರಪಿ ಗಾನಸಮಂತಲವನಂ ಪಡೆಯುಲು ॥ ೨೩
ವರತ್ರಿಕೂಟಾಚಲಾಗ್ರದ ಪುಲಿಪುಧರದವ
ಪರಿವೇಷ್ಟಿಸಿರ್ದ ಧುನೀರಾಪಿಮಂಡಲದ ಕಂ :
ದುರುಘಯುಂಜಿತ್ತನಿಳಿದಂತೆ ಪತ್ರರಾಂಧವಾಂಬುಜದಸ್ರಗಳು ॥
ಚರಿಸರಂಬರಕಘನೊಳಸಲಾ ನಗೋನ್ನತಿಯ
ಮರಸಿರಿದೆಯುಂ ಸರ್ವಧಮನಸಂತಿಂತುಂ
ನೆರೆದು ಬಣ್ಣಿಸಬಲ್ಲರಿಲ್ಲಿಸಲ್ ಕಡುಚೆಲ್ವಿಂಗುವ್ರದ ಭಾಪ್ರಕರ್ ॥ ೨೪ ॥
ಮರಕತದ ಭಿತ್ತಿ ಪದ್ಮಣಿಕದ ಕಂಭಂ ನೀಲ
ದಳಿಯ ಮೇಲ್ಕಟ್ಟನಕೆ ಪವಳದ ಲೋವೆ ಪಳಿಕಿನಿಂ
ಮಣಿ ಸವೆದ ನೆಲಗಟ್ಟುಪ್ಪರಿಗೆಯೊಳ್ ಚರಿಸ ಕಾಂತೆಯರ್ ಮಿಗೆ ಸಲಿಸಿವ ॥
ಎರಲೆಯುಗಿವಕ್ತ್ರನವಿಲಂಚೆ ಪಿಕವೇಳೆಯ ಪು :
ಲ್ಲರುಣೋದಯಂ ಮೇಘ ಪಾಲ್ ತಳರಸುತ ನೋಡಿ !
ನೆರೆಕೂಡಿ ಕುಣಿದಾಡಿ ಬಾಯ್ಮೀಡಿ ಪಸಿವಾಡಿ ನಗಿಪುವಾಣೆಕದಲ್ಲಿ ॥ ೨೫ ॥

ಈರಚನೆವೆತ್ತ ಕಾಶೀನಗರದಿಂದ ಲಂ ।
ಕಾರವ್ಯರಾಜ್ಯಮಧ್ಯಪ್ರದೇಶದ ಕೆಲದೊ ।
ಳಾರಾಜಿಸುವುದು ಕಾಂಚೀಪುರಂ ಭೂಪುರಂಧ್ರಿಯ ಮುಖಕಮಲದಂತೆ ॥
ಚಾರುಶೃಂಗಾರರಸಪೂರದಿಂದಧಿಕವಿ ।
ಸ್ತಾರದಿಂ ದೇವತಾಗಾರದಿಂ ಪುಣ್ಯಜನ ।
ವಾರದಿಂದಮಲಗಂಭೀರದಿಂ । ಸಕಲಶುಭಸಾರದಿಂ । ದೆಸೆದಿರ್ದುದು ॥ ೩೬ ॥

ಸಿರಿಗೆ ನೆಲೆಯಾಗಿ ಮಂಗಳಕೆ ಮಂದಿರವಾಗಿ ।
ಪರಮತೋಷಕ್ಕೆ ಪುಟ್ಟಿಲೆಯಾಗಿ ಸೌಭಾಗ್ಯ ।
ಕುರುಭವನವಾಗಿ ಮಿಗೆ ಧರ್ಮಾರ್ಥಕಾಮಮೋಕ್ಷಾಮೃತಂ ಸಂಭವಿಸಿದ ॥
ಶರಸಿಧಿಯುವಾಗಿ ಕಾಮಾಕ್ಷಿಯೆನಿಪ ಶಕ್ತಿಗೆ ।
ಸ್ಥಿರನೆಲೆಯುವಾಗಿ ಬ್ರಾಹ್ಮರಿಗೆ ಬೀಡಿಯುವಾಗಿ ।
ವರದರಾಜಂಗೆ ಸ್ಥಳವಾಗಿ ಮೆರೆಯುತಿಹುದು ಕಾಂಚಿ ಧರೆಗತಿಶಯ ಕಾಂಚಿಯಂತೆ ॥

ಜೀವಿತದ ಪದಂಗಳಿಗೆ ಪದವನಾಗುವ ಬಗೆಸಿ ।
ರೂಪಿಯಾಗಲ್ ವರದರಾಜನೆಂಬಾಪೆಸರು
ನಾಡೆ ವಿಶ್ರುತವಾದುದೆನಲಂಗರಂಗಸ್ಥಭೋಗದಿಂದೊಂದು ಬಿಡದೆ ॥
ಷೋಡಶವಮುಪಚಾರದ ಪೂಜೆಯಿಂದೆ ನಲಿ ।
ದಾಡಿ ಪಾಡುವ ಭಕ್ತಸ್ತೋಮದಿಂ ಬೆಂಬಿಡದ ।
ಗೂಡಿ ಕಣ್ಗೊಳಿಸುತಿರ್ದಂ ಚತುರ್ದಶಭುವನತಾತನಬ್ಜಾತನಯನಾಗಿ ॥ ೩೭ ॥

ರತ್ನಗರ್ಭಾರ್ತಸ್ಕರಪ್ರಮಥಿತಾಸುರನ
ಪತ್ನಮಂಡಲಚಂಡಿತೌಸ್ತ್ರತ್ವವಿಧನ ಸ್ತನ
ಯಿತ್ನುಸನ್ನಿಭಕಾಯ ಜಿತಮಾರ ಸುಪಿಧೇಯ ಶ್ರೀವತ್ಸವರಕೌಸ್ತುಭ ॥
ರತ್ನರಂಜಿತವಕ್ಷ ಪಕ್ಷಿಗಾಸ್ತರಣಪ್ರ ।
ಯತ್ನ ಪೃಥ್ವೀವಸನಕ ಸನಕಾದಿಮೋಕ್ಷಕೃತ ।
ನೂತ್ನಸ್ತವಪ್ರೀತಮೂರ್ತಿ ನೆಲಸಿರ್ದನಾಕಾಂಚೀಪುರಾಂತರದೊಳು ॥ ೩೮ ॥

ದುರ್ಭೇದ್ಯವೇದಾಂತವೇದ್ಯನನುಪಮಪರ ।
ದ್ಗರ್ಭ ಶಾಶ್ವತ ಸರ್ವಗತ ನಿರಾಕರನಾಗ ।
ನಿರ್ಭಿನ್ನ ಶತಕೋಟಿಸೂರ್ಯಾಭ ನಿಲೋರ್ಭ ವರಸುರಗೋಪವಿನುತ ॥

ಅರ್ಘಕಾನಂತಶಯ್ಯಾವಾಮ್ನಾಯಸೂಕ್ತಸಂ |
ವರ್ಧಸ್ತ್ವಾಪೇಕ್ಷ ಮೋಕ್ಷದಾಯಕನುಮನಾ |
ವಿರ್ಘವಿಸಿ ವರವರಾಜಾಖ್ಯದಿಂ ತತ್ಪುರದೊಳಿರ್ಪಂ ಪ್ರೊಡಪಿನಿಂದ || ೪೦ ||

ಘನನೀಲಕಾವರಾಬ್ಜನಾಭ ರವಿಕೋಟ್ಯಾಭ |
ಕನಕರುಚಿರಸುವಾಸ ಸತ್ಕೌಸ್ತುಭೋದ್ಭಾಸ |
ವನುತಸೂಜಾತಪ್ರಮುಖನ ಪಾವನಕಥನ ಭುಜಗೇಂದ್ರಶಯನ ಸತ್ಕಮಲ
ಅನುಪಮಾನತಬೃಂದಮಂದಾರ ಭವದೂರ | [ನಯನ ||
ಮುನಿನತಾಮಲಚಕ್ರಪಾಣಿ ಸರ್ವತ್ರಾಣಿ |
ವಿನುತವೇದನಮರಾಜ ಶ್ರೀಸುದರ್ಶನರಾಜನಿರ್ಪ ಕಾಂಚೀಪುರದೊಳು || ೪೧ ||

ಉರಗೇಂದ್ರತಲ್ಪನುಂ ಕೌಸ್ತುಭಾಕಲ್ಪನುಂ |
ವರಪೀತವಾಸನುಂ ಶ್ರೀವತ್ಸಭಾಸನುಂ |
ಶರವಸಶ್ಯಾಮನುಂ ಭುವನಾಭಿರಾಮನುಂ ಸುಪವಿತ್ರಚಾರಿತ್ರನುಂ ||
ಸರಸಿಜನೇತ್ರನುಂ ವಿಜಿತಾಕ್ಷಪಕ್ಷನುಂ |
ನಿರುತಸರ್ವಾಂಗಲ್ಪನುಂ ದನುಜಸೃಷ್ಟಿಕಲ್ಪನುಂ |
ಶರಣವಿಶ್ರಾಂತನುಂ ಶರಧಿಜಾಕಾಂತನುಂ ಕಾಂಚೀಪುರದೊಳಿರ್ಪನುಂ || ೪೨ ||

ಶರಧಿರಾಜಸ್ಯಕನ್ಯಾಮುಖಾಂಭೋಜಭಾ |
ಸ್ಕರ ಚತುಷ್ಕರರಾಜಿರಾಜಿತ ಮಹಾಸುರೇಶ |
ತ್ಕರಕರುಣ ನಿರ್ಮಲಪ್ರಸನ್ನ ಸನ್ನುತವಿಬುಧವೃಂದ ವೃಂದಾರಕಹಿತ ||
ಕಲಿಬಂಧನವಿನಾಶ ನಾಶರಹಿತಂ ಪುಷ್ಟ |
ಶರಪಿತಂ ಪೀತಾಂಬರಾಲಂಕೃತಂ ವಿಧೃತ |
ವರಕುಂಡಲಂ ಕುಂಡಲಿಶಯನ ಕನಕರಯ್ಯದಿಂದಿರ್ಪನಾಪುರದೊಳು || ೪೩ ||

ವಾರಿದಶ್ಯಾಮಪ್ರಭಾಮಯ ಸುಲಾಲಿತಮ |
ಯೂರಪಿಂಛಾಪುಂಜರಂಜಿತ ಕದಂಬದ್ರ |
ಮಾರಾಜಿತೋದ್ಯ ಮಾಲಾಲಂಕೃತಕಂಧರವರಹಾಸಭಾಸಾನ್ವಿತಂ ||
ಚಾರುಸುಮನೋಗೋಪವೃಂದಪ್ರಚಾರದೆ ಮ |
ಹಾರಚನೆವೆತ್ತು ವೃಂದಾವನಾಂತದೊಳು ಮುದ |
ವೇಳ್ ಮುಂಗಾರ ತೆಳದಿಂ ಕ್ರೀಡಿಸುವ ಕೃಷ್ಣ ನೆಲಸಿರ್ಪನಾಪುರದೊಳು ||

ಶಾಂತಸಸುತಾವ್ರಜಾಧ್ವಾಂತಾಪಹಾರಣ |
ಸ್ವಾಂತ ದಿಕ್ಚಕ್ರವಿಶ್ರಾಂತಯಶ ಮುನಿಸುತ ಲ |
ತಾಂತಶರತಾತ ವೇದಾಂತವೇದ್ಯ ಘನನಿಜವರಾತಕಾನಂತಮಹಿಮ ||
ಕಾಂತೆಯುವರದ ನಾಗಾಂತಕವರೂಢ ಮನ |
ದಂತೀಂದ್ರಬಂಧನಕ್ರಾಂತಪ್ರಶಮನನೆ |
ರಂತೆ ತತ್ಪುರವರದೊಳಂ ತೊಳಗಿದಿದಾಕಾಂತನಾಕ್ರಾಂತವೊಲ್ಪು ||೪೬||
ಪರಮಸೌಖ್ಯಪ್ರಿಯಮುಖಾನಂದಭಾವವು |
ತ್ಕರಶೋಭಕ್ತ್ಯಪಕ್ರಮುಪ್ರಥಮವಿಧವವಿಸಾ |
ತ್ವರಧಾತುಮುಕ್ತರಪಿಲಂಬಿತದಿನೊಲ್ಪು ಸಾಧಾರಣವೆಗಳ್ ಸ್ತುತಿಸುವ ||
ಇರದುಣ್ ವಿರೋಧಿಸ ರಾರಸ್ಪ್ರಸ್ತುತಿಯುವರಾಕ್ಷ |
ಸರಸಗವಿಯೊಳ್ ಪರಾಧಪಿಸಿ ಜಮದುಂದುಭಿಯ |
ನಿಜ ಕ್ರೋಧಿ ತತ್ಪುರದೊಳಿಪ ಮುಸ್ಕೃತಿಪಿತನ ತಿಲಕವ ಕ್ರೋಗಗಳಗಳವೇ |
ಅವನಪಿಯುಂಗುಟದ ಕೊನೆಗೊಗೆದ ಗಂಗೆ ಧುವ |
ನಾವಳಿಯ ಪಾಪಸಂಘ್ಯದ ವಿದಾರಿಸುತ್ತಿಪ್ಪ |
ದಾವನ ಸುನಾಭ್ಯಂಬುಜದಿ ಜನಿಸಿದಾನುತನಿಸಾದು ಸಮಸ್ತಲೋಕಂ |
ಆವನಕ್ಷಿದ್ವಯದೊಳಿದುಗಾಪಗಲಾಣ್ಮರ ಪ್ರ |
ಭಾವಮುಣ್ಮದಾವನರಹಿಯಿಂ ಸಕಲಜಗ |
ಜೀವಲಸುಸ್ಥಿತ್ಯುದ್ಧವಾದುದಾದೇವಾದಿದೇವ ನೆಲಸಿರ್ಪನಲ್ಲಿ ||೪೭||
ಅವನ ಮನಸ್ಸಿಂದೊಗೆದನಂ ಶಿವಮುಖಿಗೆ |
ಪೂವಾದನಾವನ ಮುಖಾಬ್ಜದಿಂದೊಗೆದನವು |
ರಾವಳಿಗೆ ಕರ್ತನಾದನದಾವನಪಿಯಿಂದಲಾದಳ್ ಸಕಲಲೋಕದ ||
ಜೀವಿಗಳ ಜೀವನೋಪಾಯಕಾದವಾದಳೂ |
ಲ್ದಾವನ ಭುಜಂಗಳಿಂದೊಗೆದರ್ ಸಮಸ್ತಧುನ |
ಕಾವಳಿಗಧಿಪರಾದರ್ ವಿಷ್ಣುಮಾಯಾಜಗತ್ತ್ರಿಸಿದ ಮಹಿಮನಿರ್ಪನು ||೪೮||
ಗೋವರ್ಧನನನೆತ್ತಿ ಗೋಕುಲದ, ಮಂದರ |
ಗ್ರಾವಮಂ ತಳೆದವುತ್ಕಂಧರ, ಧನ್ವಸೆಂಬ ತರ |
ಡೇವದಿಂ ಬಿಡದೆ ಚೆಸ್ನಟ್ಟಲಗನಂ ಮುಷಮುದಾಧನನ, ರತ್ನದಿಂದ ||

ಒಪಿರ್ದ ಕಂಭದಿಂದೊಗೆದು ಪ್ರಹ್ಲಾದಕನ |
ಜೀವಮಂ ರಕ್ಷಿಸಿದ ಪಕ್ಷಿಗಮನಂ ರಮಾ |
ದೇವಿಯುರಯುಕ್ಷಕರ್ದಮಮಿಳಿತವಕ್ಷನಾಕಾಂಚೀಪುರದೊಳಿರ್ದನು ||

ಜೊಕ್ಕಳೊಳ್ ಮಗನ ಪೆತ್ತವರುಂಟೆ ತನುರೋಮ |
ದಿಕ್ಕಿಯೊಳನಂತಶತಕೋಟಿಬ್ರಹ್ಮಾಂಡಂಗ |
ಳಕ್ಕಜವೆನಲ್ ತಾಳ್ದರುಂಟೆ ಬಾಯಿಂದಗ್ನಿಪುರುಷನಂ ಪಡೆದರುಂಟೆ ||
ಕಕ್ಕಸದ ಬಿಸದುರಿಯನುಗುಳ್ದ ಪಾವಂ ತಂದು |
ಪಕ್ಕಗೈದವರುಂಟೆ ಯತಿಮಹಾತ್ಮರು ನೆನೆದ |
ರಕ್ಕುದುರ್ಲಭಸುಲಭಮೆಂಬ ಚಿತ್ರಂದೋರ್ಪ ಪರಮಿರ್ಪನಾಪುರದೊಳು ||

ಸಿರಿಗೆ ಶೃಂಗಾರ ಕಾಳೀಯಗೆ ಭಯಮಪಲ್ಲಿ |
ಗುರುಕರುಣ ಬ್ರಹ್ಮಾಂಡವೊಡೆದುದಚ್ಯುತ ಧರೆಯ |
ನೆರಡಡಿಯ ಮಾಡಿದತಿವೀರ ಬಲಿಗಂ ರೌದ್ರ ಭಜಿಪ ಭಕ್ತರ್ಗೆ ಶಾಂತಿ ||
ತಿರುಗಿ ತುಱುಗಾಯ್ದನೀ ಬೀಭತ್ಸುಲೋಕಲಬಂಧ |
ಮಱುಜೆ ಕಡುಹಾಸ್ಯದಿಂ ಸಮರಸಕ್ಕೆಡೆಯಾದ |
ಚರಣಕಮಲಂಗಳೊಪ್ಪಲ್ ವರದರಾಜ ಕಾಂಚೀಪುರದೊಳಿರುತಿರ್ದನು ||

ಪದ್ಮಕೌಮೋದಕೀಶಂಖಚಕ್ರಾಂಕಕರ |
ಪದ್ಮಾಲಯಾವಿರಾಜತ್ಪದನವನಜಾತ |
ಪದ್ಮಸಖ ಕೌಸ್ತುಭದ್ಯುತಿಕಲಿತಸದ್ವಕ್ಷ ಸುಕ್ಷೀರವಾರಾನ್ನಿಧಿ ||
ಸದ್ಮಸತಸೀಪುಷ್ಪರುಚಿರಕಾಯಾಸುರರ |
ಛದ್ಮದಿಂ ಗೆಲ್ದ ಶಾಶ್ವತಸುಖಾಮ್ನಾಯನಾ |
ಪದ್ಮೇಕ್ಷಪಿತ ವರದರಾಜ ರಾಜಧಾನಿಯೊಳು ವಿರಾಜಿಸುತ್ತಿರ್ದನು || ೫೦ ||

ವರನೈಗಮಾಗಮವ ಪಾಲಿಸಿದ ತೇಲಿಸಿದ |
ಧರೆ ಕನಕನೇತ್ರವೆಸರಿನ ಖಳನ ಕೊಂದ ಸು |
ಸ್ಥಿರೆ ನರಪವಳಿದ ಕಳದಾಂಭೋಧಿ ಪಶುಗಳಂ ಕಟ್ಟಿ ಮಿಗಿಲಟ್ಟಿ ಕಾಯ್ದ ||
ಮೆರೆತುರಗಮತಿಶಯದಿ ಕೂರ್ಮಯೆರ್ದಾಚಕ್ರ |
ಧರ ಕಾಂಚಿಯೊಳ್ ವಿರಾಜಿಸಲೊಸಗೆಯಿಂದ ಸಂ |
ದರುಕಸಂಗೆಯ್ದು ತಳವಿರ್ದನೆಂದು ಕೂಷ್ಮಾಂಡಗಣನಾಥಂ ಪೇಳ್ದನು ||೫೧||

ಇಂತು ಹತ್ತನೆಯ ಸಂಧಿ.

## ॥ ಹನ್ನೊಂದನೆಯ ಸಂಧಿ ॥

---

ಸೂಚನೆ :--

ಕೂಷ್ಮಾಂಡಗಣನಾಯಕಂ ವೃಜಿನಪಲ್ಲವ ।
ಗ್ರೀಷ್ಮಸಸ್ಥಿಥ ಸಂವಿಗ್ರಂದೊಳ್ಪು ಪೇಳ್ದನಾ ।
ಕೂಷ್ಮಾಂಡಪರ್ವತದ ಮಹಿಮೆಯುಂ ಕೇಳ್ವವರ ದೋಷ ನಿಶ್ಶೇಷವಹಾಗೆ ॥

ಸುರರಾಜರಾಜ ಮನ್ಮಥಮಥನ ವಿಲಸಿತಾಂ ।
ಬರಕೋಶ ಕೇಶವಾರ್ಚಿತ ಚಿತ್ಸ್ವರೂಪ ಸ ।
ತ್ಕರುಣಾಮಯಸಾಮಯವಿಮುಕ್ತ ಪ್ರಭಾಂಗಾದ್ರಿನಿಲಯ ವಿಲಯನಾಶನ ॥
ಕರಟಿತ್ವಚಸುವಾಸ ವಾಸವಾತ್ಮಜನುತ ।
ಶರ ಶರವಿಜಾತಕಾರಣ ರಣವಿಜಿತಮಹಾ ।
ಸುರ ಸುರತರಂಗಿಣೀಧೃತ ಸೋಮ ಸೋಮಧರ ನಂದೀಶ ಪಾಹಿ ಸತತಂ ॥

ಚಾರುಮುನಿವಾರಪ್ರೋಲ್ಲವಧರಸುವ್ರತ ಮಹಾ ।
ಘೋರಸಂಸಾರಾಂಧಕಾರಮಣಿದೀಪ ವಿ ।
ಸ್ತಾರಭವಘೋರದುಃಖತಾರ ಸತ್ಕಥೆಯನೊರೆಯಂತೆ ಕೂಷ್ಮಾಂಡಗಣಸಂ ॥
ತೋಷದಿ ಶಿವಪಾದಧರೆಯಂ ತಿರುಗಿ ಬರೆ ಕಾಶಿ ।
ರಾರಾಜಿಪಾರುಚಿರಲಂಕೆ ಕಾಂಚಿಗೃಹಂ ।
ಗಾರಸಾರಪ್ರಪೂರಕೆ ಮುದವಳೆದೆನೆಂದಾನಂದದಿಂದೊಳ್ ನುತಿಪನು ॥ ೧ ॥

ಇಂತೆಸೆವ ಕಾಂಚೀಪುರೀಂದ್ರಪ್ರಸಿದ್ಧ ಮಹಾಭಾಗ ।
ದಂತರದೊಳೊಪ್ಪುವುದು ಶ್ರೀಶೈಲಶಿಖರಮದೊ ।
ರಂತೆ ಪೂರ್ವದ್ವಾರ ತ್ರಿಪುರಾಂತಕಂ ಪಶ್ಚಿಮದ್ವಾರ ಬ್ರಹ್ಮೇಶ್ವರಂ ।
ಅಂತಕದಿಶಾದ್ವಾರದ ಜ್ಯೋತಿಸಿದ್ಧವಟ ।
ಕಂ ತೋರುವುತ್ತರದ್ವಾರ ಮಹೇಶ್ವರಮು ।
ದಿಂತು ನಾಲ್ವತ್ತೆಂಟುಗಾವುದದ ಗಣನೆಯಿಂ ಪರ್ವಿ ಪರ್ವತಮೆಸೆದುದು ॥ ೨ ॥

ಶಶಿಕಾಂತಸಿತರೋಚಿವೀಚಿಯಿಂ ತುಹಿನಬಿಂ ।
ದುಸಮೂಹಶೀಕರಗಳಿಂ ದಂಡಜವ್ರಜ ।
ಪ್ರಸವದಿಂ ವಿದ್ರುಮಲತಾಳಿಯಿಂ ಕೃಷ್ಣಾಭಿಶೋಭೆಯಿಂ ಸತತಾಸುರ ।

ವಿಸರಸಂಸೇವ್ಯದಿಂ ಸಚ್ಛವಾಯುಕ್ತದಿಂ |
ವಸುಧೆಗಚ್ಚರಿಯೆನಲ್ ಕ್ಷೀರಾಬ್ಧಿಯಂತೆ ಕ |
ಣ್ಗೆಸೆದುದಾಶ್ರೀಶೈಲ ಸಕಲವಿಭವತ್ವಾಲಯದಿಂದತಿವಿಶಾಲವಾಗಿ ‖ ೪ ‖

ವರವಿಹಾಸ್ಪಥಾಂಚಿತಶೃಂಗದಿಂ ಕೂರ್ಮಸಂ |
ಸ್ಫುರಣದಿಂದಂ ಮಹಾಪಸ್ಕರಪ್ರತಿಮಾಭಾ |
ಸುರರತ್ನಮಯದಿಂ ಮೃಗೇಂದ್ರಪ್ರಭಾಸದಿಂದತಿವಿಕ್ರಮವಿರಾಜದಿಂ ‖
ಪರಶುಭದಶೀಲದಿಂದಭಿರಾಮವೃಕ್ಷಪ್ರ
ಕರದಿಂ ಲಸದುದ್ಬುಧರೂಪದಿಂ ಗಂಧರ್ವ |
ಪರಂಜಿತದೆ ಚಕ್ರಿಯುವತಾರನೆಚ್ಚಂಸುತಂ ಪರ್ವತಂ ಮೆಱೆದುದು ‖ ೫ ‖

ಅರುಣಕಾಂತಂಗಳಿಂ ತುಹಿನಾಂಶುಶೋಭೆಯಿಂ
ದುರುಭೂಜಸಿಕರದಿಂ ವಿಬುಧಪ್ರಚಾರದಿಂ |
ವಿಹುಪ ಚಿತ್ರಸೀತಂಣಿಜಾಳಿಯಿಂ ಭ್ರಮರಕವಿರಾಜದಿಂ ಮಂದಗತಿಯಿಂ |
ವರಪಾರಿಪಾಯುನಗಳಿಂ ತಪೋಧನತ
ಷ್ಪರಗಳಿಂ ಫಣಿಗಣಗಳಿಂ ಗ್ರಪಾತ್ಮಕವಾಗಿ |
ಮೆಱೆದುದಾಶ್ರೀಶೈಲ ಸತ್ಪುಶೋಭ್ಯಯಗಳಿಂ ಸರಿಗೊಳದ ಸಡಗರದೊಳಂ |

ಶಾಲಿಜಾತಕಪದ್ಮಮಕರಂದಮಯ್ದೆಗೊಂ
ಪಾಲಿಶಗವಲ ... ಮದಾಂಗನಾರಭಿಸೇನ
ವ್ಯಾಲುಚಲಲೋಚನಸಸ್ಲವಸೌರವತ್ಸೌತದಲ್ಪಕಕಲಾಪಿತಟಿಕ |
ಲೋಲಕತಪತ್ರಿಗರ್ಪರಕಪ್ರೊಲ್ಲಸೀಕರಜ |
ಚೂಲಿಕವಿಪಾಣಿವನಭೂರುಪವರಾರೆರೋಪ
ಕೋಲಮಧುವಿಸ್ಥಂಧಮುಂರಪಿಪಾಯುನಗಳಿಂ ಕವಳೀವನಂ ಮೆಱೆದುದು ‖

ತವೆ ಪಾರಿಜಾತದಿಂ ಸುರಲೋಕದಂತೆ ಜಾಂ |
ಬುವಮುಕ್ತದಿಂದ ಸಾಕೇತದಂತತಿತನೊ |
ದ್ಭವಕಾರಣದೆ ಸಿಹೀಭಿಸಿದಂತ ನಾಗಸಂಕೀರ್ಣದಿಂ ವಿತಳದಂತೆ |
ಸವಸಿಸಿವ ಶೋಭಾಂಜನಪ್ರರಂಜಿತದೆ ಕಂ |
ಜವಿಲೋಚನಪ್ರಕರದಂತವ್ರೊಳ್ ಗಂಧರ್ವ |
ನಿವಹದಿಂ ಧ್ವಜಸಿಯಂತೊಪ್ಪಿದುದು ಕದಳೀವನಮನಪ್ಪುರದ್ರುದಿಂದ ‖ ೭ ‖

ಗಾಲವ ಮತಂಗ ರೋಮಶ ಭರದ್ವಾಜನು |
ದ್ದಾಲಕ ಕಪಿಲ ಕೌಶಿಕ ಶುಕ ಶಾಂಡಿಲ್ಯಮುನಿ
ಜಾಲದಿಂ ನೈಮಿಶಾರಣ್ಯಮಂ ಪೋಲ್ತುದು ಮಹಾಶಿವವೃಷಗೋಷ್ಠಿಯಿಂ ||
ನೀಲಕಂಠಗಣಶರಭಭ್ರಾಜವಗಾಸದಿಂ
ಕೈಲಾಸದಂತೆವೋಲ್ ಕದಳೀವನಂ ಬಯಸಿ |
ಕಾಲದಿಂದೊಪ್ಪಿದುದಮರ್ತ್ಯಮರ್ತ್ಯಪ್ರಕರದಕ್ಷಿಗಾಶ್ಚರ್ಯವಾಗಿ || ೯ ||

ಸುರಕುಜದ ತೋಂಪು ಸುರಧೇನುವಿನ ಬಿಂದು ಸಿ
ದ್ಧರಸ ತಿಂತಿಣಿ ಕೊಂಡೆಗಳ್ವೃತದ ತಟಾಕಗಳ್ |
ಪರುಷವೇದಿಯ ಪಸರ ಚಿಂತಾಮಣಿಯ ಹಸರಮೊಂಟಿರತ್ನಂಗಳ್ ಕಣಿ ||
ಮಿಂಚುವ ಜ್ಯೋತಿರ್ಲತಾತತಿ ಪಾದರಸಕೂಪ |
ಪರಮತೀರ್ಥಪ್ರತತಿ ಪ್ರಾಗ್ಗುಹೆಗಳು ಮತ್ತೆ
ನೋಡೆ ಪಡೆದ ಶುಚಿಯಿದ ಮೆಯ್ಗಳಂದಚ್ಛಂದ್ರ ಕಣ್ಗೆ ಕೌತುಕವನಾದುದು ||

ಮಿಂದೊಡನೆ ಮರ್ತ್ಯಾಮರತ್ವಮಪ್ಪ ಕುಟಿಲ
ಮಂದಿ ಮುಪ್ಪಳಿದು ಪಸ್ಸಿಗರಾಗುವ ಶಿರ
ತಿಂದವರ್ ತರುಣರಪ್ಪರಮರ ತರುಣಿಯರ್ ಪ್ರಸವರಾಗುವ ಫಲಂ |
ತಂದು ಮುಡಿದರದಸ್ಸ್ರಮನಾಗುವ ಕುಸುಮ
ವೃಂದ ತಳರ್ದ ಪಾಸಿ ಮಲಗಿದರ್ ಮಗುಳ್ದ್
ದಂದಮಂ ಪಡೆವ ಪಿಚಿತ್ರಕುಜವಿಪ್ರವಾಶ್ರಿಂ ಕೈಲಪೊಂದಿದಲ್ಲಿ || ೧೧ ||

ಒಂದು ಗವಿಯಂ ಪುಗಲ್ ಕಾಶಿಕ್ಷೇತ್ರದಗ್
ನಂದಮುದನಮದಮ ಪ್ರೋಕ್ಷಮೊಪ್ಪುವ ಮಗುಳ್ದು ಮ |
ತ್ತೊಂದು ಗವಿಯಂ ಪುಗಲ್ ಸಪ್ತಸಾಗರಗಳಿರ್ಪಗಳಂ ಕಾಣ್ಬುದುವವು ||
ಒಂದು ಗವಿಯಂ ಪುಗಲ್ ಚತುರಾಸ್ಯಮುನಿಮುನಿ
ವೃಂದ ತಪಮಂ ಗೆಯ್ಯುತಿಪ್ಪ ದಾಶ್ರಿಂ ಕೈಲ
ದಂದಮಂ ಬಣ್ಣಿಸಲ್ ಬಿಲ್ಲತೇಂತದಮ ಸಾಕಲ್ಯಸಾಂಗಲ್ಯದ || ೧೨ ||

ಗಿರಿಯುಗ್ರ ವನದೊಳಂ ಚರಿಸ ವನಚರಗಳು |
ಪ್ಪರಿಸಿ ಕಲ್ಪಾವಸೀಕ್ಷಾದ ತನಿವಣ್ಗಳಂ
ಸಟಿದು ಮಕ್ಕೋಯ್ದು ಸಮರ್ಪತಿಯೊಳ್ ಸಾಹಿ ರುಚಿಭಾವಿಪ್ರಣ್ಯಂಗನಾ ||

ಪರವಾಟಿಯಂ ಪೊಕ್ಕು ಸತಿಯರಂ ಬೆಜ್ಜರಿಸಿ ।
ನೆರೆ ನಗಿಪುವಾಗೋತ್ರದಾನೆಗಳ್ ಬಿಸಿಲ್ವೆಗೆ ।
ಸುರನದಿಯೊಳಂ ಜಲಕ್ರೀಡೆಗೈದಪ್ರವರ್ಗದ ಸಿಡಿದೆಯಂ ಗಣಿಸಲಳವೇ ॥ ೧೩ ॥
ತರಣಿ ಮೂಡಲ್ ಮೂಡಿಪುಸ್ತಮಯುಕಳಿವ ಜೇ ।
ಪರುಗಳಂ ಪುಷ್ಟಿಯಾದಂದ್ರಾರ್ಕವಿಸರ್ಗನ್ನ ।
ಪರ ಬಾಹ್ವ ಜೀವರಿಂದಾನೆಯೊಡಲಸ್ತುವುಳಿ ಸಿಂಹಾಂಗ ಶರಭವವನ ॥
ಕರಿಪೊಗಂ ಸ್ಯರಿಭಶರೀರವುಂಟಾದವರ್ ।
ತಱಗೆಲೆ ತೃಣಂ ತಳಿರ್ ನೀರುಂಡು ಜೀವಿಸುವ ।
ಪರಿಸರಿಯುವರ್ಗಳಂ ಮೊಱೆವುದಾಸರ್ವತಂ ಪುಣ್ಯಸ್ವಭಾವದಿಂದ ॥ ೧೪ ॥
ಎಸೆವ ತಪ್ಪಿರಿನರದೊಳರ್ದ ತಿಳಿಯುಲ್ಲಮುಂ ।
ಮಿಸುವ ಶಿವಲಿಂಗಸ್ವರೂಪಮುಲ್ಲಿರ್ದ ಪದ ।
ನಸರೆಲ್ಲರುಂ ಪ್ರಮಥರವರೆಂದಲಾಗಿರುಮನೀಱದತಿದೂರದಿಂದ ।
ಬಸೆಮ ಗಿರಿಶಿಖರಮಂ ನೋಡಿ ಪಾಟಸಿದರ್ ।
ಬಸಮಪುದು ಮುಕ್ತಿಸಾಮ್ರಾಜ್ಯಪದವೆಂದು ಶಾ
ಸ್ತ್ರಸಮೂಹವಾವಗಂ ಸಾಪ್ರರ್ಪಿಸಲದಱ ಮಹಿಮೆಯಸ್ಮೃತಿಯು ಸುತಿಪ
ಗಿರಿಯು ತಪ್ಪಲೊಳು ವಾಕ್ಸಿದ್ಧರುಂ ಕಾಯಸಿ । [ದೊಳರೇ ॥ ೧೫ ॥
ದ್ಧರುಮಿರ್ಪರಾಗಿರುಮ ಬಳಸಿ ನೊಳ್ಪ ಪದ ।
ಕ್ಕರುಸಿವಾನಂ ಯೋಜನಾಂತರಕೆ ಸಿದ್ಧರಸಕೂಪಂಗಳಾಶ್ಶೈಲದ ।
ಪರಿವೇಷದವಸಿಯಿರ್ಪ್ಪುದಾವ್ರತದ ವಿ
ಸ್ತರದೊಳಂ ಸ್ವರ್ಣತಾಮ್ರಂ ಸೀಸ ಪಟ್ಟಿಬ
ಜ್ಜರದ ಕಣಿಯಿಂದಲಾಶಿವಪರ್ವತಂ ಕಣ್ಗೆ ಕಮನೀಯಮದಾಗಿರ್ಪುದು ॥ ೧೬ ॥
ಅಂಗಭವಸಂಗಮಂ ಕಂಗಳಿಂಗಳಿಂದ
ಲಿಂಗಿಸಿದನನುಳಿದೊತ್ತಮಾಂಗದ ಜಟಾಪಟಲ ।
ಸಂಗದಿಂ ಪೊಳೆವಾತರಂಗಿಣಿಯೆ ತಾನೆನಲ್ ಸಿಂಗರದೆ ಕಣ್ಗೊಳಿಸುವ ।
ಮಂಗಳಗಭೀರಪ್ರಸಂಗೆಯಿಂ ಸಕಲಗುಣ ।
ತುಂಗೆಯಿಂ ವೃಜಿನಸಂಚಯಭಂಗೆಯಿಂ ಸತ್ಕೃಪಾ ।
ಪಾಂಗೆಯಿಂ ಪಾತಾಳಗಂಗೆಯಿಂ ಮೆಱೆವುದಾ ಶ್ರೀಶೈಲ ಸೊಂಪಿನಿಂದ ॥ ೧೭ ॥

ಆ ಗಿರಿಯ ಮಸ್ತಕದ ಮೇಲೆ ನೆಲಸಿರ್ಪನಾ ।
ಭೋಗಿಭೂಷಣ ಲಸನ್ನಾಗಕವನಾಂಬರ ವ ।
ರಾಗಮಾತೀತ ಭಕ್ತಾಘಾಪಹ ಭವರೋಗವೈದ್ಯಂ ಚಂದ್ರಚೂಡಂ ॥
ಭಾಗೀರಥೀಧರ ಶ್ರೀಗೌರಿಜನಸ್ತ್ರಿ
ಸೌಗಂಧಕೇಳಿ ಮಹಿಮ ಸಾಗರ ಭಸ್ಮಾಂಗ ।
ರಾಗ ಜನಾಗಪ್ರಾಣನಾದ ಮಲ್ಲಿಕಾರ್ಜುನನತಿವಿಲಾಸದಿಂದ ॥ ೧೮ ॥

ಮರಿ ಸರಸಿಜಾಸನಂ ಜೆಸ್ಸು ಬಿಡಿಸುವನ್ನಿತ್ತ
ವರುಣವಾಯು ಕುಬೇರನೀಶಾನ ಮೊದಲಾದ
ಗರುಡ ಹಂಸ ಪ್ರಿಯದ ಮೇಷ ಮಹಿಷ ಬಲಾಯು ನಿಗಳಂಗಳನಪ್ಪವರಿ ।
ಇರದವಿನೋದದಿಂ ಸಮನಾಗ ಬಗೆಯುಬಾರ
ವೆರಸಿ ಪೂಜಿಸಿ ಮನೋಭೀಷ್ಟಂಗಳಂ ಪಡೆದು
ಪರತೋಷದಿಂ ಸ್ತುತಿಸುವರ್ ಭಕ್ತಿಯುಕ್ತಿಯಿಂ ನೇಮದಿಂ ಭಕ್ತಿಯಾಸಕ್ತಿಯಿಂದ ೧೯

ಅಲ್ಲಿ ಮುಕ್ತಿಯ ಮುಕ್ತಿಯನೀವ ಶ್ರೀಶೈಲ
ಮಲ್ಲಿಕಾರ್ಜುನನಾಮದಿಂದಾಸನಾಪಿಸಿ
ಸಲ್ಲಲಿತಲಿಂಗಾತ್ಮಕ ಶಿವೇಶ್ವರನ ಗಿರಿಸುತೆಯನೆಲ್ಲ ಭ್ರಮರಾಂಬಿಕೆಯ
ಸಲ್ಲಕ್ಷಣಂಗಳಿಂ ಮಲ್ಲಿಕಾಕುಂದಮಲ್ಲ
ಪಲ್ಲವೋತ್ಸವಕನಕಂಬಿನ ಬೀಜಕುಲ
ವಲ್ಲಭನ ಮೊಲ್ಲೆಯಿಂ ಕೊಲ್ಲಳ ಭಕ್ತಿಯಿಂ ಭಜಿಸಿ ಸನ್ನುತಿಗೈದರು ।

ಉತ್ಕೃಷ್ಟಶತ್ರುಮಿತ್ರಿಕಾಂತ ಭಕ್ತಜನ
ಪ್ರತ್ಯಕ್ಷಮಲಸತ್ಪ್ರತಿಕಾವಾಸ ಸಾಹಸೋ
ದ್ವೃತ್ತಂತುಭಿತ್ತರಿಪುವಾರ ವಿಧ್ವಂಸತ್ತ ಸಕಸುರೇಶಾಯುತಗಳ್ ।
ಭೃತ್ಯಟಿಕ ಸತ್ತ್ವರ್ತಿ ಭಟತಭುವನಾಳಿ ವಿ
ಮೃತ್ಯೋಪಟಿಸತ್ಪ್ರಾರಂಜಿತಕನಕ ಹಿಮ
ಕೃತ್ಯಸತ್ತ್ವತ್ತಿರಣಭೋಗಿತಕಿರೀಟ ಭಾಸ್ವತ್ಕಾಂಭಕೇಳಿ ಪಾಟಿ ೨೧ ॥

ತಿಗ್ಮ ಹಿಮರುಗ್ಮದುತ್ತ ಬಯಮೂನ ಕರ್ಪೂರತಿ
ಭೃಗ್ಮನೋಭಾಗ್ಮತಿ ಜಿತಪ್ರಪಂಚ ಪ್ರಸನ
ಭುಗ್ಮಳತ ಸ್ರಗ್ಮಂಡಿತಸುವಕ್ಷ ದಕ್ಷವೈರಿಪಕ್ಷ ಯಕ್ಷೇಶಮಿತ್ರ ।

ರುಗ್ಮಕ್ತಿವಾಗ್ಮಲಯ [ಜಸಿತಭ] ಸಿತವರಾಂಗ |
ಪ್ರಾಗ್ಮುಖ್ಯದಿಗ್ಮುದ್ರಿತಚರಿತ್ರ ಶರಣಸ |
ಮ್ಯಗ್ಮಿಹಿರವ್ಯಗ್ಮಂದಿರಾವಾಸ ಗಿರಿಜೇಶ ರಕ್ಷಿಸುವುದೆಂದಿರುವರು ‖ ೨೨ ‖
ಸಪ್ತಸಪ್ತಕವಿಲಸಿತಾಮೃತಮರೀಚಿಯು |
ದ್ವೀಪ್ತಸಪ್ತಾರ್ಚಿ ನೇತ್ರತ್ರಯ ಚರಾಚರ |
ವ್ಯಾಪ್ತ ತೃಪ್ತಸ್ವಾಂತ ಸನ್ಮುನೀಂದ್ರಸ್ತೋತ್ರಸತ್ಪಾತ್ರ ರಜತಗೋತ್ರ ‖
ಸುಪ್ತ ಲಿಪ್ತಕ್ಷಾರ ನಿರ್ಗುಣಾಗಣ್ಯಭವ |
ಲುಪ್ತಗೋಪ್ತಾರ ಗಣವರ್ಯಹರ್ಯಕ್ಷಪರ |
ಮಾಪ್ತ ಪ್ರಾಪ್ತಕ್ಷ್ವೇಡಕಂಠ ಕುಂಠಿತ [ಕಂತುಮದ] ಶರ್ವ ಜಯಯೆಂ
ಗಿರಿಸದ್ಮನಂ ಲೋಕಚಯನೇತ್ರನೇತ್ರನಂ | [ದರು ‖ ೨೩ ‖
ಪರಮಗುಣನಂ ಮಾರುತಾಹಾರಹಾರನಂ |
ಪುರಮಥನನಂ ತ್ರೈಜಗತ್ಕರ್ತೃಕರ್ತನಂ ನಿಷ್ಕಾಮನಂ ಭೀಮನಂ ‖
ಕರುಣಾಪ್ರಪೂರ್ಣನಂ ಧೃತಸೋಮಸೋಮನಂ |
ನಿರುಪಮಿತಚಾರಿತ್ರನಂ ಭಕ್ತಭಕ್ತನಂ |
ಸ್ಮರಭಂಜನಂ ವರದಿಶಾನಾಥನಾಥನಂ ಭಜಿಸಿದರ್ ಭಕ್ತಿಯಿಂದ ‖ ೨೪ ‖
ಈಸೊಬಗಿನಿಂದೆಸೆವ ಶ್ರೀಶೈಲದಿಂ ವಕ್ಷಿ |
ಣಾಶೆಯೊಳ್ ವರಶತಶೃಂಗಪರ್ವತಸನ್ನಿ |
ವೇಶದೊಳ್ ಕುಂಡಲಾದ್ರಿಯ ಸಮೀಪದೊಳು ತಾವಾರಚಿತಕೂಷ್ಮಾಂಡದ‖
ಮೈಸಿರಿಯನಾಂತೇಕಶಿಲೆಯಧಿಕವಿಸ್ಮಯದ |
ಸೂಸುತಿರ್ದಾಮ ವಿಮಲಕೂಷ್ಮಾಂಡಪರ್ವತ ಮ |
ಹಾಶೋಭೆಯಿಂದೆನ್ನ ಕಣ್ಗಳ್ಗೆ ಕೌತುಕವ ಬೀಱುತುಂ ಬಿಂಕದಿಂದ ‖ ೨೫ ‖
ವರಸಹಸ್ರಾಕ್ಷದಿಂ ವಸುಸೇವ್ಯದಿಂದ ನಿ |
ರ್ಜರರಿಂದಲೈಶ್ವರ್ಯದಿಂ ಸುರಂಭಾಭೋಗ |
ಪರದಿಂದಮೃತಯುಕ್ತದಿಂ ಸುರಭಿರಮ್ಯದಿಂ ವೈಜಯಂತೀನಿಲಯದಿಂದ ‖
ಮಿಱುಗುವೈರಾವತಸಮೇತದಿಂ ಶತಮನ್ಯು |
ವಿರವಾಂತು ಕಣ್ಗೆ ಕೌತುಕವನಾದುದಾಮನೋ |
ಹರವಾದ ಗೋತ್ರನೋಳ್ಪರಿಗತಿವಿಚಿತ್ರ ಶರಣಾವಾಸಪಾತ್ರಮಾಗಿ ‖ ೨೬ ‖

ಮಣಿದುದಮರಾಚಲಂ ಬೆಳ್ಪಾಯ್ತು ರಜತಧಾ |
ರಿಣಿಧರಂ ಚಕ್ರವಾಳಂ ಸುರುಳ್ದುದು ನೀರೊ |
ಳೊಣಗಿದುದು ಮೈನಾಕ ಸನ್ನಿವಟ್ಟುದು ಕುಳಿರ್ವೆಟ್ಟು ಚಲಿಸಿತು ಮಂದರಂ||
ಗುಣಿಯೊಳಿಳಿದುದು ವಿಂಧ್ಯಪರ್ವತಂ ತಿಳಿಯೆ ತನ |
ಗಣುಮಾತ್ರ ಕುಂದಿಲ್ಲವೆಂದು ಮೆಯ್ವೆರ್ಚೆ ಮೇ |
ಗಣಿಗೆ ಬಳೆದೆತ್ತನಲ್ಕಾಗಗನಸೀಮೆಯೊಳ್ ಪರ್ವಿ ಪರ್ವತಮೊಸೆದುದು ||೨೮||

ಶರಭನಿರ್ದಳಿತಸಿಂಹಶಿರಸ್ಖಲಿತರವ್ಯ |
ತರರತ್ನಮಾಲಾಮರೀಚಿಯಿಂ ಕುಪಿತಕೇ |
ಸರಿಯುಗ್ರಪವನಶವವಿನಿರ್ಭಿನ್ನಗಂಧೇಭಮಸ್ತಕದಿನಿಳೆಗುದಿರ್ದ ||
ಸ್ಫುರಿತಮುಕ್ತಾಫಲಸುರುಚಿಯಿಂ ಮದಾಂಧಸಿಂ |
ಧುರಕರಸಿಪೀಡಿತೋದ್ಧತಪಂಶಪ್ರವದಿಂ |
ಪರೆದ ಮುತ್ತುಗಳ ಬೆಳ್ಗದಿರಿಂ ಮಾಸೆಟ್ಟು ಕಣ್ಗೆಡ್ತವಾಗಿರ್ಪುದು ||೨೯||

ಕರಿಬೃಂಹಿತೋದ್ರೇಕ ಸೂಕರಘುರುತ್ಕೃತಂ |
ಹರಿಯಕ್ಷಘರ್ಜಿತಂ ವ್ಯಾಘ್ರ ಗರ್ಗರಕೃತಂ |
ಶರಭಭೀಂಕೃತ ಫಣಿಪಪೂತ್ಕೃತಂ ಭಲ್ಲೂಕಭೀತ್ಕೃತಂ ವೃಕಕೂತ್ಕೃತಂ ||
ಉರುಘೂಕಘೂತ್ಕೃತಂ ಶಾಖಾರವಣತ್ಕೃತಂ |
ಉರಿವ ದಾವಾನಲಧಗತ್ಕೃತಂ ವೆರಸಿ ತ |
ದ್ಗಿರಿವರ ಮಹಾಭಯಂಕರವಾಗಿ ತೋರ್ಪುದೀಕ್ಷಿಸೆ ನಿರ್ಜರರ್ಗರಿದೆನೆ ||

ಎಲೆ ನಂದಿರಾಜ ಸದ್ಗುಣಕಲ್ಪಭೂಜ ಕೇ |
ಳೊಲಿದು ತತ್ಕೂಷ್ಮಾಂಡಪರ್ವತದ ಮಹಿಮೆಯಂ |
ಸಲೆ ಪೇೞ್ವೆ ಮೂಡದಿಕ್ಕಿನ ನಿರ್ಜರೋವಕಂ ಕ್ಷೀರನದಿಯೆಂದೆಸಿಸುತೆ ||
ಬಲವಿನಿಂದಂ ಪರಿದು ದಿಕ್ತಟದ ಮನುಜಸಂ |
ಕುಲವ ಪುಣ್ಯೋಪೇತರಂ ಮಾಡುತುಂ ಪೂರ್ವ |
ಜಲಧಿಗಾಮಿನಿಯಾದುದೇಕಮುಖದಿಂದದಱ ಬಗೆಯ ಬಣ್ಣಿಸಲರಿದೆನೆ ||೩೦||

ಜವನ ದೆಸೆಯಲ್ಲಿ ಕನ್ಯಾನಾಮದಿಂದ ಸಂ |
ಭವಿಸಿ ಪೆರ್ದೊಱೆಯಾಗಿ ತನ್ನ ಸೇವಿಸಿದರ್ಗೆ |
ಭವವಿಮೋಚನಮೈದಿಸುತೆ ದಕ್ಷಿಣಾಪಗಾಪತಿಯ ಸಂಗಮವದಾಯ್ತು ||

ತವೆ ಪಾಪಕರ್ಶಿನಿಯೆನಿಪ್ಪಾಭಿಧಾನದಿಂ |
ದವತರಿಸಿ ಪಶ್ಚಿಮಾಂಬುಧಿಯ ಬೆರಸಿತು ವಿಶ್ವ |
ಪವನಗೆಯ್ಯುತ ನದಿ ಪ್ರತೀಚಿದಿಶೆಯೊಳ್ ಜನಿಸಿ ಸಕಲಜನಸನ್ನುತಿಸಲು ||೩೧
ಬಡಗದಿಕ್ಕಿನೊಳುದಿಸಿ ಪರಿವ ಜಲಪೂರಮುಂ |
ಗ್ಗಡದ ಶ್ರಾವಂತಿಯೆಂದೆಂಬ ಪೆಸರಿಂದ ಮುಂ |
ನ್ನಡೆದುತ್ತರಾಭಿಮುಖವಾಗಿ ಪ್ರತ್ಯೇಕಸಾಗರವ ಸಂಯುಕ್ತವಾಗಿ ||
ಕಡುಪೆಂಪುವಡೆದಿರ್ದುದಾರಾಧಿಸಿದರ ಭವ |
ದೆಡರ ಪರಿಹರಿಸಿಯಾಮುಷ್ಮಿಕಮಹಾಸೌಖ್ಯ |
ಮೊಡವೆರಸುತಿರ್ಪುದಾನದೀಚತುಷ್ಟಯಮಧಿಕವಾದ ನಿರ್ಮಲತೆಯಿಂದ ||
ವರತ್ರಿವಿಕ್ರಮನ ನಖ ಸೋಂಕಿ ಬ್ರಹ್ಮಾಂಡಖ |
ರ್ಪರ ರಂಧ್ರವಾಗಿ ಬಹಿರಾವರಣಜಲ ಮೇರು |
ಗಿರಿಯ ಮಸ್ತಕಕಿಳಿದು ನಾಲ್ದೆಸೆಗೆ ನದಿಯಾಗಿ ಪರಿದು ಶರನಿಧಿಯ ಬೆರಸಿ ||
ಮೆಱೆವುದೇನರಿದು ಕೂಷ್ಮಾಂಡಪರ್ವತದ ನಿ |
ರ್ಜರಸಲಿಲದಿಂದೊಗೆದ ನದಿ ನಾಲ್ಕುದೆಸೆಯ ಸಾ |
ಗರವನಸಹಾಯದಿಂ ಕೂಡಿ ಕಂಗೊಳಿಪವಱ ಮಹಿಮೆಯಿನ್ನೇವೇೞ್ವೆನು ||
ಶರಜನ್ಮಲೀಲಾವಸಥವಾಗಿ ಹಿಮಗೋತ್ರ |
ವರತನುಜೆಯಂ ಕೋಸಲೋಪೇತವಾಗಿ ಬಂ |
ಧುರಧರಣಿಜಾತೆಯಂ ನೀರೇರುಹಾವಾಸವಾಗಿ ಮನ್ಮಥಮಾತೆಯಂ ||
ವರರಾಜಹಂಸಗಮನಪ್ರಶೋಭಿತವಾಗಿ |
ಸರಸತಿಯ ಪೋಲುತ್ತ ರಾಜಿಸುತಿರ್ಪುವೈದೆ ವಿ |
ಸ್ತರವಾದ ತನ್ನದಿಚತುಷ್ಟಯ ವಿಶಿಷ್ಟೇಷ್ಟಫಲವ ನೆಱೆವರ್ಗೀಯುತ ||೩೪||.
ಸವಿದೊಡವಗಾಹನಂ ಮಾಡಿದೊಡೆ ನೋಡಿದೊಡೆ |
ತವೆ ಸೋಂಕಿದೊಡೆ ಮಾನವರ ಭವದ ಪಾಶಬಂ |
ಧವನೆ ಪಱಿದೀಡಾಡುವುವು ನಾಲ್ಕುನದಿಗಳುಂ ತಾಂ ಕಡೆಯ ಕಾಲದಲ್ಲಿ ||
ಶಿವನ ಸಾಲೋಕ್ಯ ಸಾಮೀಪ್ಯ ಸಾರೂಪ್ಯಸಂ |
ಭವಿಸಿ ಸಾಮ್ರಾಜ್ಯಪದಮಹುದು ತಪ್ಪಂ ತನ್ನ |
ಗವನದೇವಣ್ಣಿಸುವೆ ತಳ್ತಿಕರದಲ್ಲಿ ಬಹುವಿಧತರುವ್ರಜವೆಸೆವುದು || ೩೫ ||.

ಹಾಲೆ ತಾಳಂ ಕೋಲೆ ದಿಂಡ ದುಂಡಿಗ ಬೋರೆ |
ಜಾಲಿಯಾಲಂ ನೆಲ್ಲಿಬೆಲ್ಲವತ ಬೆಳಲಣಿಲೆ |
ಜೇಲ ಸಾಲರುಟಾಳ ಬೋಳ ನವಿಲಾಡಿಯಿಬ್ಬಿಡಿ ಬಂಗರಳಿಯದಳ ||
ಹೂಲೆ ಹಾಲವಿ ಹುಣಿಸೆ ಹೊನ್ನೆ ಚೆನ್ನಂಗಿ ಕಂ |
ಚಾಲ ಗೋಣ್ಯಾಲವ ಗರಗಿಲೆಲವ ಭೂಧಾರ |
ಹೀಲಿ ನಿಲಿಕುಲಿಚೇಲಿಯುತ್ತಿ ತೊರವುತ್ತಿ ಪೇರಿಪ್ಪೆ ತುಪ್ಪೆಗಳಪೂರ್ವವು ||೩೬||

ವರಯಜ್ಞಶಾಲೆವೋಲ್ ದ್ವಿಜಪಜ್ತಿರಾಜಿತವು |
ಮರವರೇಣ್ಯಸ್ಥಾನದಂತೆ ರಂಭಾಶೋಭಿ |
ಮಿಱುಪ ಪಣ್ಯಾಂಗನಾವಾಟಿಯಂತ್ಯದೆ ಪರಭೃತಮಯಂ ಸೈನ್ಯದಂತೆ ||
ಕರವೀರವರ್ಗಮಯ ರಜತಗಿರಿಯಂತೆ ಭಾ |
ಸುರನೀಲಕಂಠಲೀಲಾಸ್ಪದಂ ನೈಮಿಶವ |
ಯಿರವಿಸಂತತನವರತಸಂ [ಯಮಿ] ಯುತಮದಾಗಿ ನಗರಿರೋವನವೆಸೆದುದು||

ಎಸೆವಾಮಹಾಗಿರಿಯ ಮಸ್ತಕವ ವಿಸ್ತಾರ |
ದೆಸಕವಂ ಕಂಡು ಮನಸಂದು ಸಾನಂದದಿಂ |
ಶಶಿಕಲಾಮೌಳಿಯತಿಲೀಲೆಯಿಂ ಪೂರ್ಣಸಂಪ್ರೀತಿಯಿಂ ಖ್ಯಾತಿವೆತ್ತು ||
ಸಸಿನಲ್ಲಿ ನೆಲೆಗೊಂಡು ನಿಂದ ಶರಣಾಗತ |
ಪ್ರಸರವ ಮನೋಭೀಷ್ಟವಂ ತುಷ್ಟಿಸುವೊಲೀಯು |
ತಸಮಾಕ್ಷನಗಜಾಸಮೇತದಿಂ ಭೂತಲಕಿದೀಗ ಕೈಲಾಸವೆಂದು ||೩೭||

ಚಿತ್ರಚಾರಿತ್ರ ವರಪತ್ರೀಂದ್ರಸತ್ರಶತ |
ಪತ್ರಭವಗೋತ್ರಾರಿತತ್ರಿದಶಚಯಕೃತ |
ಸ್ತೋತ್ರೈಕಪಾತ್ರ ಸುರಶಾತ್ರವಪುರತ್ರಯವಿಜೇತ್ರ ಕೃತಧರ್ಮಯಾತ್ರ||
ಧಾತ್ರೀಧ್ರಪುತ್ರೀಕಳತ್ರ ಮಿತ್ರಾಶ್ವ ಸ |
ಕ್ಷತ್ರೇಶ ಚಿತ್ರಭಾನು ಸುನೇತ್ರ ಧಾವಲ್ಯ |
ಗಾತ್ರ ಚಿತ್ರಾಂಗದಜಿನಾವೃತಂ ನೆಲಸಿರ್ಪನಲ್ಲಿ ಸಂಪ್ರೀತಿಯಿಂದ ||೩೮||

ವಿಶ್ವಂಭರಾಂಬರ ಬೃಹದ್ಭಾನುವಾರಿಸ್ಪೃಷ |
ದಶ್ವಸತ್ರೀಯಯೂಪರೋಚಿ ಯಜಮಾನಪುರಿ |
ದಶ್ವಾಂಗ ಮಂಗಲಾಕುಚಕುಂಕುಮಾಂಕಿತೋರೋಭಾಗ ಭೋಗಿಭೂಷ ||

ವಿಶ್ವಪರಿಪೂರ್ಣ ರತಿರಾಜನಿರ್ದಹನ ಮಹ |
ದೈಶ್ವರ್ಯಭೋಗಪ್ರದಾತ ಮುಕ್ತಾಫಲನಿ |
ಭಶ್ವೇತವರ್ಣವಾಗೆಸೆವ ಕರುಣಾಂಬೋಧಿ ನಂದೀಶ ನೆಲಸಿರ್ಪನು ‖ ೪೦ ‖

— ಇಂತು ಹನ್ನೊಂದನೆಯ ಸಂಧಿ —

## ‖ ಹನ್ನೆರಡನೆಯ ಸಂಧಿ ‖

ಸೂಚನೆ :—

ಏಳ್ಗಿರಿಗಳಿರ್ಪ ತೆಱನವಱ ಮಹಿಮಾತಿಶಯ |
ದೇಳ್ಗೆಯಂ ಕೂಷ್ಮಾಂಡಗಣಪ ಪೇಳ್ದಂ ನಂದಿ |
ಯೊಳ್ಗಿರೀಶನ ಕೂರ್ತು ತಪಮೆಸಗಲೆಂದು ಕೈಲಾಸಮಂ ಪೊಱಮಟ್ಟನು ‖

ಕರಣನಿರ್ಮಲ ಮಲತ್ರಯನಿಧನ ಧನಪಾದಿ |
ವರದಿಶಾಪಾಲಪಾಲಕ ಭಕ್ತಭಕ್ತ ಭಾ |
ಸುರಸುರಾರ್ಚಿತಪಾದಕಮಲ ಕಮಲಾಂಕಾರ್ಧಮೂರ್ಧಾಭಿಷೇಭಿಶೋಭ ‖
ಹರಿಕೋಟಿರುಚಿರಾಂಧಕಾಸುರಾಸುರಬಲೋ |
ದ್ಧುರತಮತಮಾರಿ ಮಾರೀಚಮರ್ದನವರದ |
ವರದಾನಕುಂಭಿಕುಂಭದ್ವಯಚ್ಛಿನ್ನವಿಚ್ಛಿನ್ನ ನಂದೀಶ ಪಾಹಿ ‖ ೧ ‖

ಸುಲಭ ಮುನಿಕುಲಸಾರ್ವಭೌಮಪಾಲಿಸುವುದೆಂ |
ದೊಲಿಮು ಸೂತಂ ಪೇಳ್ದನಿತ್ತ ಕೂಷ್ಮಾಂಡಗಣ |
ತಿಲಕ ತಾತ್ಪರ್ಯದಿಂದಾಶಿಲಾದಜಗೆ ಕೂಷ್ಮಾಂಡಪರ್ವತದ ಪರಿಯ ‖
ತಿಳುಹಿ ತದ್ಗಿರಿಯ ಬಳಸಿದ ವಾಪಿಕೂಪಸಂ |
ಕುಲತಟಾಕಪ್ರಚಯವಿವಿಧತೀರ್ಥಂಗಳಿಹ |
ನೆಲೆಯ ಸದ್ವನಕುಸುಮವಾಟಿಕೆ ಸರೋವರಂಗಳ ಬಗೆಯ ಬಣ್ಣಿಸಿದನು ‖

ವಿಳಸದುಪವನಗಳಿಂ ಕೋಕಿಲಸ್ವನಗಳಿಂ |
ಎಳಗಿಳಿಯ ನುಡಿಗಳಿಂ ಹಂಸೆಗಳ ನಡೆಗಳಿಂ |
ಪಳಮಿಡಿದ ತೆಂಗಿನಿಂ ನಿಮಿರ್ದೆಸೆವ ಕೌಂಗಿನಿಂ ದಾಳಿಂಬದಿಂ ನಿಂಬದಿಂ ||
ಸುಳಿವ ತಂಗಾಳಿಯಿಂದೊಲೆವ ರಸದಾಳಿಯಿಂ |
ಬೆಳೆದ ಸುರಸಾಲದಿಂ ತಳ್ತಿಪ ತಮಾಲದಿಂ |
ತಳೆತ ನಾರಂಗದಿಂ ತೊಳಲುತಿಪ ಭೃಂಗದಿಂ ಗಿರಿತಟಂ ಚೆಲ್ವಾದುದು || ೩ ||
ವರರಾಜಹಂಸದಿಂ ಶಿಖಿಯಿಂ ಪ್ರವಾಳದಿಂ |
ಪರಪುಷ್ಟದಿಂ ಷಟ್ಪದಂಗಳಿಂ ಬಹುಕುಸುಮ |
ಶರದಿಂ ಸುರಂಭಾಸಮೇತದಿಂ ಚಕ್ರಪ್ರಯುಕ್ತದಿಂ ಶೋಭೆದಳೆದು ||
ಇರುಳಂತೆ ಪಗಲಂತೆ ದೆಸೆಯಂತಬುದಿಯಂತೆ |
ಸರಸಪರ್ಣ್ಯಾವಾಟದಂತೆ ಕೃತಿಯಂತೆ ಶಂ |
ಬರಮಥನನಂತೆ ಸುರಪುರದಂತೆ ರಥದಂತೆ ಗಿರಿತಟವನಂ ಮೆಱೆದುದು || ೪ ||
ಫಲಭರದೆ ಕುಸಿವ ತರುವೃಂದದಿಂ ಚೆಂದದಿಂ |
ದಲರಿಡಿದೆಸೆವ ಲತಾನಿಕರದಿಂ ಸುಕರದಿಂ |
ನಲಿದುಲಿವ ಸದ್ರಾಜಶುಕಗಳಿಂ ಪಿಕಗಳಿಂ ನರ್ತಿಪ ನವಿಲ್ಗಳಿಂದ ||
ನಿಲುನಿಲುತ ಸುಳಿವ ತೆಂಗಾಳಿಯಿಂ ಕೇಳಿಯಿಂ |
ಕೆಲೆಯುತಿಪ ಸಾರಸರಥಾಂಗದಿಂ ಭೃಂಗದಿಂ |
ಕಲಿತಕೃತಕಾದ್ರಿಸಂಕುಳಗಳಿಂ ಕೊಳಗಳಿಂದಗವಲಯದುವನಮೆಸೆದುದು || ೫ ||
ಎಸೆವ ನಾರದ ಮಿತ್ರಕೌಮಾರಿಯಾಲಯಂ |
ಮಿಸುಪ ಸಿಂಗರವಟ್ಟುವುಭಯಸ್ಯೈನಿಕವ ಮನ |
ವೊಸೆದರೂಡವನ ಬಗೆಗುರೋಡರಿಯ ನಾಮವೃಕ್ಷಂಗಳಿಂ ರಮ್ಯವಾಗಿ ||
ದೆಸೆವಡೆದುದ್ಯೆದೆ ಸ್ಯೆರಿಸದಂತೆ ಕರೆವಂತೆ |
ಮಸಿಯಂತೆ ಕೊಲ್ವಂತೆ ಕೆಂಡದಂತಾವಗಂ |
ಪೆಸವೆತ್ತಮರಗಳಿಂದೊಪ್ಪಿದುದು ತದ್ಗಿರಿಯ ಚುಂಬಿತಸಿತಂಬದೇಶ || ೬ ||
ಅಲರಿಡಿದ ಗಿಡುಗಳಿಂ ಪನ್ನೀರಮಡುಗಳಿಂ |
ಫಲಯುತವ ಮರಗಳಿಂ ಜೇನಿಡುವ ಜರಿಗಳಿಂ |
ಫಲವಗೆಯ ಮೃಗಗಳಿಂ ಕೆಲೆಯುತಿಪ ಖಗಗಳಿಂ ಗೋವ್ರಜಗಳಿಂ ಗಜಗಳಿಂ||

ಸಲಿದಾಡುವಹಿಂಗಳಿಂ ನಿರ್ಗಮಿತಗುಹೆಗಳಿಂ |
ಚೆಲುವೆತ್ತ ಲತೆಗಳಿಂ................ |
ನೆಲಸಿರ್ದ ಮೆಳೆಗಳಿಂ ಪರಿವೃತಿಪ ಪೊಳೆಗಳಿಂದಾತಪ್ಪಲೊಪ್ಪಿರ್ದುದು || ೭ ||
ಎಸೆವ ಭಕ್ತಿ ಜ್ಞಾನ ವೈರಾಗ್ಯವೊಲ್ದು ತಾ |
ನುಸಿರ್ವಿಡಿದುದೋ ಪುಣ್ಯಪುರುಷಾಕೃತಿಯದಾಯ್ತೊ |
ವೊಸೆವ ಸುತಪಃಪ್ರಭಾವಂ ಮಾನವಾಕಾರವಂ ತಾಳ್ದುದೋ ಮುಕ್ತಿಯೇ ||
ರಸರೂಪಮಾಯ್ತೊ ಬ್ರಹ್ಮಜ್ಞಾನಸುಖಸವಂ |
ಜಸತೆಯವಯುವವನಾಂತುದೊ ಎನಲ್ ಕಣ್ಗೆ ರಾ |
ಜಿಸುವ ಮುನಿವೃಂದವಾನಂದದಿಂ ತದ್ಗಿರಿಯ ತಪ್ಪಲೊಳ್ ತಪಮಿರ್ದುದು ||
ಬಿಡದೆ ನಾಲ್ಗಡೆಯೊಳುರಿವಗ್ನಿಯ ಮಹಾಶಿಖಿಯ |
ನಡುವೆ ಬಲಗಾಲನೆಡದಡಿಯೊಳೊಂದಿಸಿ ಕೂರ್ಪ |
ವಡೆವಸೂಚ್ಯಗ್ರದೊಳ್ನಿಂದು ಸೂರ್ಯಾಭಿಮುಖವಾಗಿ ಮಿಗೆನೆಗಹಿಂತೋರ್ಪ ||
ನಿಡುದೋಳ್ಗಳಿಂ ಮುಗಿದಕರ್ ಜಪಾಕ್ಷರಗಳಿಂ |
ನುಡಿವ ಲಲಿತಾಧರಸ್ಪಂದದಿಂದಸಿತ ಮುನಿ |
ಗಡಣ ತಪವಂಗೆಯ್ಯುತಿರ್ಪುದಾಗಿರಿತಟತಪೋವನದೊಳನುದಿನದೊಳು ||೯||
ಸಂಸಾರ ಭೀಭತ್ಸವೆಂದುಳಿದು ಗುರುಕರುಣ |
ದಿಂ ಸತ್ಕ್ರಿಯಂಬಡೆದುಯಿಂದ್ರಿಯಮಹೋಪದ್ರ |
ವಂ ಶಾಂತಿಗೆಯ್ದು ತನುವೀರ್ಯಮಂ ನಿಗ್ರಹಿಸಿ ಜನಹಾಸ್ಯಕೊಳಗಾಗದೆ ||
ಅಂಶಮಾತ್ರಂ ಭಯಂಗೊಳದದ್ಭುತಾರಣ್ಯ |
ಮಂ ಸಾರ್ದು ರೌದ್ರಪಂಚಾಗ್ನಿಮಧ್ಯದೊಳು ತಪ |
ಮಂ ಸವೆದುಸಿಂಗರದಿಮುಕ್ತಿಯಂಬಯಸ ಮುನಿಗಳ್ನವರಸದೊಲಿರ್ದರು ||
ಬಿಸಗೊರಲನಲ್ಲದೆಲರುಣಿವಚ್ಚನಲ್ಲದೆಳ |
ಸಸಿದಲೆಯನಲ್ಲದಾನೆಯ ಪಚ್ಚಪಸಿದೊವಲ |
ಬಸನಮಂ ಪೊದೆದನಲ್ಲ ಕೆಮೆಯ್ಯ ಪೆಣ್ಗೆತ್ತನಲ್ಲ ಬಿಸಿಗಣ್ಣನಲ್ಲದೆ ||
ಎಸೆವ ಯೆಲುವಮಾಲೆಯಂ ತಳೆದನಲ್ಲೈದೆ ಪೊಂ |
ಬಸಿಱ ತಲೆಯೊಡೆ ಕೆಯ್ಯೊಳಗಾಂತನಲ್ಲದೈ |
ಮುಸುಕದಸಂದದೊಳಿರ್ದ ಛಾತಪೋವನದಬಯಲೊಳುಜತಿಗಳತಿಶಯದೊಳು ||

ಈರಚನೆವೆತ್ತ ಕಾಶೀನಗರದಿಂದ ಲಂ |
ಕಾರಮ್ಯರಾಜ್ಯಮಧ್ಯಪ್ರದೇಶದ ಕೆಲದೊ |
ಳ್ಳಾರಾಜಿಸುವುದು ಕಾಂಚೀಪುರಂ ಭೂಪುರಂದರಿಯ ಮುಖಕಮಲದಂತೆ ||
ಚಾರುಶೃಂಗಾರರಸಪೂರದಿಂದಧಿಕವಿ |
ಸ್ತಾರದಿಂ ದೇವತಾಗಾರದಿಂ ಪುಣ್ಯಜನ |
ವಾರದಿಂದಮಲಗಂಭೀರದಿಂ[ದಖಿಲಸಂಭಾರದಿಂ] ದೆಸೆದಿರ್ದುದು || ೩೬ ||

ಸಿರಿಗೆ ನೆಲೆಯಾಗಿ ಮಂಗಳಕೆ ಮಂದಿರವಾಗಿ |
ಪರಮತೋಷಕ್ಕೆ ಪುಟ್ಟಿಡೆಯಾಗಿ ಸೌಭಾಗ್ಯ |
ಕುರುಭವನವಾಗಿ ಮಿಗೆ ಧರ್ಮಾರ್ಥಕಾಮಮೋಕ್ಷಾಮೃತಂ ಸಂಭವಿಸಿದ||
ಶರನಿಧಿಯದಾಗಿ ಕಾಮಾಕ್ಷಿಯೆನಿಪಾಶಕ್ತಿ |
ಸ್ಥಿರನೆಲೆಯದಾಗಿ ಬ್ರಾಹ್ಮರಿಗೆ ಬಿಡದಿಯುಮಾಗಿ |
ವರದರಾಜಂಗೆ ಸ್ವೈಪಾಗಿ ಮೆಱೆದುದು ಕಾಂಚಿ ಭೂಸತಿಯ ಕಾಂಚಿಯಂತೆ||

ಬೇಡಿದ ವರಂಗಳಂ ವರದನಾಗುವ ಬಗೆ ನಿ |
ರೂಢಿಯಾಗಲ್ ವರದರಾಜನೆಂಬಾಪೆಸರ್ |
ನಾಡೆ ವಿಶ್ರುತಮಾದುದೆನಲಂಗರಂಗವೈಭೋಗದಿಂದೊಂದಿ ಬಿಡದೆ ||
ಷೋಡಶಮಹೋಪಚಾರದ ಪೂಜೆಯಿಂದೆ ನಲಿ |
ದಾಡಿ ಪಾಡುವ ಭಕ್ತವೃಂದದಿಂ ಚಂದದೊಡ |
ಗೂಡಿ ಕಣ್ಗೊಳಿಸುತಿರ್ದಂ ಚತುರ್ದಶಭುವನತಾತನಾಖ್ಯಾತನಾಗಿ || ೩೮ ||

ರತ್ನಗರ್ಭಾತಸ್ಕರಪ್ರಮಥಿತಾಮರಸ |
ಪತ್ನಮಂಡಲಖಂಡಿತೌನ್ನತ್ಯವಿಭವಸ್ಥಾನ |
ಯಿತ್ನುಸನ್ನಿಭಕಾಯ ಜಿತಮಾಯ ಸುವಿಧೇಯ ಶ್ರೀವತ್ಸಕೌಸ್ತುಭಾಶ್ಯ ||
ರತ್ನರಂಜಿತವಕ್ಷ ವಕ್ಷಗಾಸ್ತರಣ ಪ್ರ |
ಯತ್ನಹೃದ್ಭವಜನಕ ಸನಕಾದಿಮೋಕ್ಷಕೃತ |
ನೂತ್ನಸ್ತವಪ್ರಿಯಂ ಮೂರ್ತಿ ನೆಲಸಿರ್ದ ಕಾಂಚೀಪುರಾಂತರದೊಳು ||೩೯||

ದುರ್ಭೇದ್ಯ ವೇದಾಂತವೇದ್ಯನನುಪಮಜಗ |
ದ್ಗರ್ಭ ಶಾಶ್ವತ ಸರ್ವಗತ ನಿಶಾಚರಯಾಗ |
ನಿರ್ಭಿನ್ನಶತಕೋಟಿಸೂರ್ಯಾಭ ನಿಲೋರ್ಭ ವರನಂದಗೋಪಾಲನ ||

ಅರ್ಭಕಾನಂತಶಯ್ಯಾವಾಮ್ನಾಯಸೂಕ್ತಸಂ |
ದರ್ಭಸ್ತವಾಪೇಕ್ಷ ಮೋಕ್ಷದಾಯಕನುಮಾ |
ವಿರ್ಭವಿಸಿ ವರದರಾಜಾಖ್ಯದಿಂ ತತ್ಪುರದೊಳಿರ್ಪಂ ಪ್ರೋತರ್ಪಿಸಿಂದ ||೪೦||

ಘನನಿಭಶ್ಯಾಮಾಬ್ಜನಾಭ ರವಿಕೋಟ್ಯಾಭ |
ಕನಕರುಚಿರಸುವಾಸ ಕೌಸ್ತುಭೋದ್ಭಾಸನು |
ತನುಜಪ್ರಮಥನಪಾವನಕಥನ ಭುಜಗೇಂದ್ರಶಯನ ಸತ್ಕಮಲನಯನ ||
ಅನುಪಮಾನತವೃಂದಮಂದಾರ ಭವದೂರ |
ಮುನಿನತಾಮಲಚಕ್ರಪಾಣಿ ಸರ್ವತ್ರಾಣಿ |
ವಿನುತವೇದಸಮಾಜ ಶ್ರೀಮದ್ವರದರಾಜನಿರ್ಪ ಕಾಂಚೀಪುರದೊಳು ||೪೧||

ಉರಗೇಂದ್ರಕಲ್ಪನುಂ ಕೌಸ್ತುಭಾಕಲ್ಪನುಂ |
ವರಪೀತವಾಸನುಂ ಶ್ರೀವತ್ಸಭಾಸನುಂ |
ಶರದಸಚ್ಛಾಮನುಂ ಭುವನಾಭಿರಾಮನುಂ ಸುಪವಿತ್ರಚಾರಿತ್ರನುಂ ||
ಸರಸಿಜದಳಾಕ್ಷನುಂ ವಿಜಿತಾಕ್ಷಪಕ್ಷನುಂ |
ನಿರುತಮಾಂಗಲ್ಯನುಂ ದನುಜಹೃಚ್ಛಲ್ಯನುಂ |
ಶರಣವಿಶ್ರಾಂತನುಂ ಶರಧಿಜಾಕಾಂತನುಂ ಕಾಂಚೀಪುರದೊಳಿರ್ಪನು ||೪೨||

ಶರಧಿರಾಜನ್ಯ ಕನ್ಯಾಮುಖಾಂಭೋಜಭಾ |
ಸ್ಕರ ಚತುಷ್ಕರರಾಜಿತಂ ಜಿತಮಹಾಸುರೋ |
ತ್ಕರ ಕರಣನಿರ್ಮಲಪ್ರಸನ್ನ ಸನ್ನುತ ವಿಬುಧವೃಂದವೃಂದಾರಕಪ್ರಿಯು ||
ಕರಿಬಂಧನವಿನಾಶ ನಾಶರಹಿತಂ ಪುಷ್ಪ |
ಶರಪಿತಂ ಪೀತಾಂಬರಾಲಂಕೃತಂ ವಿಧೃತ |
ವರಕುಂಡಲಂ ಕುಂಡಲಿಪಶಯ್ಯಕಡುರಯ್ಯದಿಂದಿರ್ಪನಾಪುರದೊಳು ||೩೪||

ವಾರಿದಶ್ಯಾಮಪ್ರಭಾಮಯಸುಲಾಲಿತಮ |
ಯೂರಪಿಂಛಾಪುಂಜರಂಜಿತ ಕದಂಬದ್ರು |
ಮಾರಾಜಿತೋದ್ಗಮಾಲಂಕೃತಲಸತ್ಕುಂದವರಹಾಸಭಾಸಾನ್ವಿತ ||
ಚಾರುಸುಮನೋಗೋಪವೃಂದಪ್ರಚಾರದಿ ಮ |
ಹಾರಚನೆವೆತ್ತು ವೃಂದಾವನಾಂತದೊಳು ಮುದ |
ವೇಱ ಮುಂಗಾರ ತೆಱದಿಂ ಕ್ರೀಡಿಸುವ ಕೃಷ್ಣನೆಲಸಿರ್ಪನಾಪುರದೊಳು ||೪೪||

ಶಂತನುಸುತಾವ್ರಜಧ್ವಾಂತಾರುಣಾಮಲ |
ಸ್ವಾಂತದಿಕ್ಚಕ್ರವಿಶ್ರಾಂತಯಶ ಮುನಿನುತಲ ||
ತಾಂತಶರತಾತ ವೇದಾಂತವೇದ್ಯಾಘನಿಚಯಯಾತಕಾನಂತಮಹಿಮ ||
ಕೌಂತೇಯವರದ ನಾಗಾಂತಕವರೂಥಮದ |
ದಂತೀಂದ್ರಬಂಧನಕ್ರಾಂತಪ್ರಶಮನನೋ |
ರಂತೆ ತತ್ಪುರವರದೊಳಂ ತೊಳಪನಿಂದಿರಾಕಾಂತನಶ್ರಾಂತಮೊಲ್ದು || ೪೫ ||

ಪರಮಸೌಮ್ಯಶ್ರೀಮುಖಾನಂದಭಾವಮು |
ತ್ಕರಶೋಭಕೃದ್ವಿಕ್ರಮಪ್ರಭವವಿಭವಮೀ |
ಶ್ವರಧಾತುಮುಖ್ಯರವಿಲಂಬಿತದೊಳೊಲ್ದುಸಾಧಾರಣವೊಳಂ ನುತಿಸಲು ||
ಇರದುೞಿ ವಿರೋಧಿಪ ಖರಪ್ರಭೃತಿಯುವಾಕ್ಷ |
ಸರನಳವಿಯೊಳ್ ಪರಾಭವಿಸಿ ಜಯದುಂದುಭಿಯ |
ನೆರೆಪೊಮ್ಮಿ ತತ್ಪುರದೊಳಿಪ ಮನ್ಮಥನ ಪಿತನ ಕೀಲಕವ ಪೊಗಳಲಳವೆ ||

ಆವನಡಿಯುಂಗುಟದ ಕೊನೆಗೊಗೆದ ಗಂಗೆ ಭುವ |
ನಾವಳಿಯ ಪಾವನಂಗೈದುದು ವಿಚಾರಿಸುವೊ |
ಡಾವನ ಸುನಾಭ್ಯಂಬುಜದಿ ಜನಿಸಿದಾಸುತನೊಳಾಮದು ಸಮಸ್ತಲೋಕಂ ||
ಆವನಕ್ಷಿದ್ವಯದೊಳಿರುಳುವಗಲಾಣ್ಮರ ಪ್ರ |
ಭಾವಮುಣ್ಮಿದುದಾವನರಸಿಯಿಂ ಸಕಲಜಗ |
ತೀವಲಯಕೈಶ್ವರ್ಯಮಾದುದಾದೇವಾದಿದೇವ ನೆಲಸಿರ್ಪನಲ್ಲಿ || ೪೬ ||

ಆವನ ಮನಸ್ಸಿನಿಂವೊಗೆದವಂ ಶಿವ ಮುಡಿಗೆ |
ಪೂವಾದನಾವನ ಮುಖಾಬ್ಜದಿಂದೊಗೆದನಮ |
ರಾವಳಿಗೆ ಕರ್ತೃವಾದನದಾವನಡಿಯಿಂದಲಾದಳ್ ಸಕಲಲೋಕವ ||
ಜೀವಿಗಳ ಜೀವನೋಪಾಯಕೆಡೆಯಾದಳೊ |
ಲ್ದಾವನ ಭುಜಂಗಳಿಂದೊಗೆದರ್ ಸಮಸ್ತಭುವ |
ನಾವಳಿಗಧೀಶರಾದರ್ ವಿಷ್ಣುಮಯ ಜಗತ್ತೆನಿಸಿದಾಮಹಿಮನಿಹನು || ೪೭ ||

ಗೋವರ್ಧನವನೆತ್ತಿ ಗೋಕುಲವ ಮಂದರ |
ಗ್ರಾವಮಂ ತಳೆದಮತ್ಸರ ಭಸ್ಮನೆಂಬ ಖಳ |
ಹೇವದಿಂ ಬಿಡದೆ ಬೆನ್ನಟ್ಟಲವನಂ ಮುರಿದುಮಾಧವನ ಯತ್ನದಿಂದ ||

ಓವಿದರ್ ಕಂಭದಿಂದೊಗೆದು ಪ್ರಹ್ಲಾದಕನ |
ಜೀವಮಂ ರಕ್ಷಿಸಿದ ಪಕ್ಷಿಗಮನಂ ರಮಾ |
ದೇವಿಯುರುಯುಕ್ಷಕರ್ದಮಮಿಳಿತ ವಕ್ಷನಾ ಕಾಂಚೀಪುರದೊಳಿರ್ಪನು ‖
ಪೊಕ್ಕುಳೊಳ್ ಮಗನ ಪೆತ್ತವರುಂಟೆ ತನುರೋಮ |
ದಿಕ್ಕಯೊಳನಂತಶತಕೋಟಿ ಬ್ರಹ್ಮಾಂಡಂಗ |
ಳಕ್ಕಜಮೆನಲ್ ತಾಳ್ದರುಂಟೆ ಬಾಯಿಂದಗ್ನಿಪುರುಷನಂ ಪಡೆದರುಂಟೆ ‖
ಕಕ್ಕಸದ ಬಿಸದುರಿಯನುಗುಳ್ವಪಾವಂ ತಂದು |
ಪಕ್ಕೆಗೈದವರುಂಟೆ ಯತಿಮಹಾತ್ಮರು ನೆನೆವ |
ರಕ್ಕು ದುರ್ಲಭಸುಲಭನೆಂಬ ಹರಿಯಿರ್ಪನಾ ಕಾಂಚೀಪುರಾಂತರದೊಳು ‖
ಸಿರಿಗೆ ಶೃಂಗಾರ ಕಾಳೀಯಗಭಯಮಹಲ್ಯೆಗುರು |
ಕರುಣ ಬ್ರಹ್ಮಾಂಡವೊಡೆದುದದ್ಭುತ ಧರೆಯು |
ನೆರಡಡಿಯುಮಾಡಿವತಿವೀರ ಬಲಿಗಂ ರೌದ್ರ ಭಜಿಸ ಭಕ್ತಗೆ ಶಾಂತಿ ‖
ತಿರುಗಿ ತುಱುಗಾದುದೇ ಭೀಭತ್ಸಲೂಖಲಬಂಧ |
ದುರುಬೆ ಕಡುಹಾಸ್ಯದಿಂ ನವರಸಕ್ಕೆಡೆಯಾದ |
ಚರಣಕಮಲಂಗಳೊಪ್ಪಲ್ ವರದರಾಜಕಾಂಚೀಪುರದೊಳಿರುತಿರ್ಪನು ‖ ೫೧ ‖
ಪದ್ಮಕೌಮೋದಕೀ ಶಂಖಚಕ್ರಾಂಕಕರ |
ಪದ್ಮಾಲಯಾವಿರಾಜದ್ವದನವನಜಾತ |
ಪದ್ಮಸಖಕೌಸ್ತುಭದ್ಯುತಿಕಲಿತ ಸದ್ವಕ್ಷಸುಕ್ಷೀರವಾರಾನ್ನಿಧಿ ‖
ಸದ್ಮನತಸೀಪುಷ್ಪರುಚಿರ ಕಾಯಾಸುರರ |
ಛದ್ಮದಿಂ ಗೆಲ್ವಶಾಶ್ವತಸುಖಾಮ್ನಾಯನುಂ |
ಪದ್ಮೇಶಪಿತವರದ ನಿಜರಾಜಧಾನಿಯೊಳು ಸಂರಾಜಿಸುತ್ತಿರ್ಪನು ‖ ೫೨ ‖
ವರನೈಗಮಾಗಮವ ಪಾಲಿಸಿದ ತೇಲಿಸಿದ |
ಧರೆ ಕನಕನೇತ್ರವೆಸರ ಖಳನಂ ಕೊಂದ ಸು |
ಸ್ಥಿರೆ ನರಪರಳಲ ಕಳೆದಾಂಬೋಧಿಪಶುಗಳಂ ಕಟ್ಟಿ ವಿಘಿಲಟ್ಟಿಕಾಯ್ದ ‖
ಪುರತುರಗಮತಿಶಯದಿ ತೂರ್ದಯೋದ್ದಾಚಕ್ರ |
ಧರ ಕಾಂಚಿಯೊಳ್ ವಿರಾಜಿಸಲೊಸಗೆಯಿಂದ ಸಂ | [ ಪೇಳ್ದನು ‖ ೫೩ ‖
ದರುಶನಂಗೆಯ್ದು ತಳ್ದಿರ್ದೆನೆಂದು ಕೂಷ್ಮಾಂಡಗಣನಾಥ ಶರಣ ನಂದಿಗೆ

— ೧೦ ನೆಯ ಸಂಧಿ ಸಂಪೂರ್ಣಂ. —

## ॥ ಹನ್ನೊಂದನೆಯ ಸಂಧಿ. ॥

---

ಸೂಚನೆ :—

ಕೂಷ್ಮಾಂಡಗಣನಾಯಕಂ ವೃಜಿನಪಲ್ಲವ ।
ಗ್ರೀಷ್ಮಸನ್ನಿಭ ನಂದಿಗಂದೊಲ್ದು ಪೇಳ್ದನಾ ।
ಕೂಷ್ಮಾಂಡಪರ್ವತದ ಮಹಿಮೆಯಂ ಕೇಳ್ದವರ ದೋಷ ನಿಶ್ಶೇಷವಾಗೆ ॥

ಸುರರಾಜರಾಜ ಮನ್ಮಥಮಥನ ವಿಲಸಿತಾಂ ।
ಬರಕೇಶ ಕೇಶವಾರ್ಚಿತ ಚಿತ್ಸ್ವರೂಪ ಸ ।
ತ್ಕರುಣಾಮಯಾಮಯವಿಮುಕ್ತ ಪ್ರಭಾಂಗಾದ್ರಿನಿಲಯವಿಲಯಾಪಹ ॥
ಕರಟತ್ವಚಸುವಾಸ ವಾಸವಾತ್ಮಜದತ್ತ ।
ಶರಶರವಿಜಾತಕಾರಣ ರಣವಿಜಿತನುಪಾ ।
ಸುರ ಸುರತರಂಗಿಣೀಧೃತಸೋಮಸೋಮಧರ ನಂದೀಶಪಾಹಿಸತತಂ ॥ ೧ ॥

ಚಾರುಮುನಿವಾರವೊಲ್ದವಧರಿಸುವುದು ಮಹಾ ।
ಘೋರಸಂಸಾರಾಂಧಕಾರಮಣಿದೀಪ ಎ ।
ಸ್ತಾರಭವಭೂರುಹಕುಠಾರ ಸತ್ಕಥೆಯನೋರಂತೆ ಕೂಷ್ಮಾಂಡಗಣಪಂ ॥
ತೋಯಮಾಪಾರಧರೆಯಂ ತಿರುಗಿ ಬರೆ ಕಾವಿ ।
ರಾರಾಜಿಪಾರುಚಿರಕಾವಿಲಂಕೆ ಕಾಂಚಿಗಳ್ ತೃಂ ।
ಗಾರಸಾರಪ್ರಪೂರಕೆ ಮುದಂವಳೆದೆನೆಂವಾನಂದಿಯೊಳ್ ನುಡಿವನು ॥ ೨ ॥

ಇಂತೆಸೆವ ಕಾಂಚೀಪುರೀಂದ್ರಪಶ್ಚಿಮಭಾಗ ।
ದಂತರದೊಳೊಪ್ಪುವುದು ಶ್ರೀಶೈಲಶಿಖರಿಯೋ ।
ರಂತೆ ಪೂರ್ವದ್ವಾರ ತ್ರಿಪುರಾಂತಕಂ ಪಶ್ಚಿಮದ್ವಾರ ಬ್ರಹ್ಮೇಶ್ವರಂ ॥
ಅಂತಕದಿಶಾದ್ವಾರಮಾಜ್ಯೋತಿ ಸಿದ್ಧವಟ ।
ಕಂ ತೋರ್ಪ ಉತ್ತರದ್ವಾರಂ ಮಹೇಶ್ವರಮಿ ।
ದಿಂತು ನಾಲ್ವತ್ತೆಂಟುಗಾವುದದ ಗಣನೆಯಿಂ ಪರ್ವ ಪರ್ವತವೆಸೆವುದು ॥ ೩ ॥

ಶಶಿಕಾಂತಸಿತರೋಚಿವೀಚಿಯಿಂ ತುಹಿನರುಚಿ ।
ಬಿಸಮೂಹಶೀಕರಗಳಿಂ ದಂಡಜವ್ರಜ ।
ಪ್ರಸವದಿಂ ವಿದ್ರುಮಲತಾಳಿಯಿಂ ಕೃಷ್ಣಾಭಿಶೋಭೆಯಿಂ ಸತತಾಮರ ॥

ವಿಸರಸಂಸೇವ್ಯದಿಂ ಸಕ್ಷಮಾಯುಕ್ತದಿಂ |
ವಸುಧೆಗಚ್ಚರಿಯೆನಲ್ ಕ್ಷೀರಾಬ್ಧಿಯಂತೆ ಕ |
ಣ್ಗೆಸೆದುದಾಶ್ರೀಶೈಲ ಸಕಲವಿಭವತ್ತಾಲದಿಂದತಿವಿಶಾಲವಾಗಿ ॥ ೪ ॥
ವರವಿಮಾನಪ್ರಥಾಂಚಿತಶೃಂಗದಿಂ ಕೂರ್ಮಸಂ |
ಸ್ಪರುಶದಿಂದಂ ವರಾಹಸ್ಕರಪ್ರತಿಮಭಾ |
ಸುರರತ್ನಮಯದಿಂ ಮೃಗೇಂದ್ರಪ್ರಭಾಸದಿಂದತಿವಿಕ್ರಮವಿರಾಜದಿಂ ॥
ಪರಶುಭದಶೀಲದಿಂದಭಿರಾಮವಿಪ್ರಪ್ರ |
ಕರದಿಂ ಲಸದ್ಬುದ್ಧರೂಪದಿಂ ಗಂಧರ್ವ |
ಪರಿರಂಜಿತದಿ ಚಕ್ರಿಯವತಾರವೆಚ್ಚಱಿಸುತಂ ಪರ್ವತಂ ಮೆಱೆದುದು ॥ ೫ ॥
ಅರುಣಕಾಂತಂಗಳಿಂ ತುಹಿನಾಂಶುಶೋಭೆಯಿಂ |
ಮರುಭೂಜನಿಕರದಿಂ ವಿಬುಧಪ್ರಚಾರದಿಂ |
ಮಿಱುಪಚಿತ್ರಶಿಖಂಡಿಜಾಳಿಯಿಂ ಭ್ರಮರಕವಿರಾಜದಿಂ ಮಂದಗತಿಯಿಂ ॥
ವರಪಾರಿಹಾಯನಗಳಿಂ ತಮೋಭರಿತಗ |
ಹ್ವರಗಳಿಂ ಫಣಿಗಣಗಳಿಂ ಗ್ರಹಾತ್ಮಕವಾಗಿ |
ಮೆಱೆದುದಾಶ್ರೀಶೈಲವುರುಕುಲೋಚ್ಚಯಗಳಿಂ ಸರಿಗೊಳದಸಡಗರದೊಳು॥
ಶಾಲಿಜಾತಕಪದ್ಮಿಮರ್ಕರಮಹಿರ್ಬ್ಯಗೋ |
ಪಾಲಿಕಾಗವಲದುರ್ದಾಂಗಸಾರಭಿಸೇನ |
ವ್ಯಾಲುಚಲಲೋಚನಪಲ್ಲವಘೇರವಶ್ವೇತಶಲ್ಯಕಾಹಿಪಿಚಟಕಾ ॥
ಲೋಲಶತಪತ್ರಿಗಪುರ್ರಕವ್ರೋಲ್ ಗುಣಿಕರಜ |
ಚೂಲಿಕವಿಷಾಣಿ ವನಭೂಷಣವರಾರೋಹ |
ಕೋಲಮಧುಲಿಡ್ಗಂಧಮುಖವಿಹಾಯಸಗಳಿಂ ಕದಳೀವನಂ ಮೆಱೆದುದು ॥೬॥
ಪಾರಿವಾಳ,ಹಂದಿ, ತುಂಬಿ, ಸುಂಡಿಲಿ, ಹದ್ದು.

---

೬ ಕ್ಕೆ. ಟೀಕು :—ಬೆಕ್ಕು. ಆನೆ, ಆಡು, ಆಕಳು, ಗೊರವಂಕ, ಎಮ್ಮೆ, ಎತ್ತು, ಕಸ್ತೂರಿಮೃಗ, ಸಾಳವ, ಹುಲಿ, ಎರಳೆ, ಕೋಡಗ, ನರಸಿಂಹ, ಇಲಿ, ನವಿಲು, ಗುಬ್ಬಿ, ಕುರಿ, ಗಿಣಿ, ಗೂಗೆ, ಬಾವಲು, ಕಾಗೆ, ಕೋಳಿ, ಹಾವು, ಕೋಗಿಲೆ, ಪಾರಿವಾಳ, ಹಂದಿ, ತುಂಬಿ, ಸುಂಡಿಲಿ, ಹದ್ದು—ಎಂದು ಗ್ರಂಥಮಾತೃಕೆಯಲ್ಲಿ ಇದೆ.

ತವೆಪಾರಿಜಾತದಿಂ ಸುರಲೋಕದಂತೆ ಜಾಂ |
ಬವಯುಕ್ತದಿಂದ ಸಾಕೇತದಂತತಿತಮೋ |
ದ್ಭವಕಾರಣದಿ ನಿಶೀಥಿನಿಯಂತೆ ನಾಗಸಂಕೀರ್ಣದಿಂ ವಿತಳದಂತೆ ॥
ಸವನಿಸಿದ ಶೋಣಾಂಜನಪ್ರರಂಜಿತದೆ ಕಂ |
ಜವಿಲೋಚನಪ್ರಕರದಂತೆವೊಲ್ ಗಂಧರ್ವ |
ಸಿವಹದಿಂ ಧ್ವಜಿನಿಯಂತೊಪ್ಪಿದುದು ಕದಳೀವನಾಗಮ್ಯರಮ್ಯದಿಂದ ॥ ೮ ॥
ಗಾಲವ ಮತಂಗ ರೋಮಶ ಭರದ್ವಾಜನು |
ತ್ತಾಲಕ ಕಪಿಲ ಕೌಶಿಕ ಶುಕಶಾಂಡಿಲ್ಯಮುನಿ |
ಜಾಲದಿಂ ನೈಮಿಶಾರಣ್ಯಮಂ ಪೋಲ್ತುದು ಮಹಾಸೇನವೃಷಶೋಭೆಯಿಂ ॥
ನೀಲಕಂಠಗಣಶರಭಭ್ರಾಜಮಾನದಿಂ |
ಕೈಲಾಸದಂತೆವೊಲ್ ಕದಳೀವನಂ ಬಹುವಿ |
ಶಾಲದಿಂದೊಪ್ಪಿದುದಮರ್ತ್ಯಮರ್ತ್ಯಪ್ರಕರದಕ್ಷಿಗಾಶ್ಚರ್ಯಮಾಗೆ ॥ ೯ ॥
ಸುರಕುಜದ ತೋಪು ಸುರಧೇನುವಿನ ಹಿಂಡು ಸಿ |
ದ್ಧರಸ ತೀವಿರ್ದಡೋಣಿಗಳಮೃತದ ತಟಾಕಗಳು |
ಪರುಷವೇದಿಯ ಪಸರ ಚಿಂತಾಮಣಿಯವಿಸರಮೊಂಟುರತ್ನದ ಕಣಿ ॥
ಮಿಱುಪಜ್ಯೋತಿರ್ಲತಾತತಿ ಪಾದರಸಕೂಪ |
ಪರಶುತೀರ್ಥಪ್ರಚಯ ಪುಣ್ಯಗುಹೆಗಳುಮುತ್ತ |
ನೆರೆಪಡೆದ ಪೆರ್ಬಿದಿರಮೆಳೆಗಳಿಂದಚಲೇಂದ್ರ ಕಣ್ಗೆ ಕೌತುಕಮಾದುದು ॥
ಮಿಂದೊಡನಮರ್ತ್ಯರಾಕಾರಮಪ್ಪರ್ ಕುಡಿದ |
ಮಂದಿ ಮುಪ್ಪಳಿದು ಜವ್ವನಿಗರಪ್ಪರ್ ನೀರ |
ತಿಂದವರ್ ತರುಣಿವೇಷದರಹರು ತರುಣಿಯರ್ ಪುರುಷರಾಗುವ ಫಲಂ ॥
ತಂದುಮುಡಿದವರದೃಶ್ಯಮನಾಗಿಸುವ ಕುಸುಮ |
ವೃಂದ ತಳರಂ ಪಾಸಿ ಮಲಗಿದರ್ ಮಗುಳೇಳ |
ದಂದಮಂ ಮಾಡುವ ವಿಚಿತ್ರಕುಜಮಿರ್ಪುವಾಶ್ರೀಶೈಲಶಿಖರಿಯಲ್ಲಿ ॥ ೧೧ ॥

---

೯ ಕ್ಕೆ. ಟೀಕು:—ಲೋಧ್ರ, ಆನೆ, ಹಂದಿ, ಗುಬ್ಬಿ, ಚೇಳು, ಎರಳೆ, ಗುಗ್ಗುಳ, ಗಿಣಿ,ಬೆಲ್ಲವತ್ತ, ಅಗಸೆ, ಈಶ್ವರ, ಪ್ರಮಥರು, ವೀರಭದ್ರ, ಮಯೂರವ್ರಜ, ಶರಭ- ಎಂದು ಗ್ರಥಮಾತೃಕೆಯಲ್ಲಿ ಕೊಟ್ಟದೆ.

ಒಂದು ಗವಿಯುಂ ಪುಗಲ್ ಕಾತಿಕೇತಾರಗಳ |
ಸಂವರ್ಶಸಮುದಹುದು ಪೊಱಮಟ್ಟು ಮಗುಳ್ದು ಮ |
ತ್ತೊಂದು ಗವಿಯುಂ ಧೈರ್ಯದಿಂ ಪುಗಲ್ ಸಪ್ತಪಾತಾಳನಿಳಯಂ ಕಾಣ್ಬುದು||
ಒಂದು ಗವಿಯುಂ ಪುಗಲ್ ಚತುರಾಸ್ಯಮುಖ್ಯಮುನಿ |
ವೃಂದ ತಪಮುಂ ಗೈವುತಿರ್ಪರಾಶ್ರೀಶೈಲ |
ದಂದಮಂ ನೆರೆ ಬಣ್ಣಿಸಲ್ ಬಲ್ಲರಾರವಱ ಸಾಕಲ್ಯವೊಂಗಲ್ಯವ || ೧೨ ||
ಗಿರಿಯುಗ್ರವನದೊಳಂ ಚರಿಪವನಚರಿಗ |
ಳುಪ್ಪರಿಸಿ ಕಲ್ಪಾವನೀರುಹದ ತನಿವಣ್ಗಳಂ |
ಪರಿದು ಮೆಲ್ದುದ್ಯಾನನುರಾವತಿಯೊಳಾಡಾಡಿ ರಂಭಾದಿಪುಣ್ಯಾಂಗನಾ ||
ವರವಾಟಿಯಂ ಪೊಕ್ಕು ಸತಿಯುರಂ ಬೆಜ್ಜರಿಸಿ |
ನೆರೆ ನಗಿಪುವಾಗೋತ್ರದಾನೆಗಳ್ ಬಿಸಿಲಲೆಗೆ |
ಸುರನದಿಯೊಳಂ ಜಲಕ್ರೀಡೆಗೈದಪುವಗನ ಸಿಡಿದೆಯುಂ ಗಣಿಸಲಳವೆ ||೧೩||
ತರಣಿ ಮೂಡಲ್ ಮೂಡಿಯುಸ್ತಮಯಕಳವ ಜೇ |
ವರುಗಳಂ ಪುಟ್ಟಿಯಾಚಂದ್ರಾರ್ಕರಿಪ್ಪನ್ನ |
ಬರ ಬಾಳ್ವಜೀವರಿಂದಾನೆಯೊತಲಶ್ವಮುಖಸಿಂಹಾಂಗಶರಭವದನ ||
ಕರಿವೊಗಂ ಸ್ಯೈರಿಭಶರೀರಮುಂಟಾದವರ್ |
ತಱಗೆಲೆ ತೃಣಂ ತಳಿರ್ ನೀರುಂಡು ಜೀವಿಸುವ |
ಪರಿಪರಿಯುವರ್ಗಳಂ ಮೆಱೆದುದಾಪರ್ವತಂ ಪುಣ್ಯಪ್ರಭಾವದಿಂದ || ೧೪ ||
ಎಸೆವ ತದ್ಗಿರಿವರದೊಳಿರ್ದ ಶಿಲೆಯೆಲ್ಲಮುಂ |
ಮಿಸುಪ ಶಿವಲಿಂಗಸ್ವರೂಪಮಲ್ಲಿರ್ದ ಮಾ |
ನಸರೆಲ್ಲರುಂ ಪ್ರಮಥರದಱಿಂದಲಾಗಿರಿಯುನೇಱುವತಿದೂರದಿಂದ ||
ಒಸೆದು ಗಿರಿಶಿಖರಮಂ ನೋಡಿ ವಂದಿಸಿದರ್ಗೆ |
ಬಸಮುಹುದು ಮುಕ್ತಿಸಾಮ್ರಾಜ್ಯಪದಮೆಂದು ಶಾ |
ಸ್ತ್ರಸಮೂಹಮಾವಗಂಸಾರ್ವವೆನಲದಱಮಹಿಮೋನ್ನತಿಯುನುತಿಪರೊಳರೆ||
ಗಿರಿಯ ತಪ್ಪಲೊಳು ವಾಕ್ಸಿದ್ಧರುಂ ಕಾಯಸಿ |
ದ್ಧರುಮಿರ್ಪರಾಗಿರಿಯ ಬಳಸಿನೊಳ್ ಪದಪದ |
ಕ್ಕುರುನಿದಾನಂಬೋಜನಾಂತರಕೆ ಸಿದ್ಧರಸಕೂಪಂಗಳಾಶೈಲದ ||

ಪರಿವೇಷದವನಿಯಿರ್ಕೈಮಗಾವುದವ ವಿ |
ಸ್ತರದೊಳಂ ಸ್ವರ್ಣ ತಾಮ್ರಂ ಸೀಸ ಪಚ್ಚೆ ಬ |
ಜ್ಜರದ ಕಣಿಯಿಂದಲಾ ಶಿವಪರ್ವತಂ ಕಣ್ಗೆ ಕಮನೀಯಮಾಗಿರ್ದುದು ||
ಅಂಗಭವನಂಗಮಂ ಕಂಗಳಿನ ಯಿಂಗಳದ |
ಲಿಂಗಿಸಿದನಮಲಾಂಗಮಂಗದ ಜಟಾಪಟಲ |
ಸಂಗದಿಂ ಪೊಳೆವಾತರಂಗಿಣಿಯೆ ತಾನೆನಲ್ ಸಿಂಗರದಿ ಕಣ್ಗೊಳಿಸುವ ||
ಮಂಗಳಗಭೀರಗುಣತುಂಗೆಯಿಂ ವ್ಯಜನಚಯ |
ಭಂಗೆಯಿಂ ಸತ್ಕೃಪಾಪಾಂಗೆಯಿಂ ಪಾತಾಳ |
ಗಂಗೆಯಿಂ ಮೆಱೆವುದಾ ಶ್ರೀಶೈಲ[ಪರ್ವತಂ ಸೊಂಪಿನಿಂ]ಸೊಂಪಿನಿಂದ || ೧೭ ||
ಆಗಿರಿಯ ಮಸ್ತಕದ ಮೇಲೆ ನೆಲಸಿರ್ದನಾ |
ಭೋಗಿಭೂಷಣಲಸನ್ನಾಗಚರ್ಮಾಂಬರ ವ |
ರಾಗಮಾತೀತ ಭಕ್ತೌಘಪ್ರಸನ್ನ ಭವರೋಗವೈದ್ಯಂ [ಪಾವನ] ||
ಭಾಗೀರಥೀಧರಂ ಶ್ರೀಗೌರಿಯಾಸ್ಯಾಬ್ಜ |
ಸೌಗಂಧಲೋಲಂ ದಯಾಸಾಗರಾಕ್ಷಾಂಗ |
ರಾಗಯಾಗಪ್ರಣಾಶನನಾವ ಮಲ್ಲಿಕಾರ್ಜುನನತಿವಿಲಾಸದಿಂದ || ೧೮ ||
ಪರಿಸರಸಿಜಾಸನಂ ಜಿಷ್ಣುಶಿಖಿಯಮನೈರೃತ್ಯ |
ವರುಣವಾಯುಕುಬೇರನೀಶಾನಮುಖ್ಯರುಂ |
ಗರುಡಹಂಸದ್ವಿರದ ಮೇಷಮನುಜಲುಲಾಯನೆಗಳೇಣನಶ್ವವೃಷಭ ||
ಇರದಿದಿರ್ವಂದು ಪದಿನಾರ್ವಗೆಗಳುಪಚಾರ |
ವೆರಸಿ ಪೂಜಿಸಿ ಮನೋಭೀಷ್ಟಂಗಳಂ ಪಡೆದು |
ಪರಿತೋಷದಿಂ ತುತಿಸುವರ್ ಭುಕ್ತಿರಕ್ತಿಯಿಂ ವೇದೋಕ್ತಸೂಕ್ತದಿಂದ ||
ಅಲ್ಲಿ ಮುಕ್ತಿಯೆ ಮುದ್ದೆಯಾದಂತೆ ಶ್ರೀಶೈಲ |
ಮಲ್ಲಿಕಾರ್ಜುನನಾಮದಿಂದಾಸದಾಶಿವಂ |
ಸಲ್ಲಲಿತಲಿಂಗಾಕೃತಿಯೊಳಿರ್ದ ಗಿರಿಸುತಾವಲ್ಲಭಾಮಲದುರ್ಲಭಂ ||
ಸಲ್ಲಕ್ಷಣಂಗಳಿಂ ಮಲ್ಲಿಕಾಭಂಗಾಮ್ರ |
ಪಲ್ಲವೋಪಮ ಕಪರ್ದಂವಳೆದ ದೇವಕುಲ |
ವಲ್ಲಭನ ಮೆಲ್ಲಡಿಯ ಕ್ಕೊಲ್ಲಣಿಸ ಭಕ್ತಿಯಿಂ ಭಜಿಸಿ ಸನ್ನುತಿಗೈದನು ||

ಉತ್ಕರ್ಷ ಚಿತ್ಕಾಮಿನೀಕಾಂತ ಭಕ್ತಜನ |
ಹೃತ್ಕಮಲ ಸತ್ಕರ್ಣಿಕಾವಾಸ ಸಾಹಸೋ. |
ದ್ಯತ್ಕಂತುಭಿತ್ಕರಿವಿದಾರವಿಭ್ರತ್ಕನಕರೇತಾಯ ತಾರ್ಕ್ಷ್ಯಗಳ ||
ಭೃತ್ಕಟಕಸತ್ಕೀರ್ತಿಭರಿತ ಭುವನಾಳಿ ವಿ |
ದ್ಯುತ್ಕೋಟಿ ಸತ್ಕಳಾರಂಜಿತ ಕಪರ್ದ ಹಿಮ |
ಕೃತ್ಕನತ್ಸತ್ಕಿರಣಶೋಭಿತಕಿರೀಟ ಭಾಸ್ವತ್ಕಕುಭಚೇಲ ಪಾಹಿ || ೨೧ ||

ತಿಗ್ಮಹಿಮರುಗ್ಮರುತ್ಸಖನಯನ ಕಣ್ವಾತ್ರಿ |
ಭೃಗ್ಮನೋಭಾಗ್ಮೂರ್ತಿ ಜಾತಹೃದ್ಭವಶ್ವಸನ |
ಭುಗ್ಮಿಳಿತ ಸ್ರಗ್ಮಂಡಿತಸುವಕ್ಷದಕ್ಷವೈಪಕ್ಷ ಯಕ್ಷೇಶ ಮಿತ್ರ ||
ಋಗ್ಮುಕ್ತಿವಾಗ್ಮಲಯಜಾತಭಯಯುತವರಾಂಗ |
ಪ್ರಾಗ್ಮುಖ್ಯದಿಗ್ಮುದ್ರಿತಚರಿತ್ರ ಶರಣಸ |
ವ್ಯಗ್ಮಿಳಿತ ದೃಗ್ಮಂದಿರಾವಾಸ ಗಿರಿಜೇಶ ರಕ್ಷಿಸುವುದೆಂದಿರುವರು || ೨೨ ||

ಸಪ್ತಿಸಪ್ತಕವಿಲಸಿತಾಮೃತಮರೀಚಿ ಸ |
ದ್ವೀಪ್ತಸಪ್ತಾರ್ಚಿನೇತ್ರತ್ರಯ ಚರಾಚರ |
ವ್ಯಾಪ್ತ ತೃಪ್ತಸ್ವಾಂತ ಸನ್ಮುನೀಂದ್ರಸ್ತೋತ್ರ ಸತ್ಪಾತ್ರರಜತಗೋತ್ರ ||
ಸುಪ್ತಲಿಪ್ತಾಕ್ಷ ನಿರ್ಗುಣಗಣ್ಯಭವಲುಪ್ತ |
ಗೋಪ್ತಾರ ಗಣವರ್ಯ ಹರ್ಯಕ್ಷಪರವಾಪ್ತ |
ಪ್ರಾಪ್ತಕ್ಷ್ವೇಳಕಂಠ ಕುಂಠಿತಶರ್ವ......ಜಯಯೆಂದನು || ೨೩ ||

ಗಿರಿಸದ್ಮನಂ ಲೋಕಚಯನೇತ್ರನೇತ್ರನಂ |
ಪರಮಗುಣನಂ ಮಾರುತಾಹಾರಹಾರನಂ |
ಪುರಮಥನನಂ ತ್ರೈಜಗತ್ಕರ್ತಕರ್ತನಂ ನಿಷ್ಕಾಮನಂ ಭೀಮನಂ ||
ಕರುಣಾಪ್ರಪೂರ್ಣನಂ ಧೃತಸೋಮಸೋಮನಂ |
ನಿರುಪಮಿತಚಾರಿತ್ರನಂ ಭಕ್ತಭಕ್ತನಂ |
ಸ್ಮರಭಂಜನನ ವರದಿಶಾನಾಥನಾಥನಂ ಭಜಿಸಿದಂ ಭಕ್ತಿಯಿಂದ || ೨೪ ||

ಈ ಸೊಬಗಿನಿಂದೆಸೆವ ಶ್ರೀಶೈಲದಿಂ ದಕ್ಷಿ |
ಣಾಶೆಯೊಳ್ ವರಶತಶೃಂಗಪರ್ವತ ಸನ್ನಿ |
ವೇಶದೊಳ್ ಕುಂಡಲಾದ್ರಿಯ ಸಮೀಪದೊಳು ತಾರಾರಚಿತಕೂಷ್ಮಾಂಡದ ||

ವೈಸಿರಿಯನಾಂತೇಕಶಿಲೆಯಧಿಕವಿಸ್ಮಯವ |
ಸೂಸುತಿರ್ದುದು ವಿಮಲ ಕೂಷ್ಮಾಂಡಪರ್ವತ ಮ |
ಹಾಶೋಭೆಯಿಂದೆನ್ನ ಕಂಗಳಿಗೆ ಕೌತುಕವ ಬೀಱುತುಂ ಬಿಂಕದಿಂದ ‖೨೫‖
ವರಸಹಸ್ರಾಕ್ಷದಿಂ ವಸುಸೇವ್ಯದಿಂದ ನಿ |
ರ್ಜರರಿಂದಮೈಶ್ವರ್ಯದಿಂ ಸುರಂಭಾಭೋಗ |
ಪಠದಿಂದಮೃತಯುಕ್ತದಿಂ ಸುರಭಿರಮ್ಯದಿಂ ವೈಜಯಂತೀನಿಲಯದಿಂ ‖
ಮಿಱುಗುವೈರಾವತಸಮೇತದಿಂ ಶತಮನ್ಯು |
ವಿರಮಾಂತು ಕಣ್ಗೆ ಕೌತುಕಮಾದುದಾಮನೋ |
ಹರವಾದ ಗೋತ್ರದೊಳ್ ಪರಿಗತವಿಚಿತ್ರ ಶರಣಾವಾಸಪಾತ್ರವಾಗಿ ‖೨೬
ಮಣಿಮದಮರಾಚಲಂ ಬೆಳ್ಪಾಯ್ತು ರಜತಧಾ |
ರಿಣಿಧರಂ ಚಕ್ರವಾಳಂ ಸುರುಳ್ದುದು ನೀರೊ |
ಳಣಗಿದುದು ಮೈನಾಕ ಸನ್ನಿವಟ್ಟುದು ಕುಳಿರ್ವೆಟ್ಟು ಚಲಿಸಿತು ಮಂದರಂ ‖
ಗುಣಿಯೊಳಳಿದುದು ವಿಂಧ್ಯಪರ್ವತಂ ತಿಳಿಯೆ ತನ |
ಗಣುಮಾತ್ರ ಕುಂದಿಲ್ಲಮೆಂದು ಮೆಯ್ವೆರ್ಚೆ ಮೇ |
ಗಣೆಗೆ ಬಳೆದೆತ್ತನಲ್ದಸೆ ಗಗನಸಾಲದೊಳ್ ಪರ್ವಿ ಪರ್ವತಮೆಸೆದುದು ‖
ಶರಭನಿರ್ದಳಿತಸಿಂಹಶಿರಸ್ಖಲಿತರಮ್ಯ |
ತರರತ್ನಮಾಲಾಮರೀಚಿಯಿಂ ಕುಪಿತಕೇ |
ಸರಿಯುಗ್ರಪವನಖಪ್ರಚಯನಿರ್ಭಿನ್ನಗಂಧೇಭಮಸ್ತಕದಿಂದುದಿರ್ವ ‖
ಸ್ಫುರಿತಮುಕ್ತಾಫಲ ಸುರುಚಿಯಿಂ ಮದಾಂಧಸಿಂ |
ಧುರಕರನಿಪೀಡಿತೋದ್ಧತ ವಂಶವೃಂದದಿಂ |
ಪರೆದ ಮುತ್ತುಗಳ ಬೆಳ್ಗಮ್ಮದಿಂದಾವೆಟ್ಟು ಕಣ್ಗಿಷ್ಟಮಾಗಿರ್ದುದು ‖೨೮‖
ಕರಿಬೃಂಹಿತೋದ್ರೇಕ ಸೂಕರಘುರುತ್ಕೃತಂ |
ಹರಿಯಕ್ಷಗರ್ಜಿತಂ ವ್ಯಾಘ್ರಘುರ್ಘುರ ಕೃತಂ |
ಶರಭಭೀಂಕೃತ ಫಣಿಪಫೂತ್ಕೃತಂ ಭಲ್ಲೂಕಚೀತ್ಕೃತಂ ವೃಕಕ್ರೂತ್ಕೃತಂ ‖
ಉರುಘೂಕಘೂತ್ಕೃತಂ ಶಾಕ್ವರಕ್ವಣತ್ಕೃತಂ |
ಉರಿವ ದಾವಾನಲಧಗತ್ಕೃತಂ ಬೆರಸಿ ತ |
ದ್ಗಿರಿವರ ಮಹಾಭಯಂಕೃತಮಾಗಿ ತೋರ್ಪುದೀಕ್ಷಿಸೆ ನಿರ್ಜರರ್ಗರಿದೆನೆ ‖

ಎಲೆ ನಂದಿರಾಜ ಸದ್ಗುಣಕಲ್ಪಭೂಜ ಕೇ !
ಳೊಲಿದು ತತ್ಕೂಷ್ಮಾಂಡಪರ್ವತದ ಮಹಿಮೆಯಂ |
ಸಲೆ ಪೇಳ್ವೆ ಮೂಡ ದಿಕ್ಕಿನ ನಿರ್ಝರೋದಕಂ ಕ್ಷೀರನದಿಯೆಂದೆನಿಸುತ ||
ಬಲವಿನಿಂದಂ ಪರಿದು ದಿಕ್ತಟವ ಮನುಜಸಂ |
ಕುಲರ ಪುಣ್ಯೋಪೇತರಂ ಮಾಡುತುಂ ಪೂರ್ವ |
ಜಲಧಿಗಾಮಿನಿಯಾದುದೇಕಮುಖದಿಂದದಱ ಬಗೆಯ ಬಣ್ಣಿಸಲರಿದೆನೆ || ೩೦

ಜವನ ದೆಸೆಯಲ್ಲಿ ಕನ್ಯಾನಾಮದಿಂದ ಸಂ |
ಭವಿಸಿ ಪೆರ್ದೊಱೆಯಾಗಿ ತನ್ನ ಸೇವಿಸಿದರ್ಗೆ |
ಭವವಿಮೋಚನಮೈದಿಸುತ ದಕ್ಷಿಣಾಪಗಾಪತಿಯ ಸಂಗಮವದಾಯ್ತು ||
ತವೆ ಪಾಪಕರ್ಶಿನಿಯೆನಿಪ್ಪಭಿಧಾನದಿಂ |
ರವತರಿಸಿ ಪಶ್ಚಿಮಾಂಬುಧಿಯ ಬೆರಸಿತು ವಿಶ್ವ |
ಪವನಗೈಯುತ. ....ನದಿ ಪ್ರತೀಚಿಯೊಳ್ ಜನಿಸಿ ಜನ ಸನ್ನುತಿಸಲು|| ೩೧ ||

ಬಡಗದಿಕ್ಕಿನೊಳುದಿಸಿ ಪರಿವ ಜಲಪೂರಮು |
ಗ್ಗಡದ ಶ್ರಾವಂತಿಯೆಂದೆಂಬ ಪೆಸರಿಂದ ಮುಂ |
ನಡೆದುತ್ತರಾಭಿಮುಖವಾಗಿ ಪ್ರತ್ಯೇಕ ಸಾಗರವ ಸಂಯುಕ್ತವಾಗಿ ||
ಕಡುಪೊಂಪುವಡೆದಿರ್ದುದಾರಾಧಿಸಿದರ ಭವ |
ದೆಡರ ಪರಿಹರಿಸಿಯಾಮುಷ್ಮಿಕಮಹಾಸೌಖ್ಯ |
ಮೊಡವೆರಸುತಿರ್ಪುದಾನದೀಚತುಷ್ಟಯಮಧಿಕಮಾದ ನಿರ್ಮಲತೆಯಿಂದ ||

ವರತ್ರಿವಿಕ್ರಮನ ನಖ ಸೋಂಕಿ ಬ್ರಹ್ಮಾಂಡಖ |
ರ್ಪರ ರಂಧ್ರವಾಗಿ ಬಹಿರಾವರಣಜಲ ಮೇರು |
ಗಿರಿಯ ಮಸ್ತಕಕಿಳಿದು ನಾಲ್ದೆಸೆಗೆ ನದಿಯಾಗಿ ಪರಿದು ಶರಸಿಧಿಯ ಬೆರಸಿ ||
ಪೊಱೆವುದೇನರಿದು ಕೂಷ್ಮಾಂಡಪರ್ವತದ ಸಿ |
ರ್ಝರಸಲಿಲದಿಂದೊಗೆದ ನದಿ ನಾಲ್ಕುದೆಸೆಯ ಸಾ |
ಗರವನಸಹಾಯದಿಂ ಕೂಡಿ ಕಣ್ಗೊಳಿಪ ವರಮಹಿಮೆಯಿನ್ನೇವೇಳ್ವೆನು ||

ಶರಜನ್ಮಲೀಲಾವಸಥವಾಗಿ ಹಿಮಗೋತ್ರ |
ವರತನುಜೆಯಂತೆ ಸಲಿಲೋಪೇತವಾಗಿ ಬಂ |
ಧುರಧರಣಿಜಾತೆಯಂ ನೀರೇರುಹಾವಾಸವಾಗಿ ಮನ್ಮಥವನಾತೆಯಂ ||

ವರರಾಜಹಂಸಗಮನಪ್ರಶೋಭಿತಮಾಗಿ |
ಸರಸತಿಯ ಪೋಲ್ತು ರಾಜಿಸುತಿರ್ಪುವೈದೆ ವಿ |
ಸ್ತರಮಾದ ತನ್ನದಿಚತುಷ್ಟಯ ವಿಶಿಷ್ಟೇಷ್ಟಫಲವನೀಂದಗರ್ವಮುತೆ ||೨೪||
ಸವಿದೊಡವಗಾಹನಂಮಾಡಿದೊಡೆ ನೋಡಿದೊಡೆ |
ತವೆ ಸೋಂಕಿದೊಡೆ ಮಾನವರ ಭವದ ಪಾಶಬಂ |
ಧವನು ಪಱಿದೀಡಾವುವು ನಾಲ್ಕುನದಿಗಳುಂ ತಾಂ ಕಡೆಯ ಕಾಲದಲ್ಲಿ ||
ಶಿವನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಂ |
ಭವಿಸಿ ಸಾಮ್ರಾಜ್ಯಪದಮಹುದು ತಥ್ಯಂ ತನ್ನ |
ಗಮನದೇಂ ವರ್ಣಿಸುವೆ ತಚ್ಛಿಖರದಲ್ಲಿ ಬಹುವಿಧತರುವ್ರಜಮೆಸೆವುವು ||
ಹಾಲೆ ತಾಲಂಕೋಲೆ ದಿಂಡದುಂಡಿಗ ಬೋರೆ |
ಜಾಲಿಯಾಲಂ ನೆಲ್ಲಿ ಬೆಲ್ಲವತ ಬೆಳಲಣಿಲೆ |
ಬೇಲ ಸಾಲರುಟಾಳ ಬೋಳ ನವಿಲಾಡಿಯಿಬ್ಬಡಿ ಬಂಗರಳಿಯುರಳಿಯು ||
ಹೊಲೆ ಹಾಲವಿ ಹುಣಿಸೆ ಹೊನ್ನೆ ಚನ್ನಂಗಿ ಕಂ |
ಚಾಲ ಗೊಣ್ಯಾಲ ಮಗರಗಿಲೆಲವ ಬೂರಾರಹಿವಿ |
ನೀಲಿ ಕುಲಿಚೇಲಿಯತ್ತಿಯು ತೋರಮತ್ತಿ ಪೇರುಪ್ಪೆತುಪ್ಪೆಗಳಿರ್ಪವು||೨೬||
ವರಯಜ್ಞಶಾಲೆಯೊಲ್ ದ್ವಿಜಪಙ್ತಿರಾಜಿತಂ |
ಸುರವರೇಣ್ಯಸ್ಥಾನಮಂತೆ ರಂಭಾಶೋಭಿ |
ಮಿಱುಪಪಣ್ಯಾಂಗನಾವಾಟಿಯುಂತೈದೆ ಪರಭೃತಮಯಂ ಸೈನ್ಯದಂತೆ ||
ಕರವೀರವರ್ಗಮಯ ರಜತಗಿರಿಯಂತೆ ಭಾ |
ಸುರ ನೀಲಕಂಠಲೀಲಾಸ್ಪದಂ ನೈಮಿಶದ |
ಇರವಿನಂತನವರತ ಸಂಯುತಮದಾಗಿ ಸಗಶಿರೋವನಮೆಸೆದುದು || ೨೭ ||
ಎಸೆವಾಮಹಾಗಿರಿಯ ಮಸ್ತಕದ ವಿಸ್ತಾರ |
ದೆಸಕಮಂ ಕಂಡು ಮನಸಂದು ಸಾನಂದದಿಂ |
ಶಶಿಕಲಾಮೌಳಿಯುತಿಲೀಲೆಯಿಂ ಪೂರ್ಣಸಂಪ್ರೀತಿಯಿಂ ಖ್ಯಾತಿವೆತ್ತು ||
ಸಸಿನಲ್ಲಿ ನೆಲೆಗೊಂಡು ನಿಂದ ಶರಣಾಗತ |
ಪ್ರಸರದ ಮನೋಭೀಷ್ಟಮಂ ತುಷ್ಟಿಸುವೊಲೀವು |
ತಸಮಾಕ್ಷ ನಗಜಾಸಮೇತದಿಂ ಭೂತಳಕಿದೀಗ ಕೈಲಾಸಮೆಂದು || ೨೮ ||

ಚಿತ್ರಚಾರಿತ್ರವರಪತ್ರೀಂದ್ರಪತ್ರ ಶತ |
ಪತ್ರಭವಗೋತ್ರಹಿತ ತ್ರಿದಶಚಯಕೃತ |
ಸ್ತೋತ್ರೈಕಪಾತ್ರ ಸುರಶಾತ್ರವಪುರತ್ರಯ ವಿಜೈತ್ರಕೃತ ಧರ್ಮಯಾತ್ರ ||
ಧಾತ್ರೀಧ್ರಪುತ್ರೀಕಳತ್ರ ಮಿತ್ರಾಬ್ಯನ |
ಕ್ಷತ್ರೀಶ ಚಿತ್ರಭಾನುಸುನೇತ್ರ ಧಾವಳ್ಯ |
ಗಾತ್ರ ಚಿತ್ರಾಂಗಾಜಿನಾವೃತಂ ನೆಲಸಿರ್ಪನಲ್ಲಿ ಸಂಪ್ರೀತಿಯಿಂದ ||೩೯||

ವಿಶ್ವಂಭರಾಂಬರ ಬೃಹದ್ಭಾನು ವಾರಿಪೃಷ |
ದಶ್ವ ಸತ್ಪೀಯೂಷರೋಚಿಯಜಮಾನ ಹರಿ |
ದಶ್ವಾಂಗಮಂಗಲಾಕುಚಕುಂಕುಮಾಂಕಿತೋರೋಭಾಗ ಭೋಗಿಭೂಷ ||
ವಿಶ್ವಪರಿಪೂರ್ಣ ರತಿರಾಜನಿರ್ದಹನ ಮಹ |
ದೈಶ್ವರ್ಯಭೋಗಪ್ರದಾತ ಮುಕ್ತಾಫಲನಿ |
ಭಶ್ವೇತವರ್ಣನಾಗೆಸೆವ ಕರುಣಾಂಭೋಧಿ ನಂದೀಶ ನೆಲಸಿರ್ಪನು ||೪೦||

ಇಂತು ೧೧ ನೆಯ ಸಂಧಿ ಸಂಪೂರ್ಣಂ.